ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಮಂಜಪ್ಪ ಮಣ್ಣಮ್ಮನವರ

ಮಾರ್ಗದರ್ಶಕರು

ಡಾ.ಸಿ.ಮಹದೇವ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩. ೨೭೬

೨೦೧೩

ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಮಂಜಪ್ಪ ಮಣ್ಣಮ್ಮನವರ

ಮಾರ್ಗದರ್ಶಕರು

ಡಾ.ಸಿ.ಮಹದೇವ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫

ಮಾರ್ಗದರ್ಶಕರ ದೃಢೀಕರಣ

ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ಮಂಜಪ್ಪ ಮಣ್ಣಮ್ಮನವರ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಸಿ.ಮಹದೇವ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 30/07/2015

ಘೋಷಣಾ ಪತ್ರ

ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನ ಎಂಬ ಸಂಪ್ರಬಂಧವನ್ನು **ಡಾ.ಸಿ.ಮಹದೇವ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸು ತ್ತಿದ್ದೇನೆ. ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಂಜಪ್ಪ ಮಣ್ಣಮ್ಮನವರ
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 30/07/2015

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಾಯ ಒಂದು

ಪ್ರಸ್ತಾವನೆ

ಭಾರತೀಯ ಸಂಸ್ಕೃತಿಯು ಬಹಳ ವೈಶಿಷ್ಟ್ಯಪೂರ್ಣವಾದದ್ದು ಉನ್ನತವಾದ ಪರಂಪರೆ ಹಾಗೂ ಸುದೀರ್ಘವಾದ ಚಾರಿತ್ರೆಯನ್ನು ಹೊಂದಿರುವ ಭಾರತ ದೇಶದ ಪ್ರತಿಯೊಂದು ಭಾಗಗಳಿಗೂ ತನ್ನದೇ ಆದ ವಿಶಿಷ್ಟ ಗುಣಲಕ್ಷಣ, ಉಜ್ವಲ, ಚಾರಿತ್ರ್ಯ ಇದ್ದು ಅವುಗಳನ್ನು ಸಮಗ್ರವಾಗಿ ಅಭ್ಯಸಿಸಲ್ಪಟ್ಟಾಗ ಮಾತ್ರ ಭಾರತದ ಸಂಸ್ಕೃತಿಯ ಸಂಪತ್ತಿನಬಗ್ಗೆ ತಿಳಿಯಪಡಿಸುತ್ತದೆ. ಅಷ್ಟೇ ಅಲ್ಲದೆ ಇಲ್ಲಿನ ಜನತೆಯ ಆಚಾರ ವಿಚಾರಗಳೂ ರೂಢಿ ಸಂಪ್ರದಾಯಗಳು, ವೇಷ ಭೂಷಣಗಳು, ತಿಂಡಿ ತಿನಿಸುಗಳು, ನಂಬಿಕೆ ಆಚರಣೆಗಳು, ಜಾತ್ರೆ ಉತ್ಸವಗಳು, ವಿಶ್ವದ ಗಮನ ಸೆಳೆದಿದ್ದು ಉತ್ತಮ ಚಾರಿತ್ರಿಕ ಹಿನ್ನೆಲೆಯುಳ್ಳ ಸುಸಂಸ್ಕೃತ ರಾಷ್ಟ್ರವಾಗಿ ಹೊರಹೊಮ್ಮಿದ್ದು ಅಂತರಾಷ್ಟ್ರಿಯ ಮಟ್ಟದಲ್ಲಿ ಗಮನ ಸೆಳೆದಿದೆ.

ಅದೇರೀತಿ ಕರ್ನಾಟಕವನ್ನು ಗಣನೆಗೆ ತೆಗೆದುಕೊಂಡಾಗ ವೈಶಿಷ್ಟ್ಯತೆಯಿಂದ ಕೂಡಿದ ನಾಡಾಗಿದ್ದು ಇಲ್ಲಿನ ಜನರು ಕನ್ನಡ ನಾಡು, ನುಡಿ, ಸಂಸ್ಕೃತಿ, ಸ್ವಾಭಿಮಾನದ ಬಗ್ಗೆ ಗೌರವ ಇದ್ದು ಜನಮನ್ನಣೆಗೆ ಪಾತ್ರರಾಗಿದ್ದಾರೆ. ಕರ್ನಾಟಕವು ಕೂಡ ಪೌರಾಣಿಕ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದ ಪ್ರಾಚೀನವಾದ ನಾಡಾಗಿದೆ. ಕರ್ನಾಟಕದಲ್ಲಿರುವ ಅನೇಕ ಪ್ರದೇಶಗಳು ಹಲವಾರು ರಾಜಮನೆತನಗಳ ಆಳ್ವಿಕೆಗೊಳಪಟ್ಟ ಇತಿಹಾಸವನ್ನು ಪುನರ್ ರಚಿಸಲು ಪೂರಕವಾದ ಆಕರ ಸಾಮಗ್ರಿಗಳು ಅತ್ಯಾವಶ್ಯಕವೆನಿಸಿವೆ. ಈ ಆಕರ ಸಾಮಗ್ರಿಗಳನ್ನು ವಿವಿಧ ಪ್ರಕಾರದಲ್ಲಿ ಸಂಗ್ರಹಿಸಿ. ಅವುಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಚರಿತ್ರೆಯ ವಿವಿಧ ಮುಖಗಳನ್ನು ಪುನರ್‌ರಚಿಸುವುದು ಸಾಮಾನ್ಯ ಸಂಶೋಧನಾ ಪ್ರಕ್ರಿಯೆಯಾಗಿದೆ. ಈ ಹಿನ್ನಲೆಯಲ್ಲಿ ರಾಷ್ಟ್ರಮಟ್ಟದ ಮತ್ತು ಪ್ರಾದೇಶಿಕ ಮಟ್ಟದ ಸಂಶೋಧನೆಗಳು ನಡೆದು ಅವುಗಳ ಸಹಾಯದಿಂದ ಅನೇಕ ಹೊಸ ಹೊಸ ಮಾಹಿತಿಗಳು ಚರಿತ್ರೆಯನ್ನು ಸೇರಿಕೊಳ್ಳುತ್ತಿವೆ. ಇದರಿಂದ ಆ ಪ್ರದೇಶಗಳು ಕೇವಲ ಇತಿಹಾಸ ಪೂರ್ವಕಾಲದ ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗಿದ್ದರೆ ಮತ್ತು ಕೆಲವು ಸಂಶೋಧನೆಗಳು ವಾಸ್ತು ಮತ್ತು ಮೂರ್ತಿಶಿಲ್ಪಕ್ಕೆ ಸೀಮಿತವಾಗಿವೆ. ಸಂಶೋಧನೆಗಳು ಶಾಸನ ಹಾಗೂ ಸಾಹಿತ್ಯಿಕ ಆಕರಗಳನ್ನು ಮುಂದಿಟ್ಟುಕೊಂಡು ಅಧ್ಯಯನ ಮಾಡಲಾಗಿದ್ದು ಇನ್ನು ಕೆಲವೊಂದು ಸಾಮಾನ್ಯರ

ಮತ್ತು ಸ್ಥಳಿಯ ಆಲೋಚನಾ ಕ್ರಮಗಳು ದಾಖಲೆಯಾಗಿವೆ. ಗುಪ್ತವಾಗಿ ಉಳಿದುಕೊಂಡಿರುವ ಚರಿತ್ರೆಯ ಸೂಕ್ಷ್ಮತೆಗಳನ್ನು ಮತ್ತು ಅಜ್ಞಾತ ಘಟನೆಗಳನ್ನು ಇತಿಹಾಸದ ಅಧ್ಯಯನದ ಚೌಕಟ್ಟಿನೊಳಗೆ ಸಂಗ್ರಹಿಸುವ ಮೂಲಕ ಹಾಗೂ ವಿವಿಧ ಘಟನೆಗಳ ಚರಿತ್ರೆಗಳನ್ನು ಕಟ್ಟಿ ರೂಪಿಸುವುದರ ಮೂಲಕ ಸಮಗ್ರ ಚರಿತ್ರೆಯನ್ನು ಕಟ್ಟಿ ಕೊಡುವ ಜವಾಬ್ದಾರಿ ಚರಿತ್ರೆಕಾರರ ಮೇಲಿದೆ.

ಒಂದು ನಿರ್ದಿಷ್ಟ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ರಚಿಸುವಾಗ ಅಲ್ಲಿನ ಸಾಮ್ರಾಜ್ಯಗಳ ನಿರ್ಮಾಣ ಅವುಗಳ ವ್ಯವಸ್ಥೆ ಭೌಗೋಳಿಕ ಪರಿಸರ ಆಯಾಕಾಲದಲ್ಲಿ ಬಿಟ್ಟು ಹೋಗಿರುವ ಪ್ರಾಚೀನ ಅವಶೇಷಗಳು ಮತ್ತು ಅಲ್ಲಿ ನೆಲೆಸಿರುವ ಜನರ ಸಾಮಾಜಿಕ, ಧಾರ್ಮಿಕ, ಆರ್ಥಿಕ ರಾಜಕೀಯ ಕೂಡು ಕೊಳ್ಳುವಿಕೆಗಳಿಂದ ಪ್ರಭಾವಿತವಾಗಿರುತ್ತದೆ. ಒಂದು ಪ್ರದೇಶದ ಸಾಂಸ್ಕೃತಿಕ ಮಹತ್ವ ತಿಳಿದುಕೊಳ್ಳಬೇಕಾದರೆ. ಅಲ್ಲಿ ದೊರೆಯುವ ಪುರಾತತ್ವ ಅವಶೇಷಗಳು ಹಾಗೂ ಎಲ್ಲ ಕಾಲಾವಧಿಯಲ್ಲಿದ್ದ ಸಮಾಜದಲ್ಲಿನ ಪ್ರಚಲಿತವಿರುವ ಐತಿಹ್ಯಗಳು, ಮೌಖಿಕ ಕಥನಗಳು, ಹಾಗೂ ಸಾಹಿತ್ಯಕ ಆಕರಗಳು ಚರಿತ್ರೆ ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಉತ್ತರ ಕರ್ನಾಟಕದ ಹೆಬ್ಬಾಗಿಲು ಆಗಿರುವ ಹಾವೇರಿ ಜಿಲ್ಲೆಯ ಏಳು ತಾಲೂಕಗಳನ್ನು ಒಳಗೊಂಡಿದೆ. ಅದರಲ್ಲಿ ಬ್ಯಾಡಗಿ ತಾಲೂಕು ಸಹ ಒಂದು. ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹಾವೇರಿ ಜಿಲ್ಲೆಯ ಭೌಗೋಳಿಕ ಲಕ್ಷಣ ವಿಶಿಷ್ಟವಾಗಿದ್ದು, ಇತ್ತ ಬಯಲು ಸೀಮೆಯೂ ಅಲ್ಲದ, ಅತ್ತ ಮಲೆನಾಡು ಪ್ರದೇಶವು ಅಲ್ಲದ ಹಾವೇರಿ ಜಿಲ್ಲೆ ಅರೆಮಲನಾಡು ಪ್ರದೇಶವಾಗಿದ್ದು ಜನಜೀವನಕ್ಕೆ ಅತ್ಯಂತ ಉಪಯುಕ್ತ ಪ್ರದೇಶವಾಗಿದೆ. ಸಾಂಸ್ಕೃತಿಕವಾಗಿ ಐತಿಹಾಸಿಕವಾಗಿ ಹಾವೇರಿ ಜಿಲ್ಲೆ ಗಮನಾರ್ಹವಾದದ್ದು. ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ ಕಾಗಿನೆಲೆ ಪರಿಸರವು ಬ್ಯಾಡಗಿ ತಾಲೂಕಿನಲ್ಲಿ ಬರುತ್ತದೆ ಬ್ಯಾಡಗಿಯಿಂದ ಸುಮಾರು ೧೫ಕಿ.ಮೀ ದೂರದಲ್ಲಿದ್ದು ಹಾವೇರಿಯಿಂದ ಸುಮಾರು ೧೪ಕಿ.ಮೀ ದೂರದಲ್ಲಿದೆ. ಹಾವೇರಿ-ಲಿಂಗಾಪುರ ರಸ್ತೆಯಲ್ಲಿರುವ ಈ ಸ್ಥಳವು ಅನೇಕ ಐತಿಹಾಸಿಕ ಅವಶೇಷಗಳಿಂದ ಪ್ರಸಿದ್ದಿಯನ್ನು ಪಡೆದಿದೆ.

ಕಾಗಿನೆಲೆ ಹೋಬಳಿಯ ೩೩ ಹಳ್ಳಿಗಳನ್ನು ಒಳಗೊಂಡಿದ್ದು ಭೌಗೋಳಿಕವಾಗಿ ಬೆಟ್ಟ, ಗುಡ್ಡ, ಕೆರೆ, ಕೆಟ್ಟೆಗಳಿಂದ ಕೂಡಿದೆ. ಕೃಷಿಗೆ ಫಲವತ್ತಾದ ಕಪ್ಪು ಮತ್ತು ಕೆಂಪು ಮಿಶ್ರಿತ ಮಣ್ಣಿನಿಂದ ಕೂಡಿರುವ ಈ ಪ್ರದೇಶದಲ್ಲಿ ಬೆಳೆಯುವ ವಿವಿಧ ಬೆಳೆಗಳು ಮಳೆಯ ಆಶ್ರಿತವಾಗಿದ್ದು ಯಾವುದೇ ರೀತಿಯ ನದಿಗಳು ಹರಿಯದಿದ್ದರೂ ಕೂಡ ಇಲ್ಲಿನ ವ್ಯವಸಾಯವು ಕೆರೆಗಳ ಮೂಲಕ, ಕೊಳವೆ ಬಾವಿಗಳ ಮೂಲಕ ಹೊಲಗಳಿಗೆ ನೀರನ್ನು ಹಾಯಿಸಿ ಬೆಳೆಗಳನ್ನು ಬೆಳೆಯುತ್ತಾರೆ ಮತ್ತು ಈ ಪ್ರದೇಶವು ಅನೇಕ ಅರಸು ಮನೆತನದ ಆಳ್ವಿಕೆಗೆ ಒಳಪಟ್ಟಿದ್ದು, ಬನವಾಸಿ ಕದಂಬರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕರು, ದೇವಗಿರಿ ಯಾದವರು, ಹೊಯ್ಸಳರು, ವಿಜಯನಗರದ ಅರಸರು ಆಳ್ವಿಕೆ ಕೈಗೊಂಡಿರುವುದಕ್ಕೆ ಅನೇಕ ಸ್ಮಾರಕ ಅವಶೇಷಗಳು ಕಂಡುಬರುತ್ತವೆ. ಅನೇಕ ಅರಸು ಮನೆತನಗಳ ಆಳ್ವಿಕೆಗೆ ಜಿಲ್ಲೆಯು ಒಳಪಟ್ಟಿತ್ತು.

ಅಧ್ಯಯನದ ಉದ್ದೇಶ

ಯಾವುದೇ ಒಂದು ಅಧ್ಯಯನ ವಿಧಾನದಲ್ಲಿ ಉದ್ದೇಶವು ಪ್ರಮುಖ ಪಾತ್ರವಹಿಸುತ್ತದೆ. ಪ್ರಸ್ತುತ ಶೀರ್ಷಿಕೆಯು "ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನವಾಗಿದೆ. ಇತಿಹಾಸದ ಪುಟಗಳಲ್ಲಿ ಅಜ್ಞಾತವಾಗಿರುವ ಕಾಗಿನಲೆ ಪರಿಸರದ ಸಾಂಸ್ಕೃತಿಕ ಇತಿಹಾಸವನ್ನು ಪ್ರಸ್ತುತ ಪ್ರೌಢ ಪ್ರಬಂಧದ ಮೂಲಕ ಬೆಳಕಿಗೆ ತರುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಹಿನ್ನಲೆಯಲ್ಲಿ ಕಾಗಿನೆಲೆ ಪರಿಸರವನ್ನು ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಒಳಪಡಿಸಿ. ಜೊತೆಗೆ ಕ್ಷೇತ್ರಕಾರ್ಯದ ಮೂಲಕ ಪ್ರಾಚೀನ ಅವಶೇಷಗಳನ್ನು ಗುರುತಿಸಿ ಅವುಗಳನ್ನು ದಾಖಲಿಸುವುದು ಮತ್ತು ಚಾರಿತ್ರಿಕ ಸಂದರ್ಭದಲ್ಲಿ ನಿರ್ಮಾಣವಾದ ಎಲ್ಲಾ ಬಗೆಯ ಸ್ಮಾರಕಗಳ ಕುರಿತು ಮತ್ತು ಜನರಿಂದ ಸಂಬಂದಪಟ್ಟ ಮಾಹಿತಿಯನ್ನು ಸಂಗ್ರಹಿಸಿ ಸ್ಥಳದ ಬಗ್ಗೆ ಇರುವ ಸ್ಥಳ ಪುರಾಣ ಐತಿಹ್ಯದಂತ ಕಥಗಳನ್ನು ಬರವಣಿಗೆಗಳ ಮೂಲಕ ನಮೂದಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಪ್ರದೇಶದ ಕುರಿತು ಗೊತ್ತಿರುವ ಮಾಹಿತಿಯನ್ನು ಪುನರ್ ಪರಿಶೀಲಿಸಿ ಹೊಸ ಮಾಹಿತಿಗಳನ್ನು ಸೇರ್ಪಡೆಮಾಡುವುದರ ಮೂಲಕ ಇದುವರೆಗೆ ಬೆಳಕಿಗೆ ಬಾರದ ಸ್ಮಾರಕ ಅವಶೇಷಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಆಚರಣೆ ಸಂಪ್ರದಾಯ ನಂಬಿಕೆಗಳು ಸೂಕ್ಷ್ಮ ಚಿತ್ರಣವನ್ನು ನೋಡುವುದರ ಮೂಲಕ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಗೆ ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಕೊಡುಗೆಗಳ ಕುರಿತು ತಿಳಿಪಡಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಸಾಮಾನ್ಯವಾಗಿ ಯಾವುದೇ ಒಂದು ಸಂಶೋಧನೆಯು ಸ್ಪಷ್ಟವಾಗಿ ಯಶಸ್ವಿಯಾಗಬೇಕಾದರೆ ಅದಕ್ಕೆ ಒಂದು ನಿರ್ದಿಷ್ಟವಾದ ಚೌಕಟ್ಟು ಅಥವಾ ವ್ಯಾಪ್ತಿ ಇರುವುದು ಅತಿ ಮುಖ್ಯವಾದದು. ಪ್ರಸ್ತುತ ಅಧ್ಯಯನದ ಶೀರ್ಷಿಕೆಯು ಕಾಗಿನೆಲೆ ಪರಿಸರಕ್ಕೆ ಸೀಮಿತವಾಗಿದ್ದರೂ ಸಹ ಅವಶ್ಯಕತೆಗನುಗುಣವಾಗಿ ಈ ಪರಿಸರದ ಸುತ್ತಮುತ್ತಲಿನ ಕೆಲವು ಚಾರಿತ್ರಿಕ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕಾಗಿನೆಲೆಯು ಹೊಬಳಿ ಪ್ರದೇಶವಾಗಿದ್ದು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಅತಿ ದೊಡ್ಡ ಹೊಬಳಿ ಗ್ರಾಮವಾಗಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೧೯.೧೫೬ ಹೇಕ್ಟರಗಳಷ್ಟಿದ್ದು ಸಮುದ್ರ ಮಟ್ಟಕ್ಕಿಂತ ೬೩೨ ಮೀಟರ್ ಎತ್ತರದ ಪ್ರದೇಶದಲ್ಲಿದೆ. ಪ್ರಸ್ತುತ ಹೋಬಳಿಯ ಪ್ರದೇಶವು ೩೬ ಹಳ್ಳಿಗಳನ್ನು ಒಳಗೊಂಡಿದ್ದು, ೭ ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದೆ. ಅವುಗಳ ಕಾಗಿನೆಲೆ ಹೇಡಿಗೂಂಡ, ಕುಮ್ಮುರು, ಚಿಕ್ಕಬಾಸರು, ತಡಸ, ಹಿರೇಹಳ್ಳಿ, ಮತ್ತೂರು ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದೆ. ಪ್ರಸ್ತುತ ಪರಿಸರವು ಅನೇಕ ಚಾರಿತ್ರಿಕ ಗ್ರಾಮಗಳನ್ನು ಒಳಗೊಂಡಿದ್ದು ಅವುಗಳ ಇತಿಹಾಸವನ್ನು ಅಥವಾ ಚರಿತ್ರಿಯನ್ನು ಕಟ್ಟಿಕೊಡಲು ಯತ್ನಿಸಲಾಗಿದೆ.

ಪ್ರಸ್ತುತ ಪರಿಸರವು ಪ್ರಾಗೈತಿಹಾಸ ಕಾಲದಿಂದಲೂ ಮಾನವನ ಆವಾಸ(ವಸತಿ) ತಾಣವಾಗಿದ್ದು.ಮಡಿಕೆಚೂರು, ಆಯುಧಗಳು, ಶಿಲಾಗೋರಿಗಳು, ಕಬ್ಬಿಣದ ಕುರುಹಗಳು ದೊರೆತಿವೆ. ಇಲ್ಲಿ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿದ್ದು ಆರಂಬಿಕ ಕಾಲದಿಂದ ವಿಜಯನಗರೋತ್ತರ ಕಾಲದವರಿಗೆ ಕದಂಬರು ,ರಾಷ್ಟ್ರಕೂಟರು, ಗಂಗರು, ಕಲ್ಯಾಣ ಚಾಲುಕ್ಯರು ಬಾದಾಮಿ ಚಾಲುಕ್ಯರು, ಹೊಯ್ಸಳರು, ಕಲಚೂರಿಗಳು, ದೇವಗಿರಿಯ ಯಾದವರು ವಿಜಯನಗರದ ಅರಸರು ಆಳ್ವಿಕೆ ನಡೆಸಿದ್ದು. ಆ ಎಲ್ಲ ಅರಸು ಮನೆತನಗಳ ಸ್ಮಾರಕ ಅವಶೇಷಗಳು ಸಾಂಸ್ಕೃತಿಕ ಸಂಗತಿಗಳು ಈ ಪರಿಸರದಲ್ಲಿ ಕಂಡುಬಂದಿದ್ದು. ಅವುಗಳ ಮೂಲಕ ಕಾಗಿನೆಲೆ ಪರಿಸರದ ಸಮಗ್ರ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ವಿಧಾನ

ಇದುವರೆಗೆ ನಡೆದಿರುವ ಅಧ್ಯಯನವನ್ನು ಗಮನದಲ್ಲಿಟ್ಟುಕೊಂಡು ಕಾಗಿನೆಲೆ ಪರಿಸರದಲ್ಲಿ ಗ್ರಾಮವಾರು ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು ಮತ್ತು ಆ ಮೂಲಕ ಪುರಾತತ್ವ ಸಂಸ್ಕೃತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕ್ರೋಡಿಕರಿಸಲಾಯಿತು. ಮುಖ್ಯವಾಗಿ ಪ್ರಾಗೈತಿಹಾಸಿಕ ಕಾಲದ ಅವಶೇಷ, ಶಾಸನ, ದೇವಾಲಯ, ಮೂರ್ತಿಶಿಲ್ಪ ಮುಂತಾದ ಆಕರಗಳ ದಾಖಲೀಕರಣ ಮತ್ತು ಛಾಯಾಚಿತ್ರಗಳನ್ನು ನಕ್ಷೆಗಳನ್ನು ಮಾಡಿಕೂಳ್ಳಲಾಗಿದೆ. ಅದರೊಂದಿಗೆ ಮೌಖಿಕ ಪರಂಪರೆ, ಪೌರಾಣಿಕ ಸಂಗತಿಗಳು, ಸ್ಥಳಿಯ ಚರಿತ್ರೆ ಮುಂತಾದವುಗಳನ್ನು ಕುರಿತಂತೆ ಮಾಹಿತಿಯನ್ನು ಸಂಗ್ರಹಿಸಲಾಯಿತು. ಧಾರ್ಮಿಕ ಸಾಮಾಜಿಕ ಜನಜೀವನದ ಬಗ್ಗೆಯೂ ಸಹ ಮಾಹಿತಿ ಸಂಗ್ರಹಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಸಂಗ್ರಹಿತ ಆಕರಗಳನ್ನು ಬಳಸಿಕೊಂಡು ವಿಷಯಾನುಕ್ರಮವಾಗಿ ಸಂಯೋಜಿಸಿ, ವಿಮರ್ಶಿಸಿ, ವಿಶ್ಲೇಷಿಸಿ ಅಂತರಶಿಸ್ತಿಯ ಅಧ್ಯಯನದ ಮೂಲಕ ಕಾಗಿನೆಲೆ ಪರಿಸರದ ಪೂರ್ಣ ಚರಿತ್ರೆಯನ್ನು ತಿಳಿಯಪಡಿಸಲಾಗಿದೆ.

ಅಧ್ಯಯನದ ಸ್ವರೂಪ

"ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನ ಎನ್ನುವ ಸಂಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದ್ದು ಆ ಮೂಲಕ ಸಂಪ್ರಬಂಧದ ರಚನಾ ಕಾರ್ಯವನ್ನು ಕೈಗೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಶಿರ್ಷಿಕೆಗೆ ಸಂಬಂಧೀಸಿದಂತೆ ಪ್ರಸ್ತಾವನೆ, ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನ ಸ್ವರೂಪವನ್ನು ಸೇರಿಸಲಾಗಿದೆ. ಹಾಗೂ ವಿಷಯಕ್ಕೆ ಪೂರಕವಾಗಿ ನಡೆದಿರುವಂತಹ ಅಧ್ಯಯನ ಸಮೀಕ್ಷೆಯನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಯನದಲ್ಲಿ ಕಾಗಿನೆಲೆ ಪರಿಸರದ ಭೌಗೋಳಿಕ ಲಕ್ಷಣಗಳು, ಬೆಟ್ಟ,ಗುಡ್ಡ,ನೆಲ,ಜಲ ಜನಸಂಖ್ಯೆ ವಾಯುಗುಣ ಮಳೆಯ ಪ್ರಮಾಣ ಅರಣ್ಯ, ಪ್ರಮುಖ ಬೆಳೆಗಳ ಕುರಿತು ಸಂಬಂಧಪಟ್ಟ

ಇಲಾಖೆಗಳಿಂದ ಅಂಕಿ ಅಂಶಗಳನ್ನು ಸಂಗ್ರಹಿಸಿ ವಿಷಯಕ್ಕೆ ಸೇರಿಸಿಕೊಳ್ಳಲಾಗಿದೆ. ಜೊತೆಗೆ ಕಾಗಿನೆಲೆಯ ಚಾರಿತ್ರೇಕ ಹಿನ್ನಲೆಯನ್ನು ಕಟ್ಟಿಕೊಡುವ ಸಲುವಾಗಿ ಕಾಗಿನೆಲೆ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳು ಅವರ ಸಂಬಂಧಗಳನ್ನು ಆರಂಭಿಕ ಕಾಲದಿಂದ ವಿಜಯನಗರೋತ್ತರ ಕಾಲದವರೆಗೆ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಎಲ್ಲ ಅಂಶಗಳನ್ನು ಇಟ್ಟುಕೊಂಡು ಕಾಗಿನೆಲೆ ಪರಿಸರ ಚಾರಿತ್ರಿಕ ಹಿನ್ನಲೆ ಕಟ್ಟಿ ಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೌಖಿಕ ಆಕರಗಳನ್ನು ಬಳಸಿಕೊಂಡಿದ್ದು ಸ್ಥಳನಾಮ, ಸ್ಥಳಪುರಾಣ, ಐತಿಹ್ಯಗಳು, ಪ್ರಾಚೀನ ಕಾಲಕ್ಕೆ ಸಂಬಂಧಪಟ್ಟ ಗ್ರಾಮಗಳ ಸ್ಥಳನಾಮ ಮತ್ತು ಸ್ಥಳ ಪುರಾಣ, ದಂತಕಥೆಗಳು, ಐತಿಹ್ಯಗಳ ಮೂಲಕ ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

ನಾಲ್ಕನೆ ಅಧ್ಯಾಯದಲ್ಲಿ ಕಾಗಿನೆಲೆ ಪರಿಸರಕ್ಕೆ ಸಂಬಂಧಪಟ್ಟಂತಂಹ ದೇವಾಲಯಗಳ ವಾಸ್ತು ರಚನೆ(ಶಾಸನೋಕ್ತ ದೇವಾಲಯಗಳ)ನಿರ್ಮಾಣದ ಕೃತಿ, ಮತ್ತು ಮೂರ್ತಿ ಶಿಲ್ಪಗಳು, ದೇವಾಲಯದ ಶೈಲಿ, ಭಿತ್ತಿ, ಅಧಿಷ್ಠಾನಗಳು, ಗೋಪುರ, ಗರ್ಭಗೃಹ, ಮೂರ್ತಿಶಿಲ್ಪಗಳು, ಶಿವ, ವಿಷ್ಣು, ಕೇಶವ, ಮಹಿಷಾಸುರ ಮರ್ದಿನಿ ಹೀಗೆ ಹಲವಾರು ಶಿಲ್ಪಗಳ ಕುರಿತು ದೇವಾಲಯದ ವಾಸ್ತುಶೈಲಿಯನ್ನು, ಅವುಗಳ ಕಾಲಮಾನ, ಅವು ಯಾವ ಮನೆತನದ ಆಳ್ವಿಕೆಗೆ ಒಳಪಟ್ಟಿದೆ ಎಂಬುದರ ಕುರಿತು ಅಧ್ಯಯನದಲ್ಲಿ ತಿಳಿಯಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ ಕಾಗಿನೆಲೆ ಪರಿಸರಕ್ಕೆ ಸಂಬಂಧಿಸಿದಂತಹ ನಂಬಿಕೆ ಮತ್ತು ಆಚರಣೆಗಳ ಒಳಗೊಂಡಿದ್ದು ಜಾತ್ರೆ, ಉತ್ಸವ, ಹಬ್ಬ ಹರಿದಿನಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡಂತಹ ಪ್ರಮುಖ ಸಂಗತಿಗಳು ಸಮೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸುವಂತಹ ಪ್ರಯತ್ನವನ್ನು ಮಾಡಲಾಗಿದೆ.

ಕೊನೆಯದಾಗಿ ಅಧ್ಯಯನಕ್ಕೆ ಪೂರಕವಾಗಿರುವ ಆಕರ ಗ್ರಂಥಗಳನ್ನು ನಕ್ಷೆಗಳನ್ನು ಛಾಯಾಚಿತ್ರ ಗಳನ್ನು ಅಧ್ಯಯನದ ಕೊನೆಯಲ್ಲಿ ಅಳವಡಿಸಿ ಕೊಳ್ಳಲಾಗಿದೆ.

ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಅಧ್ಯನದ ವಿಷಯವಾದ "ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಇತಿಹಾಸಕಾರರು, ಸಂಶೋಧಕರು ಅಧ್ಯಯನಗಳನ್ನು ನಡೆಸಿರುತ್ತಾರೆ. ಇಲ್ಲಿನ ದೇವಾಲಯ ಮೂರ್ತಿಶಿಲ್ಪ, ವೀರಗಲ್ಲು ಹಾಗೂ ಶಾಸನಗಳನ್ನು ಒಳಗೊಂಡಂತೆ ಕೆಲವು ಕಿರು ಪ್ರಬಂಧಗಳು ಲೇಖನಗಳು ಪ್ರಕಟಗೊಂಡಿರುವುದನ್ನು ಗಮನಿಸಬಹುದಾಗಿದೆ.

ಸೂರ್ಯನಾಥ ಕಾಮತ್ ಸಂಪಾದಿಸಿರುವ ಧಾರವಾಡ ಜಿಲ್ಲೆಯ ಗ್ಯಾಜಿಟಿಯರ್ (೧೯೫೫) ಎಂಬ ಗ್ರಂಥದಲ್ಲಿ ಪ್ರೇಕ್ಷಣಿಯ ಸ್ಥಳಗಳು ಎಂಬ ಶಿರ್ಷಿಕೆ ಅಡಿಯಲ್ಲಿ ಬ್ಯಾಡಗಿ ತಾಲೂಕಿನ 'ಕಾಗಿನಲೆ'

ಪ್ರದೇಶದ ಕುರಿತು ತಿಳಿಯಪಡಿಸಿದ್ದಾರೆ. ಎಂ.ಎಂ.ಕಲಬುರ್ಗಿಯವರ ಪ್ರಕಟಿಸಿರುವ 'ಧಾರವಾಡ ಜಿಲ್ಲೆಯ ಶಾಸನ ಸೂಚಿ' ಎನ್ನುವ ಗ್ರಂಥದಲ್ಲಿ ಬ್ಯಾಡಗಿ ತಾಲೂಕಿನ ಶಾಸನಗಳು ಎಂಬ ಗ್ರಂಥದಲ್ಲಿ ಕಾಗಿನಲೆ ಪರಿಸರಕ್ಕೆ ಸಂಬಂಧ ಪಟ್ಟಂತಹ ಶಾಸನಗಳನ್ನು ಉಲ್ಲೇಖಿಸಿದ್ದಾರೆ. ಇತಿಹಾಸ ದರ್ಶನ ಸಂಪುಟ ೬ ರಲ್ಲಿ ಡಾ. ಸರೋಜಿನಿ ಚವಲಾರ್ ಎಂಬುವರು ಕಾಗಿನೆಲೆ ಇನ್ನೊಂದು ಮುಖ ಎಂಬ ಲೇಖನದಲ್ಲಿ ಕಾಗಿನೆಲೆಗೆ ಕನಕದಾಸರು ಬಂದ ಬಗ್ಗೆ ಕಾಗಿನೆಲೆ ಎಂಬ ಹೆಸರು ಬರಲು ಕಾರಣ ಮತ್ತು ಜಾತ್ರೆ ಹರಕೆ ಉತ್ಸವಗಳ ಕುರಿತು ಲೇಖನದಲ್ಲಿ ಪ್ರಕಟಿಸಿದ್ದಾರೆ. ಹೊರೆಯಾಲ ದೊರೆಸ್ವಾಮಿ ಎಂಬುವರು (೧೯೯೩) "ಹಳ್ಳಿಯ ಅಧ್ಯಯನ ಕಾಗಿನೆಲೆ" ಎಂಬ ಲೇಖನವನ್ನು ಪ್ರಕಟಿಸಿರುವುದರ ಮೂಲಕ ಕಾಗಿನೆಲೆಯ ಸ್ಥಳನಾಮ ಭೌಗೋಳಿಕ ಲಕ್ಷಣಗಳು ಶಿಕ್ಷಣ ಜಾತ್ರೆ ಹಬ್ಬ ಹರಿದಿನಗಳು ಉತ್ಸವ ದೇವಾಲಯ ಮತ್ತು ಕನಕದಾಸರ ಕುರಿತು ಲೇಖನವನ್ನು ಪ್ರಕಟಪಡಿಸಿದ್ದಾರೆ. ಪ್ರೊ.ಸಿ.ಮಹದೇವ ಮತ್ತು ರಮೇಶ ನಾಯಕ ಮತ್ತು ವಾಸುದೇವನ್ ಸಿ.ಎಸ್ ಪ್ರಕಟಿಸಿರುವ "ಹಾವೇರಿ ಜಿಲ್ಲೆಯ ದೇವಾಲಯ ಕೋಶ" ಎಂಬ ಗ್ರಂಥದಲ್ಲಿ ಕಾಗಿನೆಲೆ ಪರಿಸರಕ್ಕೆ ಸಂಬಂಧಿಸುವಂತಹ ಅನೇಕ ಪುರಾತನ ಕಾಲದ ದೇವಾಲಯಗಳ ಕುರಿತು ಅವುಗಳ ವಾಸ್ತು ಶಿಲ್ಪ ಮತ್ತು ಅವುಗಳು ಯಾವ ಅರಸು ಮನೆತನಕ್ಕೆ ಸಂಬಂಧಪಟ್ಟವುಗಳ ಎಂಬುವುದರ ಸ್ಪಷ್ಟ ಉಲ್ಲೇಖವನ್ನು ತಿಳಿಯ ಪಡಿಸಿದ್ದಾರೆ. ಕೆಂಗೊಂಡ ಸುಭಾಸರವರು ಬ್ಯಾಡಗಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಶಾಸನಗಳ ಅಧ್ಯಯನ ಎಂಬ ಕೃತಿಯಲ್ಲಿ ಕಾಗಿನೆಲೆಯ ಪರಿಸರದ ಶಾಸನಗಳ ಉಲ್ಲೇಖಗಳ ಕಂಡುಬಂದಿವೆ. ಗೀತಾ ಎಸ್.ತಹಶಿಲ್ದಾರವರು ಪ್ರಕಟಿಸಿರುವ ಹಾವೇರಿ ಜಿಲ್ಲೇಯ ಸ್ಥಳನಾಮಗಳು, ಬಾಷನಾಮಗಳು ಎಂಬ ಗ್ರಂಥದಲ್ಲಿ ಸ್ಥಳನಾಮಗಳ ಉಲೇಖ ಕಂಡು ಬಂದಿದೆ ಕನಕ ಸಾಹಿತ್ಯ ಸಾಂಸ್ಕೃತಿಕ ಒಳನೋಟ ಒಂದು ಅಧ್ಯಯನ (ಗಿನ್ನಣ್ಣನವರ) ಎಂಬ ಲೇಖನದಲ್ಲಿ ಕನಕದಾಸರ ಕುರಿತು ತಿಳಿಯ ಪಡಿಸಿದ್ದಾರೆ. 'ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳು' ಸುರೇಶ ಭೀ.ಹೂಗಾರ ಎಂಬುವರ ಕೃತಿಯಲ್ಲಿ ಕಾಗಿನಲೆಯ ಕನಕದಾಸರ ಆರಾಧ್ಯದೈವ ಆದಿಕೇಶನ ನೇಲೆಬಿಡು ಆಗಿದೆ. ಮತ್ತು ಕನಕದಾಸರ ಸಮಾಧಿ, ಕೆರೆ, ದೇವಾಲಯಗಳು ಕುರಿತು ಉಲ್ಲೇಖಗೊಂಡಿವೆ. ಅಷ್ಟ ಅಲ್ಲದೇ ಹಾವೇರಿ ಜಿಲ್ಲಾ ಉತ್ಸವ ೨೦೦೭ 'ಹೆಬ್ಬಾಗಿಲು' ಎಂಬ ಗ್ರಂಥದಲ್ಲಿ ಪ್ರೊ. ಶಾಂತಕುಮಾರ ಹಾದಿಮನಿಯವರು ಕಾಗಿನೆಲೆ ಕೊಡೆಕಲ್ ಸಂಗಪ್ಪಯ್ಯ ಎಂಬ ಲೇಖನವನ್ನು ಪ್ರಕಟಿಸಿದ್ದಾರೆ ಮತ್ತು ಕನ್ನಡ ವಿಳ್ಳೈ(ಸ್ಮರಣ ಸಂಪುಟ) ಹಾವೇರಿ ಜಿಲ್ಲಾ ೩ನೇ ಕನ್ನಡ ಸಾಹಿತ್ಯ ಸಮ್ಮೇಳನ ನೆನಪಿಗಾಗಿ ಲೇಖನವನ್ನು ಕನಕದಾಸರ ಕುರಿತು ವ್ಯಕ್ತಪಡಿಸಿದ್ದಾರೆ. ಡಿಸೆಂಬರ್ ೨೦೧೨ ರಸಋಷಿ ಸ್ಮರಣೆ 'ಜನಪದ' ಎಂಬ ಮಾಸ ಪತ್ರಿಕೆಯಲ್ಲಿ ಸಂತ ಶ್ರೇಷ್ಟ ಕನಕದಾಸರು ಲೇಖನದಲ್ಲಿ ಚಿದಾನಂದ ಪಿ.ಎಂ. ಎಂಬುವರು ಕನಕದಾಸರ ಕುರಿತು ಮತ್ತು ಕಾಗಿನೆಲೆಯಲ್ಲಿ ಕಂಡು ಬರುವಂತಹ ಪ್ರಮುಖ ದೇವಾಲಯಗಳ ಉಲ್ಲೇಖವನ್ನು ಮತ್ತು ಕಾಗಿನೆಲೆಯ ಅಭಿವೃಧ್ಧಿ ಪ್ರಾಧಿಕಾರದಿಂದ ಅನೇಕ ಪುಸ್ತಕಗಳು, ಕಿರು ಹೊತ್ತಿಗೆಗಳನ್ನು ಬಿಡುಗಡೆಗೊಳಿಸಿರುವುದು ಕಂಡು ಬರುತ್ತದೆ.

ಹೀಗೆ ಪ್ರಕಟಗೊಂಡಿರುವಂತಹ ಅಧ್ಯಯನಗಳ ಆಧಾರದ ಹಿನ್ನಲೆಯಲ್ಲಿ ಮುಂದೆ ಕ್ರಮಕೈಗೊಳ್ಳಬೇಕಾದಂತಹ ಅಂಶಗಳನ್ನು ಅರಿತು ಪ್ರಸ್ತುತ ಪ್ರಬಂಧವನ್ನು ರೂಪಿಸಲು ಪ್ರಯತ್ನಿಸಲಾಗಿದೆ. ಕಾಗಿನೆಲೆ ಪರಿಸರದ ಸುತ್ತಮುತ್ತಲಿನ ಗ್ರಾಮಗಳಿಗೆ ಭೇಟಿ ನೀಡಿ ಲಭ್ಯವಿರುವಂತಹ ಆಕರಗಳನ್ನು ಪರಿಚಯಿಸಿ ಮತ್ತು ವಿಶ್ಲೇಷಿಸುವ ಮಹತ್ವದ ಕಾರ್ಯವನ್ನು ಕೈಗೊಳ್ಳಲಾಗಿದೆ.

ಅಧ್ಯಾಯ ಎರಡು

ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಎರಡು

ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

ಇತಿಹಾಸವು ಎಲ್ಲಾ ಶಾಸ್ತ್ರಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಅದರಲ್ಲೂ ಮುಖ್ಯವಾಗಿ ಭೌಗೋಳ ಶಾಸ್ತ್ರದೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದ್ದು, ಒಂದು ಪ್ರದೇಶದ ಭೌಗೋಳಿಕ ಅಂಶಗಳು ಇತಿಹಾಸ, ಇತಿಹಾಸ ರಚನೆಗೆ ಮತ್ತು ಅಧ್ಯಯನಕ್ಕೆ ಬಹುಮುಖ್ಯವಾದ ಆಕರ ಸಾಮಾಗ್ರಿಗಳಾಗಿವೆ. ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿ ಭೌಗೋಳಿಕ ಪರಿಸರದ ನೆಲೆಗಟ್ಟಿನಲ್ಲಿ ತನ್ನ ಹುಟ್ಟು ಬೆಳವಣಿಗೆ ಹಾಗೂ ಅಂತ್ಯವನ್ನು ಕಂಡುಕೊಂಡಿರುತ್ತವೆ. ಮತ್ತು ಅಲ್ಲಿನ ಜನ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಅಲ್ಲಿನ ಸಾಂಸ್ಕೃತಿಕ ಬದುಕನ್ನು ರೂಪಿಸಲು ಸಹಾಯಕಾರಿಯಾಗಿದೆ. ಮಾನವನು ಹಂತಹಂತವಾಗಿ ಬೆಳವಣಿಗೆ ಹೊಂದಿರುವುದಕ್ಕೆ ಭೌಗೋಳಿಕ ಅಂಶಗಳೇ ಪ್ರಮುಖ ಕಾರಣಗಳೆಂದರೆ ತಪ್ಪಾಗಲಾರದು. ಪ್ರಾಚೀನ ಮಾನವನು ನಾಗರೀಕತೆಯೆಡೆಗೆ ಸಾಗಿ ನದಿ ದಂಡೆಗಳ ಮೇಲೆ ತನ್ನ ಜೀವನವನ್ನು ರೂಪಿಸಿಕೊಂಡಿರುವುದನ್ನು ಗಮನಿಸಿದಾಗ ಭೌಗೋಳಿಕ ಅಂಶಗಳ ಪ್ರಾಮುಖ್ಯತೆ ಎಷ್ಟಿತ್ತು ಎಂಬುದು ತಿಳಿದುಬರುತ್ತದೆ.

ಮಾನವನು ತನ್ನ ಪರಿಸರದಿಂದ ಪ್ರಭಾವಿತನಾಗುತ್ತಾನೆ. ಪರಿಸರವನ್ನು ವಾತಾವರಣ ಅಥವಾ ಸನ್ನಿವೇಶವೆಂದು ಕರೆಯುವುದುಂಟು. ಮನುಷ್ಯ ಪ್ರಕೃತಿಯ ಮಡಿಲಲ್ಲಿ ಜೀವಿಸುತ್ತಾನೆ. ಇದು ಅವನ ಭೌಗೋಳಿಕ ಪರಿಸರ. ಈ ಪರಿಸರದಲ್ಲಿ ಅವನು ಸೇವಿಸುವ ವಾಯು ಹಾಗೂ ಆಹಾರ ದೊರಕುತ್ತದೆ. ಅವನು ಉಡುವ ಬಟ್ಟೆ ವಾಸಿಸುವ ಮನೆ ಮುಂತಾದವುಗಳಿಗೆ ಮೂಲ ವಸ್ತುಗಳು ಸಿಗುತ್ತವೆ. ಅವನು ಅನೇಕರೊಡನೆ ವ್ಯವಹರಿಸುತ್ತಾನೆ. ಉದ್ಯೋಗದಲ್ಲಿ ನಿರತನಾಗುತ್ತಾನೆ. ಸಂಪಾದಿಸುತ್ತಾನೆ. ವಸ್ತುಗಳನ್ನು ತಯಾರಿಸುತ್ತಾನೆ, ಮಾರುತ್ತಾನೆ, ಹಣ ವ್ಯವಹಾರ ಮಾಡುತ್ತಾನೆ. ಇದು ಅವನ ಆರ್ಥಿಕ ಪರಿಸರ. ಈ ಪರಿಸರದಲ್ಲಿ ಅವನ ಜೀವನಕ್ಕೆ ಅವಶ್ಯಕವಾದ ಸೌಕರ್ಯಗಳು ಹಾಗೂ ವಸ್ತುಗಳು ದೊರಕುತ್ತವೆ. ಅವನು ಇತರರೊಡನೆ ಕಲಿತು ಜೀವಿಸುತ್ತಾನೆ. ಸಂಘಸಂಸ್ಥೆಗಳ ಸದಸ್ಯನಾಗುತ್ತಾನೆ. ಓದಿ ಜ್ಞಾನ ಸಂಪಾದಿಸುತ್ತಾನೆ. ವಿವಾಹವಾಗುತ್ತಾನೆ. ಕುಟುಂಬ ಜೀವನವನ್ನು

ಸಾಗಿಸುತ್ತಾನೆ. ಇದು ಅವನ ಸಾಮಾಜಿಕ ಪರಿಸರ. ಈ ಪರಿಸರದಲ್ಲಿ ಸಂಸ್ಕೃತಿ ನಾಗರಿಕತೆಗಳ ಮೇಲೆ ಮೊದಲಾದವುಗಳೂ ರೂಪುಗೊಳ್ಳುತ್ತವೆ. ಹೀಗೆ ವ್ಯಕ್ತಿಯ ಜೀವನ ಅವನು ಜೀವಿಸುವ ಭೌಗೋಳಿಕ ಪರಿಸರದೊಂದಿಗೆ ಸಂಯೋಜನೆಯನ್ನು ಹೊಂದಿದೆ.[೧]

ಕಾಗಿನೆಲೆ ಪ್ರದೇಶವು ಬ್ಯಾಡಗಿ ತಾಲ್ಲೂಕಿನಿಂದ ನೈರುತ್ಯಕ್ಕೆ ೧೫ ಕಿ.ಮೀ. ದೂರದಲ್ಲಿದ್ದು, ಜಿಲ್ಲಾ ಕೇಂದ್ರ ಹಾವೇರಿಯಿಂದ ದಕ್ಷಿಣಕ್ಕೆ ಸುಮಾರು ೧೪ ಕಿ.ಮೀ. ದೂರದಲ್ಲಿದೆ. ಈ ಪ್ರದೇಶವು ೧೯೯೭ರ ಆಚೆಗೆ ಧಾರವಾಡ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿತ್ತು. ಭೌಗೋಳಿಕವಾಗಿ ಇದು ಅರೆಮಲೆನಾಡು ಪ್ರದೇಶವಾಗಿದ್ದು, ಈ ಭಾಗದಲ್ಲಿ ಚಾರಿತ್ರಿಕವಾಗಿ ಕದಂಬರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ವಿಜಯನಗರದ ಅರಸರು ಗಂಗರು, ದೇವಗಿರಿ ಯಾದವರು, ಮೈಸೂರು ಒಡೆಯರು ಹೀಗೆ ಹಲವಾರು ಅರಸರ ಆಳ್ವಿಕೆಗೆ ಒಳಪಟ್ಟಿದ್ದು, ಈ ಪ್ರದೇಶವು ಪ್ರಾಚೀನತೆ ಮತ್ತು ಚಾರಿತ್ರಿಕವಾಗಿ ತುಂಬಾ ಮಹತ್ವ ಪಡೆದ ಪ್ರದೇಶವಾಗಿದೆ. ಇಲ್ಲಿ ಜನರ ಜೀವನ ಶೈಲಿ ಮತ್ತು ಅಭಿವೃದ್ಧಿಯ ಪಥ ಹಾಗೂ ಇತಿಹಾಸ ಅಲ್ಲಿನ ಭೌಗೋಳಿಕ ಪರಿಸರ ನೈಸರ್ಗಿಕ ಹಿನ್ನೆಲೆಯಿಂದ ಪ್ರಭಾವಿತವಾಗಿದೆ. ಮಾನವನ ಜೀವನ ರೀತಿ, ಉಡುಗೆ-ತೊಡುಗೆ, ಆಹಾರ, ವಸತಿ, ಸಂಪ್ರದಾಯ, ನಂಬಿಕೆಗಳೆಲ್ಲವು ಈ ಪರಿಸರದ ಕೊಡುಗೆಗಳು ಆಗಿವೆ.

ಭೌಗೋಳಿಕ ಪ್ರದೇಶ

ಪ್ರಸ್ತುತ ಕಾಗಿನೆಲೆ ಪ್ರದೇಶದ ಭೌಗೋಳಿಕ ವಿಸ್ತೀರ್ಣವು ೧೯.೧೫೬ ಹೆಕ್ಟೆರುಗಳಿದ್ದು, ಇದು ೭೫.೧೫ ರಿಂದ ೭೫.೩೬ ರಷ್ಟು ಪೂರ್ವ ರೇಖಾಂಶವನ್ನು ಹೊಂದಿದ್ದು, ೧೪.೩೫ ರಿಂದ ೧೪.೩೭ರಷ್ಟು ಉತ್ತರ ಅಕ್ಷಾಂಶಗಳ ನಡುವೆ ನೆಲೆಸಿದೆ. ಇದು ಸಮುದ್ರ ಮಟ್ಟದಿಂದ ೬೩೨ ಮೀಟರ್ ಎತ್ತರದ ಪ್ರದೇಶದಲ್ಲಿ ಕಂಡುಬಂದಿದೆ. ಕಾಗಿನೆಲೆ ಪ್ರದೇಶದ ಪೂರ್ವಕ್ಕೆ ಬ್ಯಾಡಗಿ, ಪಶ್ಚಿಮಕ್ಕೆ ತಿಳವಳ್ಳಿ, ಉತ್ತರಕ್ಕೆ ಹಿರೆಕೆರೂರ, ದಕ್ಷಿಣಕ್ಕೆ ಹಾವೇರಿ, ಸುತ್ತುವರಿಯಲ್ಪಟ್ಟಿದ್ದು, ಕಾಗಿನೆಲೆಯ ವಾಯುವ್ಯಭಾಗಕ್ಕೆ ಕಬ್ಬೂರ ಆಗ್ನೇಯಕ್ಕೆ ರಟ್ಟಹಳ್ಳಿ, ನೈರುತ್ಯಕ್ಕೆ ಮೊಟೇಬೆನ್ನೂರ ಹಾಗೂ ಈಶಾನ್ಯಕ್ಕೆ ಸಾತೆನಹಳ್ಳಿ ಭಾಗಗಳಿಂದ ಸುತ್ತುವರಿಯಲ್ಪಟ್ಟಿದೆ. ಕಾಗಿನೆಲೆ ಹೋಬಳಿ ಪ್ರದೇಶವು ೭ ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದ್ದು, ಒಟ್ಟು ೩೩ ಹಳ್ಳಿಗಳನ್ನು ಒಳಗೊಂಡಿದೆ. ಹಾಗೂ ೨೦೧೧ರ ಜನಗಣತಿಯ ಪ್ರಕಾರ ಈ ಭಾಗದ ಒಟ್ಟು ಜನಸಂಖ್ಯೆ ೫೨೭೮ ಇದ್ದು ಅದರಲ್ಲಿ ಪುರುಷರ ಸಂಖ್ಯೆ ೨೮೦೬ ಮತ್ತು ಮಹಿಳೆಯರ ಸಂಖ್ಯೆ ೨೪೭೨ಗಳಷ್ಟನ್ನು ಒಳಗೊಂಡಿದೆ.

ಭೂಸ್ವರೂಪ

ಉತ್ತರ ಕರ್ನಾಟಕದ ಹೆಬ್ಬಾಗಿಲು ಆಗಿರುವ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕಾಗಿನೆಲೆ ಪ್ರದೇಶವು ಅರೆಮಲೆನಾಡು ಪ್ರದೇಶವಾಗಿದ್ದು, ಸುತ್ತಮುತ್ತಲು ಕೆಲವೊಂದು ನೈಸರ್ಗಿಕ ಬೆಟ್ಟಗುಡ್ಡಗಳನ್ನು ಒಳಗೊಂಡಿದೆ. ಈ ಪರಿಸರದಲ್ಲಿ ಎತ್ತರವಾದ ಗುಡ್ಡವೆಂದರೆ ಕಬ್ಬೂರ ಗುಡ್ಡವಿದ್ದು,

ಇದು ಹಾವೇರಿ ತಾಲೂಕಿಗೆ ಸೇರುತ್ತದೆ. ಗುಡ್ಡದ ಮೇಲೆ ದೇವಾಲಯವಿರುವುದು ಕಂಡುಬರುತ್ತದೆ ಮತ್ತು ಈ ಪರಿಸರವು ಸ್ವಲ್ಪ ಭಾಗ ಸಮತಟ್ಟಾಗಿದ್ದು ಅಲ್ಲಲ್ಲಿ ಏರು–ತಗ್ಗುಗಳಿಂದ ಕೂಡಿದ ಭೂಭಾಗವನ್ನು ಒಳಗೊಂಡಿದೆ. ಕೆಂಪು ಮಣ್ಣು, ಮಸಾರಿ ಮಣ್ಣು, ಕಪ್ಪು+ಕೆಂಪು ಮಿಶ್ರಿತ ಮಣ್ಣು, ವ್ಯವಸಾಯಕ್ಕೆ ಯೋಗ್ಯವಾದಂತಹ ಫಲವತ್ತಾದ ಭೂಮಿಯನ್ನು ಒಳಗೊಂಡಿದೆ.

ವಾಯುಗುಣ ಮತ್ತು ಮಳೆ

ಪ್ರಸ್ತುತ ಪರಿಸರದ ವಾಯುಗುಣವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣ ಹೊಂದಿದ್ದು, ಡಿಸೆಂಬರ್‌ನಿಂದ ಫೆಬ್ರವರಿಯ ತಿಂಗಳವರೆಗೆ ಹೆಚ್ಚು ಚಳಿಗಾಲ ಕಂಡುಬರುತ್ತದೆ. ಏಕೆಂದರೆ ಗಾಳಿಯಲ್ಲಿ ತೇವಾಂಶದ ಮಟ್ಟ ಹೆಚ್ಚಿರುತ್ತದೆ. ಇಲ್ಲಿನ ದೈನಂದಿನ ಒಟ್ಟಾರೆ ಉಷ್ಣಾಂಶ ೩೭.೩ ಸೆಲ್ಸಿಯಸ್ ಗರಿಷ್ಠ ಉಷ್ಣತೆಯನ್ನು ಈ ಪ್ರದೇಶವು ಒಳಗೊಂಡಿದ್ದು, ನೈರುತ್ಯ ಮಾನ್ಸೂನ್ ಕಾಲದಲ್ಲಿ ಅಂದರೆ ಜೂನ್‌ದಿಂದ ಸೆಪ್ಟೆಂಬರ್‌ವರೆಗೆ ೧೨೫.೯ ಮೀ.ಮೀ. ಅತಿ ಹೆಚ್ಚು ಮಳೆಯ ಪ್ರಮಾಣ ಕಂಡುಬರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳ ಕೊನೆಯಲ್ಲಿ ಆಗಾಗ್ಗೆ ಗುಡುಗಿನಿಂದ ಕೂಡಿದ ಮಳೆಯು ಬೀಳುವುದುಂಟು. ಈ ಕಾಲಾವಧಿಯನ್ನು ಬೇಸಿಗೆ ಕಾಲ ಎಂದು ಕರೆಯುತ್ತಾರೆ. ಪ್ರಸ್ತುತ ಪರಿಸರ ಸರಾಸರಿ ಮಳೆಯ ಪ್ರಮಾಣದ ಶೇ.೬.೫%ರಷ್ಟು ಮಳೆಯನ್ನು ಈ ಪ್ರದೇಶವು ಪಡೆದುಕೊಳ್ಳುತ್ತದೆ. ಈ ಋತುಮಾನಗಳನ್ನು ಮಳೆಗಾಲ ಎಂದು ಕರೆಯಲಾಗುತ್ತದೆ.

ವ್ಯವಸಾಯ ಮತ್ತು ಪ್ರಮುಖ ಬೆಳೆಗಳು

ಪ್ರಸ್ತುತ ಪರಿಸರದ ಮತ್ತು ಜಿಲ್ಲೆಯ ಪ್ರಮುಖ ಕಸುಬು ವ್ಯವಸಾಯವಾಗಿದ್ದು, ಬ್ಯಾಡಗಿ ತಾಲೂಕಿನ ಭೂ ಪ್ರದೇಶವು. ಕೆಲವು ಸಣ್ಣ ಪುಟ್ಟ ಗುಡ್ಡಗಳನ್ನು ಬಿಟ್ಟರೆ ಉಳಿದಂತಹ ಎಲ್ಲಾ ಭಾಗವು ಸಮತಟ್ಟಾದ ಪ್ರದೇಶವಾಗಿದೆ. ಇಲ್ಲಿ ಎರೆಮಣ್ಣಿನ ಭೂಮಿ ಫಲವತ್ತಾಗಿದ್ದು ಬೇಸಾಯಕ್ಕೆ ಅನುಕೂಲಕರವಾಗಿದೆ. ಬೇಸಾಯವು ಮಳೆಯನ್ನು ಅವಲಂಬಿಸಿದ್ದು ಇಲ್ಲಿ ಪ್ರಮುಖವಾದಂತಹ ಬೆಳೆಗಳೆಂದರೆ ಬ್ಯಾಡಗಿ ಮೆಣಸಿನಕಾಯಿ ಪ್ರಸಿದ್ಧಿಯನ್ನು ಪಡೆದಿದೆ. ಜೊತೆಗೆ ಬಿಳಿಜೋಳ, ಹತ್ತಿ, ಶೇಂಗಾ ಮತ್ತು ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ. ಜೊತೆಗೆ ಭತ್ತ, ರಾಗಿ, ಜೋಳ, ಮೆಕ್ಕೆಜೋಳ ಇಲ್ಲಿನ ಪ್ರಮುಖ ಬೆಳೆಗಳಾಗಿದ್ದು, ತೋಟಗಳಲ್ಲಿ ಪಪ್ಪಾಯಿ, ಬಾಳೆ, ಮಾವು, ಚಿಕ್ಕು, ಪೇರಲಾ ಹೀಗೆ ಅನೇಕ ಹಣ್ಣುಗಳನ್ನು ಇಲ್ಲಿನ ಪರಿಸರದಲ್ಲಿ ಬೆಳೆಯುವುದು ಕಂಡುಬರುತ್ತದೆ.

ಅರಣ್ಯ ಮತ್ತು ಸಸ್ಯಸಂಪತ್ತು

ಈ ಪರಿಸರದ ಭಾಗದಲ್ಲಿ ಗಟ್ಟಿಮುಟ್ಟಾದ ಅರಣ್ಯ ಉತ್ಪನಗಳು ಮತ್ತು ನದಿ ನೀರಿನಂತಹ ಸಂಪನ್ಮೂಲಗಳು ಹೇರಳವಾಗಿ ಕಂಡುಬರುವುದಿಲ್ಲ. ಏಕೆಂದರೆ ಇದೊಂದು ಹಳ್ಳಿಗಾಡಿನ ಮಾನವ ನಿರ್ಮಿತ ವಸತಿ ಪ್ರದೇಶಗಳಿಂದ ಕೂಡಿದ ಪ್ರದೇಶವಾಗಿದ್ದರಿಂದ ಹೇರಳವಾಗಿ ಸಸ್ಯಸಂಪತ್ತು ಕಂಡುಬರುವುದಿಲ್ಲ. ಈ ಪರಿಸರಕ್ಕೆ ಸಂಬಂಧದಂತೆ ಒಟ್ಟು ಅರಣ್ಯ ಭೂಮಿಯು ೩೭೨

ಹೆ.ಪ್ರದೇಶ ಅರಣ್ಯ ಭೂಮಿಯನ್ನು ಒಳಗೊಂಡಿದೆ. ಇಲ್ಲಿ ಕರಡಿಗಳು, ತೋಳ, ಜಿಂಕೆ, ನರಿ, ಮೊಲ, ನವಿಲು, ಹೀಗೆ ಮುಂತಾದ ಪ್ರಾಣಿ ಪಕ್ಷಿಗಳು ಕಂಡುಬರುತ್ತದೆ. ಬೇವಿನ ಮರ, ಗಂಧದ ಮರ, ಸಾಗುವಾನಿ ಮರ, ಬೀಟೆ, ಆಲದಮರ, ಹುಣಸೆ, ಈಚಲು ಇನ್ನು ಅನೇಕ ಗಿಡ ಮರಗಳು ಪರಿಸರದಲ್ಲಿ ಕಂಡುಬಂದಿದೆ.

ಜಲಸಂಪತ್ತು

ಪ್ರಸ್ತುತ ಪ್ರದೇಶವು ಅರೆ ಮಲೆನಾಡು ಪ್ರದೇಶವಾಗಿದ್ದರಿಂದ ಇಲ್ಲಿನ ಪ್ರಮುಖ ಜಲಸಂಪನ್ಮೂಲಗಳಾದ ಕೆರೆಗಳು, ಬಾವಿಗಳು, ಕೊಳವೆ ಬಾವಿಗಳು ಪ್ರಾಚೀನ ಕಾಲದಿಂದಲೂ ವ್ಯವಸಾಯಕ್ಕೆ ಮತ್ತು ಜನವಸತಿಗೆ ನೀರಿನ ಆಸರೆಯಾಗಿ ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ. ಈ ಪರಿಸದಲ್ಲಿ ಯಾವುದೇ ರೀತಿಯ ನದಿಗಳಾಗಲೀ ಕಾಲುವೆಗಳಾಗಲೀ ಕಂಡುಬಂದಿಲ್ಲ. ಹೀಗಾಗಿ ಕೃಷಿಗೆ ಕೆರೆಗಳು, ಕಾಲುವೆ ಬಾವಿಗಳ ಮೂಲಕ ಇಂದಿಗೂ ನೀರನ್ನು ಉಪಯೋಗಿಸುತ್ತಿರುವುದು ಕಂಡುಬರುತ್ತದೆ. ಪ್ರಸ್ತುತ ಪರಿಸರದ ಪ್ರಮುಖ ಕೆರೆಗಳು ಕಾಗಿನೆಲೆ ಕೆರೆ, ಚಿಕ್ಕಬಾಸೂರು ಕೆರೆ, ಮತ್ತೂರ ಕೆರೆ ಮುಂತಾದವುಗಳು ಕಂಡುಬಂದಿವೆ.[೨]

ಪ್ರಾಗಿತಿಹಾಸ

ಮಾನವನು ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಆ ಪ್ರದೇಶದಲ್ಲಿ ದೊರೆಯುವ ಪ್ರಾಚೀನ ಅವಶೇಷಗಳಿಂದ ತಿಳಿಯಬಹುದಾಗಿದೆ. ಮಾನವನು ಲಿಖಿತ ಆಧಾರಗಳನ್ನು ಸೃಷ್ಟಿಸುವುದಕ್ಕಿಂತ ಪೂರ್ವದ ಕಾಲವನ್ನು ಪ್ರಾಗಿತಿಹಾಸ ಕಾಲ ಎಂದು ಕರೆಯಲಾಗುತ್ತದೆ. ಈ ಹಂತವು ಮಾನವನ ಇತಿಹಾಸದಲ್ಲಿಯ ಅತ್ಯಂತ ಸುದೀರ್ಘವಾದದ್ದಾಗಿದೆ. ಹೀಗಾಗಿ ಇದನ್ನು ಅರಿಯಬೇಕಾದರೆ ಆದಿ ಮಾನವನು ಬಳಸಿ ಬಿಟ್ಟು ಹೋದ ಶಿಲಾ ಉಪಕರಣಗಳು ಪ್ರಮುಖ ಆಧಾರಗಳಾಗಿದ್ದು, ಅವುಗಳು ಪ್ರಾಗಿತಿಹಾಸ ಸಂಸ್ಕೃತಿಯ ಹೆಗ್ಗುರುತುಗಳಾಗಿವೆ. ಗವಿ, ಕಲ್ಲಾಸರೆ, ಕಣಿವೆ, ನದಿ, ಹಳ್ಳಿಕೊಳ್ಳಗಳ ದಂಡೆಗಳನ್ನೊಳಗೊಂಡ ಅಲೆಮಾರಿಯಾಗಿ ಜೀವಿಸುತ್ತಿದ್ದ ಮಾನವ ವಿವಿಧ ಬಗೆಯ ಕಲ್ಲಿನ ಆಯುಧಗಳ ತಯಾರಿಕೆಗೆ ಮುಂದಾದನು. ಹೀಗೆ ಹಂತಹಂತವಾಗಿ ಮಾನವನು ಬೆಳೆಯಲಾರಂಭಿಸಿದನು.

ಈ ಶಿಲಾಯುಧಗಳ ಸ್ವರೂಪ, ಪಾತ್ರ, ಉತ್ಪಾದನೆ ಮತ್ತು ವಿನ್ಯಾಸ ಹಾಗೂ ಉಪಯುಕ್ತತೆಯನ್ನು ಆಧರಿಸಿ ಪ್ರಾಗಿತಿಹಾಸ ಕಾಲವನ್ನು ಮೂರು ರೀತಿಯಲ್ಲಿ ವಿಂಗಡಿಸಲಾಗಿದೆ. ಅವುಗಳು

೧. ಹಳೆಯ ಶಿಲಾಯುಗ

೨. ಮಧ್ಯ ಶಿಲಾಯುಗ(ಸೂಕ್ಷ್ಮ ಶಿಲಾಯುಗ)

೩. ನವ ಶಿಲಾಯುಗ

ಎಂದು ಮೂರು ಬಗೆಯಲ್ಲಿ ವಿಂಗಡಿಸಲಾಗಿದೆ. ಹೀಗೆ ಶಿಲೋಪಕರಣಗಳ ಜೊತೆ ಜೊತೆಯಲ್ಲಿಯೇ ಮಾನವನಿಗೆ ಲೋಹ, ತಂತ್ರಜ್ಞಾನದ ಪರಿಚಯವು ಆಯಿತು. ಇದು ಮಾನವನ ಜೀವನಕ್ಕೆ ಹೊಸ ರೂಪವನ್ನು ನೀಡಿತೆನ್ನಬಹುದು. ಲೋಹ ಪರಿಚಯವಾದ ಹಂತವನ್ನೇ ಶಿಲಾತಾಮ್ರಯುಗ ಮತ್ತು ಕಬ್ಬಿಣದ ಯುಗವೆಂದು ವಿಂಗಡಿಸಿದ್ದು, ಇವುಗಳು ಮಾನವನ ಮುಂದಿನ ಹಂತಗಳಾಗಿವೆ.

೧. ಹಳೆಯ ಶಿಲಾಯುಗ

ಶಿಲಾಯುಗ ಸಂಸ್ಕೃತಿಯ ಮೊದಲ ಹಂತವೇ ಹಳೆಯ ಶಿಲಾಯುಗವಾಗಿದ್ದು, ಇದರ ಬಗ್ಗೆ ಕರ್ನಾಟಕದಲ್ಲಿ ವಿಸ್ತೃತವಾದ ಅಧ್ಯಯನವನ್ನು ಮಾಡಲಾಗಿದೆ. ಕಾವೇರಿ, ತುಂಗಭದ್ರಾ, ಕೃಷ್ಣ ಮತ್ತು ಅವುಗಳ ಉಪನದಿಗಳಲ್ಲಿ ಈ ಸಂಸ್ಕೃತಿಯ ಪ್ರಮುಖ ಜನವಸತಿ ಪ್ರದೇಶಗಳಾಗಿವೆ. ಈ ಸಂಸ್ಕೃತಿಯನ್ನು ಮತ್ತೇ ೩ ಹಂತಗಳಾಗಿ ವಿಂಗಡಿಸಬಹುದಾಗಿದ್ದು, ೧. ಅದಿ ಹಳೆಯ ಶಿಲಾಯುಗ, ೨. ಮಧ್ಯ ಹಳೆಯ ಶಿಲಾಯುಗ, ೩. ಅಂತ್ಯ ಹಳೆಯ ಶಿಲಾಯುಗ ಎಂದು ವಿಂಗಡಿಸಲಾಗಿದೆ. ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಮೊಟ್ಟಮೊದಲಿಗೆ ರಾಬರ್ಟ್ ಬ್ರೂಸ್ ಫುಟ್‌ರವರು ಪತ್ತೆ ಹಚ್ಚಿದ್ದಾರೆ. ಇಲ್ಲಿನ ಉಪಕರಣಗಳಲ್ಲಿ ಹೆಚ್ಚಾಗಿ ಅಶ್ಯೂಲ್ ಮಾದರಿಯಲ್ಲಿವೆ. ನೆಳುಗತ್ತಿ, ಕೈಗೊಡಲಿ, ಚಕ್ರ, ಸಂಕೋಲೆಯ ಪ್ರಮುಖ ಆಯುಧೋಪಕರಣಗಳು[೨] ಮಧ್ಯಹಳೆಯ ಶಿಲಾಯುಗ ಸಂಸ್ಕೃತಿ ಕರ್ನಾಟಕದಲ್ಲಿ ಇರುವ ಬಗೆಗೆ ೧೯೫೭ರಲ್ಲಿ ಆರ್.ಡಿ.ಬ್ಯಾನರ್ಜಿಯವರು ಗುರುತಿಸಿದ್ದಾರೆ. ಘಟಪ್ರಭಾ, ಮಲಪ್ರಭಾ, ಕೃಷ್ಣನದಿ, ದೋಣಿಕಳ್ಳ, ಮಲೆನಾಡ ಭಾಗಗಳಲ್ಲಿ ನೆಲೆಗಳು ಕಂಡುಬಂದಿವೆ. ಅಂತ್ಯಹಳೆಯ ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಪ್ರಪ್ರಥಮವಾಗಿ ೧೯೬೯ರಲ್ಲಿ ಸಾಲ್ವಿಡಗಿಯಲ್ಲಿ ಅ. ಸುಂದರ ಅವರು ಗುರುತಿಸಿದ್ದಾರೆ.

ಹೀಗೆ ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಕಾಗಿನೆಲೆ ಪರಿಸರದಲ್ಲಿ ಯಾವುದೇ ರೀತಿಯ ಹಳೆ ಶಿಲಾಯುಗದ ಸಂಸ್ಕೃತಿಯ ನೆಲೆಗಳು ಕಂಡುಬಂದಿರುವುದಿಲ್ಲ.

೨. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಹಳೆಯ ಶಿಲಾಯುಗ ಮತ್ತು ನವಶಿಲಾಯುಗದ ಸಂಸ್ಕೃತಿಯ ನಡುವಿನ ಹಂತವೇ ಸೂಕ್ಷ್ಮಶಿಲಾಯುಗವಾಗಿದೆ. ಇದು ಹಳೆಯ ಶಿಲಾಯುಗ ಸಂಸ್ಕೃತಿಗಿಂತಲೂ ಕಡಿಮೆ ಅವಧಿಯದ್ದಾಗಿದ್ದರು, ಇದು ಸಂಸ್ಕೃತಿಯವಾಗಿ ಮುನ್ನಡೆದಿರುವುದು ಗಮನಾರ್ಹವಾಗಿದೆ. ಮಾನವನು ಬೇಟೆಯಾಡುವ, ಮೀನು ಹಿಡಿಯುವ, ಆಹಾರ ಸಂಗ್ರಹಿಸುವ ಮತ್ತು ವ್ಯವಸಾಯದ ಕಾರ್ಯದಲ್ಲಿ ಕಾರ್ಯೋನ್ಮುಖವಾಗುವ ಒಂದು ವೈವಿಧ್ಯಮಯವಾದ ಸಂಸ್ಕೃತಿಯಾಗಿದೆ. ಅದೇ

ಶಿಲೆಗಳಿಂದ ತಯಾರಿಸಿದ ಸೂಕ್ಷ್ಮವಾದ ಆಯುಧಗಳನ್ನು ಮಾನವ ತನ್ನ ಉಪಕರಣಗಳನ್ನಾಗಿ ಬಳಸಿದ್ದರಿಂದ ಸೂಕ್ಷ್ಮಶಿಲಾಯುಗ ಎಂದು ಕರೆಯಲಾಗಿದೆ. ಆದರೆ ಈ ಸಂಸ್ಕೃತಿಯ ನೆಲೆಗಳು ಕಾಗಿನೆಲೆ ಪರಿಸರದಲ್ಲಿ ಯಾವುದೇ ರೀತಿಯ ಕುರುಹುಗಳು ಕಂಡುಬಂದಿಲ್ಲ.

೩. ನವಶಿಲಾಯುಗ

ಈ ಹಂತವು ಶಿಲಾಸಂಸ್ಕೃತಿಯ ಕೊನೆಯ ಹಂತವಾಗಿದ್ದು ಮಾನವನ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಕಾಲಘಟ್ಟವಾಗಿದೆ. ಈ ಕಾಲದಲ್ಲಿ ಮಾನವ ತನ್ನ ಅಲೆಮಾರಿ ಜೀವನವನ್ನು ತೊರೆದು, ಒಂದೆಡೆ ನೆಲೆ ನಿಲ್ಲಲು ಪ್ರಾರಂಭಿಸಿದ. ಉಜ್ಜಿ ನಯಗೊಳಿಸಿದ ಹರಿತವಾದ, ಶಿಲಾ ಉಪಕರಣಗಳನ್ನು ಬಳಸತೊಡಗಿದ. ಕೃಷಿ ಚಟುವಟಿಕೆ ಪ್ರಾರಂಭಿಸಿದ. ಹೀಗೆ ಹಲವು ಬಗೆಯ ಸುಧಾರಣೆಗಳನ್ನು ಕಂಡುಬಂದಿದ್ದರಿಂದ ಈ ಹಂತವನ್ನು 'ನವಶಿಲಾಯುಗ ಕ್ರಾಂತಿ' ಸಂಸ್ಕೃತಿ ಎಂದು ಬಣ್ಣಿಸಿದ್ದಾರೆ. ಪ್ರಸ್ತುತ ಕಾಗಿನೆಲೆ ಪರಿಸರದಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ಯಾವುದೇ ನೆಲೆಗಳು ಪರಿಸರದಲ್ಲಿ ಕಂಡುಬರುವುದಿಲ್ಲ.

೪. ಬೃಹತ್ ಶಿಲಾಯುಗ ಪದ್ಧತಿ ಅಥವಾ ತಾಮ್ರ ಶಿಲಾಯುಗ ಸಂಸ್ಕೃತಿ

ಶಿಲಾಸಂಸ್ಕೃತಿಯ ಮುಂದಿನ ಹಂತವೇ ಬೃಹತ್ ಶಿಲಾಯುಗ ಅಥವಾ ತಾಮ್ರಶಿಲಾಯುಗ ಸಂಸ್ಕೃತಿ ಎಂದು ಕರೆಯುವರು. ಕಲ್ಲನ್ನು ಬಳಸಿ ವಿವಿಧ ಮಾದರಿಯ ಬೃಹತ್ ಗಾತ್ರದ ಗೋರಿಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು 'ಬೃಹತ್ ಶಿಲಾಯುಗ' ಎಂದು ಕರೆಯುತ್ತಾರೆ. ಈ ಹಂತದಲ್ಲಿ ಮೊದಲು ಮಾನವನಿಗೆ ಕಬ್ಬಿಣದ ಪರಿಚಯವಾಗಿ ಮುಂದೆ ಅವನನ್ನು ಅಭಿವೃದ್ಧಿಯತ್ತ ಕೊಂಡೊಯಿತು. ಹಾಗಾಗಿ ಈ ಯುಗವನ್ನು ಕಬ್ಬಿಣಯುಗ ಎಂತಲೂ ಕರೆಯುವರು.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕಾಗಿನೆಲೆ ಪರಿಸರದಲ್ಲಿ ಕೆಲವು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ಕಂಡುಬಂದಿವೆ. ಆದರೆ ಅವುಗಳು ಕುಮ್ಮೂರಿನಲ್ಲಿ ೧೯೫೮–೫೯ರಲ್ಲಿ ಈ ನೆಲೆಯನ್ನು ಪತ್ತೆಹಚ್ಚಿದ್ದಾರೆ. ಇದೊಂದು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿದೆ. ಪ್ರಸ್ತುತ ಪರಿಸರದಲ್ಲಿ ಇನ್ನೊಂದು ಬೃಹತ್ ಶಿಲಾಯುಗಕ್ಕೆ ಸಂಬಂಧಪಟ್ಟ ಗೋರಿ ನೆಲೆಯನ್ನು ಪತ್ತೆಹಚ್ಚಿದ್ದಾರೆ. ಅದುವೇ ಕೆರೋಡಿ(ಕೆರವಡಿ) ಇದು ಗೋರಿ ನೆಲೆಯಾಗಿದ್ದು, ತಡಸದಲ್ಲಿ ಶಿಲಾಸಂಸ್ಕೃತಿಯ ನೆಲೆಗಳು ಕಂಡುಬಂದಿದೆ. ಈ ನೆಲೆಗಳಲ್ಲಿ ಶಿಲಾಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ.[೪]

ಈ ರೀತಿಯಾಗಿ ಶಿಲಾಯುಗದ ಸಂಸ್ಕೃತಿಗೆ ಸಂಬಂಧಪಟ್ಟಂತೆ ಕೆಲವೊಂದು ಬೃಹತ್ ಶಿಲಾನೆಲೆಗಳು ಕಾಗಿನೆಲೆ ಪರಿಸರದ ವ್ಯಾಪ್ತಿಯಲ್ಲಿ ಕಂಡುಬಂದಿರುವುದನ್ನು ಕಾಣಬಹುದಾಗಿದೆ.

ಚಾರಿತ್ರಿಕ ಹಿನ್ನೆಲೆ

ಕರ್ನಾಟಕದಲ್ಲಿ ಚಾರಿತ್ರಿಕ ಕಾಲ ಕ್ರಿ.ಪೂ.೪ ಮತ್ತು ೩ನೇಯ ಶತಮಾನಗಳಿಂದ ಆರಂಭವಾಗುತ್ತದೆ. ಹೀಗಾಗಿ ಕಾಗಿನೆಲೆ ಪರಿಸರವು ಕೂಡ ಪ್ರಾಚೀನ ಕಾಲದಿಂದಲೂ ವಿವಿಧ ಅರಸು ಮನೆತನದ ಆಳ್ವಿಕೆಗೆ ಒಳಪಟ್ಟಿರುವುದನ್ನು ಈ ಪ್ರದೇಶದಲ್ಲಿ ದೊರೆತಿರುವ ಹಲವಾರು ಶಾಸನಗಳಿಂದ ತಿಳಿಯಬಹುದಾಗಿದೆ. ಅಂತಹ ಕೆಲವೊಂದು ಅರಸು ಮನೆತನಗಳ ಇತಿಹಾಸವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಬನವಾಸಿ ಕದಂಬರು

ಶಾತವಾಹನರ ನಂತರ ಕದಂಬರು ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಉತ್ತರ ಕರ್ನಾಟಕದ ವಾಯುವ್ಯ ಭಾಗದಲ್ಲಿ ಪ್ರಪ್ರಥಮವಾಗಿ ಪ್ರಬಲ ಸ್ವತಂತ್ರ ಸ್ಥಳೀಯ ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಬನವಾಸಿ ಕದಂಬರಿಗೆ ಸಲ್ಲುತ್ತದೆ.[೫] ಇದರ ಸ್ಥಾಪಕ ಮಯೂರಶರ್ಮ(ವರ್ಮ) ಶಿವಮೊಗ್ಗ ಜಿಲ್ಲೆಯ ತಾಳಗುಂದ ಅಗ್ರಹಾರದ ಬ್ರಾಹ್ಮಣನಾದ ಈತನು ಪಲ್ಲವ ರಾಜಧಾನಿ ಕಾಂಚಿ ಘಟಿಕಾ ಸ್ಥಾನಕ್ಕೆ ಹೆಚ್ಚಿನ ಶಿಕ್ಷಣಕ್ಕಾಗಿ ತೆರಳಿರಲು ಅಲ್ಲಿ ಅವಮಾನಿತನಾಗಿ ಬಂಡೆದ್ದು ಪ್ರಥಮ ಕನ್ನಡ ಮೂಲದ ರಾಜವಂಶವನ್ನು ಸ್ಥಾಪಿಸಿ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ.

ಕಾಗಿನೆಲೆ ಹೋಬಳಿಯಲ್ಲಿ ಕದಂಬರ ರಾಜಕೀಯ ಇತಿಹಾಸದ ಬಗ್ಗೆ ತಿಳಿಯುವಾಗ ಮಯೂರಶರ್ಮನ ನಂತರ ಬಂದ ಕೊಂಗವರ್ಮ ಅವರ ಮಗ ಭಾಗೀರಥ ನಂತರ ರಘ ಇವರುಗಳು ಬನವಾಸಿಯಿಂದ ಆಳ್ವಿಕೆ ಮಾಡಿದರು. ಈ ಕಾಲದಲ್ಲಿ ಇವರಿಗೆ ಪಲ್ಲವರಿಂದಲೂ ಅನ್ಯಶತ್ರುಗಳಿಂದಲೂ ತೊಂದರೆಯಾಗಿದ್ದರು ಅದನ್ನು ಪ್ರತಿಭಟಿಸಿ ನಿಲ್ಲುವಲ್ಲಿ ಸಮರ್ಥರಾದರು. ತನ್ನ ಶತ್ರುಗಳನ್ನು ಸೋಲಿಸಿ ತನ್ನ ರಾಜ್ಯವನ್ನು ಶತ್ರುಗಳಿಂದ ಮುಕ್ತಗೊಳಿಸಿದನೆಂದು ಹೇಳಿದೆ. ಅಂದರೆ ಈತನ ಕಾಲದಲ್ಲಿ ಯುವರಾಜನಾಗಿದ್ದ ಅವನ ತಮ್ಮ ಕಾಕುಸ್ಥನು ಸಮರ್ಥ ದೊರೆಗಳಲ್ಲಿ ಒಬ್ಬನಾಗಿದ್ದು, ಈತನ ಆಳ್ವಿಕೆಯ ಕಾಲದ ತಾಳಗುಂದ ಶಾಸನವು ಕದಂಬರ ಇತಿಹಾಸವನ್ನು ವಿವರವಾಗಿ ತಿಳಿಸುತ್ತದೆ.[೬] ಇತ್ತೀಚೆಗೆ ದೊರೆತ ಕಾಗಿನೆಲೆ ಪರಿಸರದ ವ್ಯಾಪ್ತಿಗೆ ಸೇರಿದ ಮತ್ತೂರು ತಾಮ್ರಪಟದಲ್ಲಿ ಹಿಂದೆ ಈ ವಂಶದವನೆಂದು ಹೇಳಲಾದ ಶಿವ ಮಾಂದತ್ವವರ್ಮನ ಹದಿಮೂರನೇ ಆಡಳಿತದ ವರ್ಷದ್ದಾಗಿದ್ದು, ಇದರ ಲಿಪಿ ತಾಳಗುಂದ ಶಾಸನಕ್ಕೆ ನಿಕಟವಾಗಿದೆ. ಹೀಗಾಗಿ ಈ ರಾಜನು ಕಾಕುತ್ಸವರ್ಮನ ಮಗನಾಗಿದ್ದು ಬನವಾಸಿಯಿಂದ ಆಳುತ್ತಿದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವನ ಅಣ್ಣ ಶಾಂತಿವರ್ಮನು ನಂತರ ಆಳಿರಬಹುದು. ಈತನ ಸಹೋದರನಾದ ಒಂದನೇ ಕೃಷ್ಣವರ್ಮನು ತ್ರಿಪರ್ವದಲ್ಲಿ ಮಾಂಡಳೀಕನಾಗಿದ್ದು, ಆತನು ಅಣ್ಣನ ವಿರುದ್ಧ ಬಂಡೆದ್ದು ಈ ತ್ರಿಪರ್ವತ ಯಾವುದೆಂದು ಬಹಳಷ್ಟು ಚರ್ಚೆ ನಡೆದಿದ್ದರೆ.

ಇದು ಹಾವೇರಿ ತಾಲ್ಲೂಕಿನ ದೇವಗಿರಿ ಇರಬೇಕೆಂದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಹೀಗೆ ಇವೆಲ್ಲವುಗಳನ್ನು ಗಮನಿಸಿದಾಗ ಕಾಗಿನೆಲೆಯು ಕದಂಬರ ಆಳ್ವಿಕೆಗೆ ಒಳಪಟ್ಟಿದೆ ಎಂಬುದು ತಿಳಿಯುತ್ತದೆ.

ಬಾದಾಮಿ ಚಾಲುಕ್ಯರು(ಕ್ರಿ.ಶ.೫೩೫–೭೫೭)

ಬನವಾಸಿಯ ಕದಂಬರ ಪ್ರಾಬಲ್ಯ ಕುಂಠಿತಗೊಳ್ಳುತ್ತಾ ಬಂದಂತೆ ವಾತಾಪಿಯಲ್ಲಿ ಕದಂಬರ ಅಧೀನರಾಗಿದ್ದ ಬಾದಾಮಿ ಚಾಲುಕ್ಯರು ಕ್ರಿ.ಶ.೫೩೫ರ ವೇಳೆಗೆ ಸ್ವತಂತ್ರ ರಾಜ್ಯ ಸ್ಥಾಪಿಸಿಕೊಂಡು ಬಾದಾಮಿಯನ್ನು ತಮ್ಮ ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಈ ಮನೆತನದ ಸ್ಥಾಪಕ ಒಂದನೇ ಪುಲಕೇಶಿ. ಒಂದನೇ ಪುಲಿಕೇಶಿಯು ಬಾದಾಮಿ ಕೋಟೆಯನ್ನು ಕಟ್ಟಿದನೆಂದು, ಅಶ್ವಮೇಧಯಾಗ ಮಾಡಿದನೆಂದು ಬಾದಾಮಿ ಬಂಡೆಗಲ್ಲು ಶಾಸನದಲ್ಲಿ ಉಲ್ಲೇಖವಾಗಿದೆ.[೮] ಗಂಗರು ಮತ್ತು ಕದಂಬರನ್ನು ಸೋಲಿಸಿದ ಈತನು ಕ್ರಿ.ಶ.೫೪೦ರ ಸುಮಾರಿಗೆ ಸ್ವತಂತ್ರರಾಗಿದ್ದು, ಅದಕ್ಕೆ ಮೊದಲು ಕದಂಬರ ಮಾಂಡಳೀಕನಾಗಿದ್ದು, ತಂದೆ ರಣರಾಗ ಹಾಗೂ ತಾತ ಜಯಸಿಂಹನನ್ನು ಶಾಸನಗಳು ಉಲ್ಲೇಖಿಸಿರುವುದು. ಜೊತೆಗೆ ಅಯೋಧ್ಯೆಯ ಮೂಲದವರೆಂದು ಹೇಳಿಕೊಂಡವರೇ ಶಾಸನಗಳಲ್ಲಿ ಚಾಲುಕ್ಯ, ಚಲ್ಕ, ಸಲ್ಕಿ ಎಂಬ ಹೆಸರುಗಳಿಂದ ಕರೆದುಕೊಂಡಿದ್ದು, ಸಲ್ಕ ಅಥವಾ ಸಲಿಕೆಗೆ ಸಂಬಂಧವುಳ್ಳ ಕೃಷಿಕ ಮೂಲದವರೆಂದು ಡಾ.ನಂದಿಮಠರು ಅಭಿಪ್ರಾಯ ಪಟ್ಟಿದ್ದಾರೆ.[೯]

ಈ ಮನೆತನದ ಇಮ್ಮಡಿ ಪುಲಕೇಶಿ ಕರ್ನಾಟಕವನ್ನು ಏಕಾಡಳಿತಕ್ಕೆ ಒಳಪಡಿಸಿದ ಪ್ರಥಮ ಅರಸನಾಗಿದ್ದಾನೆ. ಕದಂಬರು ಮತ್ತು ಗಂಗರು ಇವರ ಅಧೀನರಾಗಿ ಕಾವೇರಿಯಿಂದ ನರ್ಮದಾ ನದಿವರೆಗಿನ ವಿಶಾಲ ಸಾಮ್ರಾಜ್ಯವನ್ನು ವಿಸ್ತರಿಸಿದನು. ಈ ವಿಶಾಲ ಸಾಮ್ರಾಜ್ಯ ಮುಂದೆ ರಾಷ್ಟ್ರಕೂಟರು ತಮ್ಮ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಮುಂದುವರೆದು ಪ್ರತಿಷ್ಠ ಅಖಿಲ ಭಾರತ ಮಟ್ಟದಲ್ಲಿ ಬೆಳೆದು ಚಾಲುಕ್ಯ ಸೇನೆಯು ಕರ್ಣಾಟ ಬಲ ಎಂಬ ಪ್ರಸಿದ್ಧಿಗೆ ಬಂತಷ್ಟೇ ಅಲ್ಲ, ಕರ್ಣಾಟ ಬಲಾ ಅಜೇಯ ಎಂಬ ಕೀರ್ತಿಗೆ ಭಾಜನವಾಯಿತು. ಇವರು ಮೂಲದಲ್ಲಿ ವೈಷ್ಣವರಾಗಿದ್ದು, ವರಹಾ ಲಾಂಚನವನ್ನು ಹೊಂದಿದ್ದು, ಒಂದನೇ ವಿಕ್ರಮಾದಿತ್ಯನ ಕಾಲದಲ್ಲಿ ಶೈವರಾದರೂ ಧಾರ್ಮಿಕ ಸಮನ್ವಯತೆಯ ನೀತಿಯನ್ನು ಮಾತ್ರ ಕೈಬಿಡಲಿಲ್ಲ. ನಂತರ ವಿಜಯಾದಿತ್ಯನು ಕ್ರಿ.ಶ.೬೯೬ಕ್ಕೆ ಪಟ್ಟಕ್ಕೆ ಬಂದು ತನ್ನ ತಂದೆಯ ಆಳ್ವಿಕೆಯಲ್ಲಿ ಉತ್ತರದಲ್ಲಿ ದಿಗ್ವಿಜಯ ನಡೆಸಿದನು. ವಾಸ್ತವವಾಗಿ ಈತನ ಜೊತೆಗೆ ದಂಡಯಾತ್ರೆಗೆ ಹೋಗಿದ್ದ ಸೇನೆ ವಿಜಯಶಾಲಿಯಾಗಿ ಹಿಂದಿರುಗಿದರೂ ಈತ ಬಂಧನಕ್ಕೊಳಗಾಗಿದ್ದನು. ಈತನ ಅಗಲಿಕೆಯಿಂದ ಇತನ ತಂದೆ ದುಃಖದಿಂದ ಸಾವನ್ನಪ್ಪಲು ವಿಜಯಾಧಿತ್ಯನು ಬಂಧನದಿಂದ ತಪ್ಪಿಸಿಕೊಂಡು ಬಂದು ಪಟ್ಟವೇರಿದನು. ನಂತರ ಎರಡನೇ ವಿಕ್ರಮಾದಿತ್ಯ, ಎರಡನೇ ಕೀರ್ತಿವರ್ಮ ಅಧಿಕಾರ

ನಡೆಸಿದರು. ಆದರೆ ಕಾಗಿನೆಲೆ ಮತ್ತು ಹಾವೇರಿ ಜಿಲ್ಲೆಯಲ್ಲಿ ಬಾದಾಮಿ ಚಾಲುಕ್ಯರು ಆಳ್ವಿಕೆ ನಡೆಸಿರುವುದನ್ನು ಸಾರುವಂತಹ ಶಾಸನ ಆಧಾರಗಳು ಕಂಡುಬರುವುದಿಲ್ಲ. ನಂತರ ರಾಷ್ಟ್ರಕೂಟರು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ.

ರಾಷ್ಟ್ರಕೂಟರು

ಕರ್ನಾಟಕ ಇತಿಹಾಸದಲ್ಲಿ ರಾಷ್ಟ್ರಕೂಟರು ವಹಿಸಿದ ಪಾತ್ರ ಮಹತ್ವವಾದದ್ದು. ಬಾದಾಮಿ ಚಾಲುಕ್ಯರು ಕರ್ನಾಟಕ ಸಾಮ್ರಾಜ್ಯದ ಸಂಘಟಿಕರಾದರೆ, ರಾಷ್ಟ್ರಕೂಟರು ಅದನ್ನು ವೈಭವದ ಪರಾಕಷ್ಠತೆಗೆತ್ತಿದ ಕೀರ್ತಿ ಇವರಿಗೆ ಸಲ್ಲುತ್ತದೆ. ೮ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ ಇವರು ಸುಮಾರು ಎರಡೂವರೆ ಶತಮಾನಗಳ ಕಾಲ ರಾಜ್ಯಭಾರ ಮಾಡಿದರು.

ಇವರು ಮೌರ್ಯ ದೊರೆ ಅಶೋಕನ ಕಾಲದಿಂದಲೂ 'ರಠಿಕ' ವಂಶದವರೆಂದು ಹೆಸರುವಾಸಿಯಾಗಿದ್ದು, ಅನಂತರ ರಟ್ಟರು ಅಥವಾ ರಾಷ್ಟಕೂಟರು ಎಂದು ಪ್ರಸಿದ್ಧರಾಗಿದ್ದರು. ಈ ಮನೆತನದ ಲಾಂಚನ ಗರುಡ. ಶಾಸನಗಳಲ್ಲಿ ಇವರನ್ನು ಲಟ್ಟಲೂರ ಪುರವರಾಧೀಶ್ವರ ಎಂದು ಉಲ್ಲೇಖಿಸಲಾಗಿದೆ.[೧೦] ಆದ್ದರಿಂದ ಇವರು ಮಹಾರಾಷ್ಟ್ರ ರಾಜ್ಯದ ಉಸ್ಮಾನಬಾದ ಜಿಲ್ಲೆಯಲ್ಲಿರುವ ಇಂದಿನ ಲಾತೂರು ರಾಷ್ಟ್ರಕೂಟರ ಪೂರ್ವಿಕರ ಸ್ಥಳವಾಗಿದ್ದು, ಇವರು ಅಲ್ಲಿಯ ಪ್ರಭುಗಳಾಗಿದ್ದರು ಎಂದು ಮನವರಿಕೆಯಾಗುತ್ತದೆ.[೧೧] ದಂತಿದುರ್ಗ, ೧ನೇ ಕೃಷ್ಣ, ಧ್ರುವ, ಮೂರನೇ ಗೋವಿಂದ, ಅಮೋಘವರ್ಷ, ನೃಪತುಂಗ, ಎರಡನೇ ಕೃಷ್ಣ, ಇಂದ್ರ ಇವರುಗಳ ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಈತನ ನಂತರ ದಂತಿದುರ್ಗನು ಕ್ರಿ.ಶ.೭೩೩–೭೫೬ರ ವರೆಗೆ ಆಳ್ವಿಕೆ ನಡೆಸಿದನು. ದಂತಿದುರ್ಗನು ಚಾಲುಕ್ಯರ ಆಳ್ವಿಕೆ ಕಾಲವನ್ನು ಮೊಟಕುಗೊಳಿಸಿದನು. ಮಹತ್ವಕಾಂಕ್ಷೆ ಉಳ್ಳವನಾಗಿದ್ದು, ಸ್ವತಂತ್ರ ಸಾಮ್ರಾಜ್ಯವನ್ನು ಸ್ಥಾಪಿಸಲು ನಿರ್ಧರಿಸಿ ಎರಡನೇ ಕೀರ್ತಿವರ್ಮನ ಕಾಲದಲ್ಲಿ ಉಂಟಾದ ರಾಜಕೀಯ ಅಭದ್ರತೆಯ ಪರಿಸ್ಥಿತಿಯ ಲಾಭ ಪಡೆದು ಕರ್ನಾಟಕದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈತ ಬಾದಾಮಿ ಚಾಲುಕ್ಯರ ಮಾಂಡಲೀಕನಾಗಿದ್ದು, ಮಹಾರಾಷ್ಟ್ರ, ಗುಜರಾತ್‌ಗಳ ಗಡಿ ಪ್ರದೇಶದಲ್ಲಿ ಆಳುತ್ತಿದ್ದ ಗುಜರಾತದ ಚಾಲುಕ್ಯ ರಾಜಕುಮಾರಿಯನ್ನು ಕಲ್ಯಾಣ ಮಂಟಪದಿಂದ ಬಲವಂತವಾಗಿ ಅಪಹರಿಸಿ ಮದುವೆಯಾಗಿದ್ದನು. ಈತನು ಚಾಲುಕ್ಯ ರಾಜಕುಮಾರಿಯ ಪುತ್ರ ಕಾಂಬೇಶ ಕಾಂಚೀಶ, ಕೇರಳ ನರಾದೀಪ, ಚೋಳ, ಪ್ರಾಂತ್ಯ, ಶ್ರೀ ಹರ್ಷ ಇವರೆನ್ನೆಲ್ಲಾ ಸೋಲಿಸಲು ಸಮರ್ಥನಾದ. ಅಜೇಯ "ಕರ್ಣಾಟ ಬಲವನ್ನು" ಪರಾಭಾವಗೊಳಿಸಿ "ಚಾಲುಕ್ಯ ವಲ್ಲಭ' ಎಂಬ ಬಿರುದು ಪಡೆದನು.[೧೨] ದಂತಿದುರ್ಗ ಮರಣ ಹೊಂದಿದ ನಂತರ ಅವನಿಗೆ ಮಕ್ಕಳಿಲ್ಲದ ಕಾರಣ ಅವನ ಚಿಕ್ಕಪ್ಪನಾದ ಒಂದನೇ ಕೃಷ್ಣನು ಅಧಿಕಾರಕ್ಕೆ ಬಂದನು. ಈತ ಚಾಲುಕ್ಯ ದೊರೆ ಎರಡನೇ ಕೀರ್ತಿವರ್ಮನನ್ನು ರಣರಂಗದಲ್ಲಿ ಕೊಂದು ಚಾಲುಕ್ಯವಶದಲ್ಲಿದ್ದ ರಾಜ್ಯಕೆಲ್ಲ ಅಧಿಪತಿಯಾದನು.

ನಂತರ ಗಂಗದೊರೆ ಶ್ರೀ ಪುರುಷ ಮತ್ತು ವೆಂಗಿಯ ಚೋಳರ ದೊರೆ ನಾಲ್ಕನೇ ವಿಷ್ಣುವರ್ಧನನನ್ನು ಸೋಲಿಸಿ ವಿಂಧ್ಯಾಪರ್ವತದ ದಕ್ಷಿಣ ಭಾಗದಿಂದ ಬೆಂಗಳೂರಿನವರೆಗೆ ಮತ್ತು ಅರಬ್ಬಿ ಸಮುದ್ರದಿಂದ ಹೈದ್ರಾಬಾದಿನವರೆಗೆ ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಂಡ ರಾಷ್ಟ್ರಕೂಟರನ್ನು ದಕ್ಷಿಣ ಭಾರತದ ಬೃಹತ್ ಶಕ್ತಿಯಾಗಿ ಬೆಳೆಸಿದ್ದು, ಈತನ ರಾಜಕೀಯ ಸಾಧನೆಯಾಗಿದೆ.[೧೩] ಈತನ ತರುವಾಯ ೨ನೇ ಗೋವಿಂದನು ಕ್ರಿ.ಶ.೭೭೪-೮೦ ಮತ್ತು ೭೮೦-೭೯೩ ರವರೆಗೆ ಐಷರಾಮಿ ಆಳ್ವಿಕೆ ನಡೆಸಿದನು. ಇದನ್ನು ಉಪಯೋಗಿಸಿಕೊಂಡ ತಮ್ಮನಾದ ಧ್ರುವನು ಗೋವಿಂದನಿಂದ ಅಧಿಕಾರವನ್ನು ಕಬಳಿಸಲು ಯಶಸ್ವಿಯಾದನು.[೧೪]

ಒಂದನೇ ಕೃಷ್ಣನ ಮಗನಾದ ಧೃವನು ದಂಗೆಯೆದ್ದು ೨ನೇ ಗೋವಿಂದನಿಂದ ಅಧಿಕಾರವನ್ನು ಕಸಿದುಕೊಂಡು, ತನ್ನ ಪ್ರಭುತ್ವವನ್ನು ಕ್ರಿ.ಶ.೭೮೦ರಲ್ಲಿ ಪ್ರಾರಂಭಿಸಿದನು. ಈತನು ಗಂಗರ ಶ್ರೀ ಪುರುಷನನ್ನು ಸೋಲಿಸಿ, ಅವನ ಮಗ ಶಿವಮಾರನನ್ನು ಸೆರೆಯಲ್ಲಿಟ್ಟು, ಗಂಗಾವಾಡಿಯನ್ನು ವಶಪಡಿಸಿಕೊಂಡನು. ತನ್ನ ಮಗ ಸ್ತಂಭನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದನು.[೧೫]

ನಂತರ ಮೂರನೆಯ ಗೋವಿಂದನು ಅಧಿಕಾರಕ್ಕೆ ಬಂದನು. ಈತನು ಧೃವನ ಮಗನಾಗಿದ್ದು, ಈತನ ಆಳ್ವಿಕೆಯ ಕಾಲವು ಉನ್ನತಿಯನ್ನು ಹೊಂದಿತ್ತು. ನಂತರ ಕ್ರಿ.ಶ.೮೧೪ರಲ್ಲಿ ಅಮೋಘವರ್ಷನು ಅಧಿಕಾರಕ್ಕೆ ಬಂದನು.

ಅಮೋಘವರ್ಷನು(ಕ್ರಿ.ಶ.ಸುಮಾರು ೮೧೯-೮೭೮) ಮೂರನೇ ಗೋವಿಂದನ ಮಗನಾಗಿದ್ದು, ಅವನ ಮೊದಲ ಹೆಸರು ಶರ್ವ ಎಂಬುದಾಗಿದ್ದು, ಅಧಿಕಾರಕ್ಕೆ(ಸಿಂಹಾಸನಾರೂಢನಾದ) ಬಂದ ನಂತರ ಅಮೂಘವರ್ಷ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಈತನು ನೃಪತುಂಗ, ರಟ್ಟ ಮಾರ್ತಾಂಡ, ವೀರನಾರಾಯಣ, ಅತಿಶಯವೆಂಬ ಬಿರುದುಗಳನ್ನು ಹೊಂದಿದ್ದು, ಸಾಮ್ರಾಜ್ಯ ರಕ್ಷಿಸುವಲ್ಲಿ ಸಮರ್ಥ ದೊರೆ ಎನಿಸಿಕೊಂಡಿದ್ದು, ಕ್ರಿ.ಶ.೮೫೧ರಲ್ಲಿ ಭಾರತಕ್ಕೆ ಭೇಟಿ ನೀಡಿದ ಅರಬ್ ಪ್ರವಾಸಿ ಸುಲೈಮಾನ್ "ಈತನನ್ನು ಕುರಿತು ಅಮೋಘವರ್ಷನ ಸಾಮ್ರಾಜ್ಯ ಜಗತ್ತಿನ ೪ ಹಿರಿಯ ಸಾಮ್ರಾಜ್ಯಗಳಲ್ಲಿ ಒಂದು" ಎಂದಿದ್ದಾನೆ. ಈತ ಕೇವಲ ೧೪ ವರ್ಷದ ಬಾಲಕನಿದ್ದಾಗ ಪಟ್ಟವೇರಿದಾಗ ಉಂಟಾದ ಬಂಡಾಯವನ್ನು, ಅವನ ದಾಯಾದಿಯಾದ ಗುಜರಾತಿನ ಸುವರ್ಣವರ್ಷನು ಈತನ ನೆರವಿಗೆ ನಿಂತು ಬಂಡಾಯಗಳನ್ನು ಮುರಿದನು. ಈತನ ಆರಂಭದ ಕಾಲವನ್ನು ಹೋರಾಟಗಳ ಕಾಲವೆನ್ನಬಹುದು. ಕ್ರಿ.ಶ.೮೩೦ರಲ್ಲಿ[೧೬] ವೆಂಗಿರಾಜ್ಯದ ವಿಜಯಾದಿತ್ಯನನ್ನು ಸೋಲಿಸಿ ಹಿಮ್ಮೆಟ್ಟಿಸಿದನು ನಂತರ ದೀರ್ಘಕಾಲ ರಾಜ್ಯವಾಳಿದನು. ಈತನು ವಿದ್ಯಾಪತಿಯಾದ ವಿದ್ವಾಂಸರು, ಜೈನ ಸನ್ಯಾಸಿಗಾಗಿದ್ದ ವೀರಸೇನ, ಗುಣಭದ್ರ, ಶಕಟಾಯನ ಇವನ ಆಸ್ಥಾನದಲ್ಲಿದ್ದರು. ಈತನ ಸೇನಾನಿ ಬಂಕಾಪುರದ ನಿರ್ಮಾಣಕ್ಕೆ ಕಾರಣನಾದ. ಆಗ ಬಂಕಾಪುರ ಕಾಗಿನೆಲೆ ಬಾಡ ಬನವಾಸಿ[೧೭] ೧೨೦೦೦ ಆಡಳಿತಕ್ಕೆ ಒಳಪಟ್ಟವು. ಹೀಗೆ ಅಮೂಘವರ್ಷನ ಆಡಳಿತ ಕಾಗಿನೆಲೆಯಲ್ಲಿ ವಿಸ್ತರಿಸಿತ್ತು ಎಂಬುದಾಗಿ ಹೇಳಬಹುದು.

ಅಮೋಘವರ್ಷನ ನಂತರ ಮಗನಾದ ಎರಡನೇ ಕೃಷ್ಣನು(ಕ್ರಿ.ಶ.೮೭೮-೯೧೪) ಸಿಂಹಾಸನಾರೂಢನಾದನು. ಈತನಿಗೆ ಅಕಾಲವರ್ಷ, ಶುಭತುಂಗ, ಪೃಥ್ವಿವಲ್ಲಭ ಮೊದಲಾದ ಬಿರುದುಗಳಿದ್ದವು. ಈತ ಜೈನ ವಿದ್ವಾಂಸ ಗುಣಭದ್ರರಿಂದ ಶಿಕ್ಷಣ ಪಡೆದಿದ್ದನು. ಕೃಷ್ಣನು ವೆಂಗಿ ಚಾಲುಕ್ಯರ ವಿರುದ್ಧ ದೀರ್ಘ ಹೋರಾಟ ನಡೆಸಬೇಕಾಯಿತು. ಹಾಗೂ ಅನೇಕ ಬಾರಿ ಅವನು ಸೋಲಂಡನು. ಆದಿತ್ಯ ಚೋಳನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟು ಅವನು ಹಿರಿಯೂರಿನ ಚೋಳರ ಉತ್ತರಾಧಿಕಾರಕ್ಕೆ ನಡೆದ ಯುದ್ಧದಲ್ಲಿ ತನ್ನ ಮೊಮ್ಮಗ ಕನ್ನರನಿಗೆ ಪಟ್ಟಕೊಡಿಸಲು ವ್ಯರ್ಥ ಹೋರಾಟ ಮಾಡಿದನು. ಆದರೆ ಮಧ್ಯಭಾರತದ ಗೂರ್ಜರ ಪ್ರತಿಹಾರ ಬೋಜನನ್ನು ಸೋಲಿಸಿ ಅವನಿಂದ ಕಪ್ಪವನ್ನು ಸಂಗ್ರಹಿಸಿ ಗುಜರಾತಿನ ರಾಷ್ಟ್ರಕೂಟ ಶಾಖೆಯನ್ನು ಕೊನೆಗೊಳಿಸಿದನು.

ನಂತರ ಈತನ ಮೊಮ್ಮಗನಾದ ಮೂರನೇ ಇಂದ್ರನು ೯೧೪-೯೨೯ರವರೆಗೆ ಅಧಿಕಾರಕ್ಕೆ ಬಂದು ಸಾಮ್ರಾಜ್ಯ ವಿಸ್ತರಿಸಿದನು. ಈತನ ನಂತರ ಇವನ ಮಕ್ಕಳಾದ ಎರಡನೇ ಅಮೋಘವರ್ಷ (೯೧೬-೯೩೦)ನು ಮತ್ತು ೪ನೇ ಗೋವಿಂದ(೯೩೦-೯೩೬)ನು ಆಳ್ವಿಕೆ ನಡೆಸಿದ್ದಾರೆ. ನಂತರ ೨ನೇ ಜಗತ್ತುಂಗನ ಮಗ ಮತ್ತು ೩ನೇ ಇಂದ್ರನ ಸಹೋದರನಾದ ೩ನೇ ಅಮೋಘವರ್ಷನು ೯೩೬-೯೩೯ರವರೆಗೆ ಆಳ್ವಿಕೆ ನಡೆಸಿದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಹೀಗೆ ರಾಷ್ಟ್ರಕೂಟರು ಕಾಗಿನೆಲೆಯನ್ನು ಒಳಗೊಂಡಂತೆ ಜಿಲ್ಲೆಯಲ್ಲಿ ತಮ್ಮದೇ ಆದ ರೀತಿಯಲ್ಲಿ ಆಳ್ವಿಕೆ ಮಾಡಿರುವುದು ಇಲ್ಲಿ ದೊರೆತಿರುವ ಶಾಸನಗಳಿಂದ ಉಲ್ಲೇಖವಾಗುತ್ತದೆ. ಇವರ ನಂತರ ಕಲ್ಯಾಣ ಚಾಲುಕ್ಯರು ಆಡಳಿತದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾದರು.

ಕಲ್ಯಾಣ ಚಾಲುಕ್ಯರು

ರಾಷ್ಟ್ರಕೂಟರ ಉತ್ತರಾಧಿಕಾರಿಯಾಗಿ ಅಧಿಕಾರಕ್ಕೆ ಬಂದ ಕಲ್ಯಾಣ ಚಾಲುಕ್ಯರು ಬಾದಾಮಿ ಚಾಲುಕ್ಯರ ವಂಶಕ್ಕೆ ಸೇರಿದವರು. ಕ್ರಿ.ಶ.೪ರಿಂದ ೧೨ನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದ ಇತಿಹಾಸದಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದರು. ರಾಷ್ಟ್ರಕೂಟರು ಬಾದಾಮಿ ಚಾಲುಕ್ಯರ ಆಳ್ವಿಕೆಯನ್ನು ಕೊನೆಗೊಳಿಸಿ ಅಧಿಕಾರಕ್ಕೆ ಬಂದಿದ್ದರು. ಇವರ ಸಾಮಂತರಾದ ಕಲ್ಯಾಣ ಚಾಲುಕ್ಯರ ನಾಯಕನಾದ ಎರಡನೆಯ ತೈಲಪನು ರಾಷ್ಟ್ರಕೂಟರ ಎರಡನೆಯ ಕರ್ಕನನ್ನು ಸೋಲಿಸಿ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯ ಸ್ಥಾಪಿಸಿದನು.

೨ನೇ ತೈಲಪನು ನಾಲ್ಕನೆಯ ವಿಕ್ರಮಾದಿತ್ಯ ಮತ್ತು ಚೇದಿ ಅರಸ ಲಕ್ಷ್ಮಣನ ಮಗಳು ಬೊಂತಾದೇವಿ ಈತನ ತಂದೆ-ತಾಯಿಯಂದಿರು. ರಾಷ್ಟ್ರಕೂಟರ ಸಂಬಂಧಿಕನೂ ನಿಷ್ಠಾವಂತ ಮಾಂಡಳೀಕರು ಆಗಿದ್ದ ತಲಕಾಡಿನ ಗಂಗರನ್ನು ೨ನೇಯ ತೈಲಪನು ಸೋಲಿಸಿದನು. ಮಾಳ್ವ ಮತ್ತು ಕರ್ನಾಟಕದ ಸಂಘರ್ಷವು ತೈಲಪನ ಕಾಲದಲ್ಲಿಯೂ ಮುಂದುವರೆಯಿತು. ತೈಲಪನು ಮಾಳ್ವದ ಪರಮಾರ ದೊರೆ ಮುಂಜುನನ್ನು ಕ್ರಿ.ಶ.೯೫ರಲ್ಲಿ ಸೋಲಿಸಿ ತಡೆಹಿಡಿದು, ಕೊಂದು

ಹಾಕಿದನು. ೨ನೇ ತೈಲಪನು ಅಹಮಲ್ಲ, ಮಹಾರಾಜಾಧಿರಾಜ, ಪರಮೇಶ್ವರ ಮುಂತಾದ ಬಿರುದುಗಳನ್ನು ಧರಿಸಿದ್ದನು. ಈತನು ಕ್ರಿ.ಶ.೯೭೭ರಲ್ಲಿ ಮರಣವನ್ನು ಹೊಂದಿದನು.[೧೮]

ತೈಲಪನು ಕ್ರಿ.ಶ.೯೯೭ರಲ್ಲಿ ನಿಧನನಾದ ಮೇಲೆ ಆತನ ಹಿರಿಯ ಮಗ ಸತ್ಯಾಶ್ರಯ ಪಟ್ಟವೇರಿದನು. ಈತನು ಕ್ರಿ.ಶ.೯೭೭-೧೦೦೮ರವರೆಗೆ ಆಳ್ವಿಕೆ ನಡೆಸಿದನು. ಈತನು ಇರವಬೆಡಂಗ ಎಂಬ ಬಿರುದನ್ನು ಹೊಂದಿದ್ದನು.[೧೯] ಈತನು ಕನ್ನಡದ ರತ್ನತ್ರಯರಲ್ಲಿ ಒಬ್ಬನಾದ ರನ್ನನ ಆಶ್ರಯದಾತನಾಗಿದ್ದನು. ಈತನ ಕಾಲದಲ್ಲಿ ಮಾಳವದ ಪರಮಾರರು ತಾವು ಕಳೆದುಕೊಂಡಿದ್ದ ಪ್ರದೇಶಗಳನ್ನು ಮರಳಿ ಪಡೆದುಕೊಂಡಿದ್ದರು. ಸತ್ಯಾಶ್ರಯ ರಾಜರಾಜ ಚೋಳ ಹಾಗೂ ರಾಜೇಂದ್ರ ಚೋಳರ ಆಕ್ರಮಣವನ್ನು ಯಶಸ್ವಿಯಾಗಿ ಎದುರಿಸಿ ಉತ್ತರದ ಕೊಂಕಣದ ಶಿಲಾಹಾರ ದೊರೆಯನ್ನು ಸೋಲಿಸಿದನು. ಈತನ ನಂತರ ೫ನೇ ವಿಕ್ರಮಾದಿತ್ಯ(ಕ್ರಿ.ಶ.೧೦೦೮-೧೦೧೪) ರವರೆಗೆ ೨ನೇ ಜಯಸಿಂಹ ಕ್ರಿ.ಶ.(೧೦೧೫-೧೦೪೪)ರವರೆಗೆ ಆಳ್ವಿಕೆ ನಡೆಸಿ ಚೋಳರ ಪರಮಾರರ ಸೇವಣರ ದಂಗೆಯನ್ನು ಅಡಗಿಸಿದನು. ಈತನ ನಂತರ ಈತನ ಮಗ ಒಂದನೇಯ ಸೋಮೇಶ್ವರ ಕ್ರಿ.ಶ.೧೦೪೪ರಲ್ಲಿ ಪಟ್ಟಕ್ಕೆ ಬಂದನು.[೨೦]

೨ನೇ ಜಯಸಿಂಹನು ಬ್ಯಾಡಗಿ ಮತ್ತು ಕಾಗಿನೆಲೆ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದನೆಂದು ಸಿಡೇನೂರಿನ ಕಲ್ಲೇಶ್ವರ ದೇವಾಲಯದ ಮೇಲ್ಭಾಗದಲ್ಲಿ ದೊರೆತ ಶಾಸನದಿಂದ ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಜಗದೇಕಮಲ್ಲ ದೇವನೆಂದರೆ[೨೧] ಕಲ್ಯಾಣ ಚಾಲುಕ್ಯ ದೊರೆ ೨ನೇ ಜಯಸಿಂಹನೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮತ್ತೊಂದು ಶಾಸನವು ಈತನನ್ನು ತ್ರಿಭುವನ ಮಲ್ಲನೆಂದು ಹೆಸರಿಸುತ್ತದೆ. ಈತನು ಮಹಾ ಪ್ರಧಾನ ದಂಡನಾಯಕ ಬನವಾಸಿ ೧೨೦೦ ಮತ್ತು ಪಂಥರಾಸ್ ಬಸವೂರ ೧೪೦ನ್ನು ಆಳುತ್ತಿದ್ದನು.[೨೨] ೧ನೆಯ ಸೋಮೇಶ್ವರನು ದಕ್ಷ ಆಡಳಿತ ಕೈಗೊಂಡು ವ್ಯಂಗಿಯ ಮೇಲೆ ದಾಳಿ ಮಾಡಿ ಗೆದ್ದುಕೊಂಡು ಚೋಳ ದೊರೆ ರಾಜಾಧಿರಾಜನನ್ನು ಅಮರಾವತಿ ಬಳಿ ಸೋಲಿಸಿದನು. ಉತ್ತರದಲ್ಲಿ ಮಾಳ್ವದ ಪಾರಮಾರರ ಆಕ್ರಮಣವನ್ನು ಎದುರಿಸಿ ಕ್ರಿ.ಶ. ಕ್ರಿ.ಶ.೧೦೫೧ರಲ್ಲಿ ಮರಣ ಹೊಂದಿದನು. ಈತನು ಕಾಗಿನೆಲೆಯ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿರುವುದಕ್ಕೆ ಇಂಗಳಗೊಂದಿಯ ಶಾಸನದಲ್ಲಿ ಕೇತಗಾವುಂಡನ ಮಗ ಮಹಾದೇವ ಮಾಳೇಶ್ವರ ದೇವಾಲಯಕ್ಕೆ ದಾನ ನೀಡಿದರ ಕುರಿತು ತಿಳಿಯಪಡಿಸುತ್ತದೆ.[೨೩] ಈತನ ಹಿರಿಯ ಮಗ ೨ನೇ ಸೋಮೇಶ್ವರನು ಕಲ್ಯಾಣದ ಅರಸ ನಾಗುತ್ತಾನೆ. ಭುವನೈಕ್ಯ ಮಲ್ಲ ಎಂಬ ಬಿರುದಿನಿಂದ ಖ್ಯಾತನಾದ ಒಂದನೇ ಸೋಮೇಶ್ವರನ ಮಗ ೨ನೆಯ ಸೋಮೇಶ್ವರನಾಗಿದ್ದನು. ಈತನು ಅಸಮರ್ಥ ದೊರೆಯಾಗಿದ್ದು, ತನ್ನ ಆಳ್ವಿಕೆಯ ಕಾಲದಲ್ಲಿ ಕೆಲವೊಂದು ಆಕ್ರಮಣವನ್ನು ಕೈಗೊಂಡು ಸಾಮ್ರಾಜ್ಯ ವಿಸ್ತರಿಸುವ ಕಾರ್ಯದಲ್ಲಿ ತೊಡಗಿದ್ದಾನೆ. ಈತನು ಕಾಗಿನೆಲೆಯ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದು ಮತ್ತು ದಾನ

ದತ್ತಿಗಳನ್ನು ದೇವಾಲಯಕ್ಕೆ ಒದಗಿಸಿರುವುದನ್ನು ಸೋಮೇಶ್ವರ ಗುಡಿಯ ಹತ್ತಿರವಿರುವ ಶಾಸನಗಳಿಂದ ತಿಳಿದುಬರುತ್ತದೆ. ಮತ್ತು ಜಕ್ಕಗಾವುಂಡಾದಿಗಳಿಂದ ಕಾಗಿನೆಲೆಯ ಗ್ರಾಮೇಶ್ವರ ದೇವಾಲಯಕ್ಕೆ ಭೂಮಿ, ಹಣ ಹಾಗೂ ಎಣ್ಣೆದಾನ ಮಾಡಿದ ಉಲ್ಲೇಖವನ್ನು ತಿಳಿಯಪಡಿಸುತ್ತದೆ.[೨೪] ಈ ರೀತಿಯಾಗಿ ೨ನೇ ಸೋಮೇಶ್ವರನು ಕಾಗಿನೆಲೆಯ ವಲಯದಲ್ಲಿ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ಕಲ್ಯಾಣ ಚಾಲುಕ್ಯರ ಇತಿಹಾಸದಲ್ಲಿಯೇ ಅತಿ ಪರಾಕ್ರಮ ಅರಸನೆನಿಸಿದವನು ೬ನೇ ವಿಕ್ರಮಾದಿತ್ಯ(ಕ್ರಿ.ಶ.೧೦೭೬–೧೧೨೭). ಭಾರತದ ಇತಿಹಾಸದಲ್ಲಿ ಕನ್ನಡ ನಾಡಿನ ಘನತೆ ಸ್ಥಾನಮಾನಗಳು ಬಾನಿನುದ್ದಕ್ಕೆ ನೆಗೆಯಲು ಕಾರಣರಾದ ಕೆಲವೇ ಜನ ರಾಜ ಪ್ರಮುಖರಲ್ಲಿ ೬ನೇಯ ವಿಕ್ರಮಾದಿತ್ಯನು ಒಬ್ಬ. ವಿಕ್ರಮಾದಿತ್ಯನು ಶೂರ, ಧೀರ, ಉತ್ತಮ ಆಡಳಿತಗಾರ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ೬ನೇ ವಿಕ್ರಮಾದಿತ್ಯನು ೩ ಭಾರಿ ಮಾಳ್ವದ ಮೇಲೆ ದಂಡೆತ್ತಿ ಹೋಗಿ ತನ್ನ ಕಾರ್ಯವನ್ನು ಮೆರೆದನು. ನರ್ಮದೆಯಲ್ಲಿ ಜಯಸ್ತಂಭವನ್ನು ನಿಲ್ಲಿಸಿದ ಎಂದು ಕ್ರಿ.ಶ.೧೦೭೭ರ ರಾಯಭಾಗ ಕರಡುಪತ್ರ ತಿಳಿಸುತ್ತದೆ. ಕ್ರಿ.ಶ.೧೦೮೦ರಲ್ಲಿ ೬ನೇ ವಿಕ್ರಮಾದಿತ್ಯನ ತಮ್ಮನಾದ ಜಯಸಿಂಹನನ್ನು ಬನವಾಸಿಯ ಪ್ರಾಂತ್ಯಾಧಿಕಾರಿಯಾಗಿ ನೇಮಿಸಲಾಗಿತ್ತು. ಚಾಲುಕ್ಯ ಪಟ್ಟವನ್ನು ಪಡೆಯುವ ಹಂಬಲದಿಂದ ವಿಕ್ರಮಾದಿತ್ಯನ ವಿರುದ್ಧ ಬಂಡೆದ್ದನು. ಸಾಮ್ರಾಟ ವಿಕ್ರಮಾದಿತ್ಯನು ಜಯಸಿಂಹನನ್ನು ಸೋಲಿಸಿ ನಂತರ ಕ್ಷಮಿಸಿದ ನಂತರ ವೆಂಗಿಯ ಕೆಲವು ಭಾಗಗಳನ್ನು ಆಕ್ರಮಿಸಿದನೆಂದು ತಿಳಿದುಬರುತ್ತದೆ.

೬ನೇ ವಿಕ್ರಮಾದಿತ್ಯನು ಗೋವೆಯ ಕದಂಬರು, ಕೊಂಕಣದ ಶಿಲಾಹಾರರು, ಸೇವಣರು ಮುಂತಾದ ಮಾಂಡಳೀಕರನ್ನು ಸೋಲಿಸಿ ಸದೆಬಡಿದು, ಶಿಲಾಹಾರರ ಅಪರಾಜಿತನ ಮಗಳಾದ ಚಂದ್ರಲೇಖಳನ್ನು ವಿವಾಹವಾದನು. ಈತನು ತನ್ನ ಸೈನಿಕ ಪ್ರತಿಭೆ ಹಾಗೂ ವರ್ಚಸ್ಸಿನಿಂದ ಚಾಲುಕ್ಯ ಸೌರ್ವಭೌಮತ್ವವನ್ನು ತನ್ನ ಆಡಳಿತದ ಕೊನೆಯವರೆಗೂ ಮುಂದುವರಿಸಿಕೊಂಡು ಬಂದನು. ಈತನು ವಿದ್ವಜ್ಜನರ ಪೋಷಕನಾಗಿದ್ದನು. ಈತನ ಆಸ್ಥಾನವು ಅನೇಕ ವಿದ್ವಾಂಸರು, ಕಲಾವಿದರು ಹಾಗೂ ಕವಿಗಳಿಂದ ಅಲಂಕಾರಗೊಂಡಿತ್ತು. ಬಿಲ್ಲಣನು 'ವಿಕ್ರಮಾಂಕದೇವ ಚರಿತ' ಎಂಬ ಗ್ರಂಥವನ್ನು ರಚಿಸಿದನು. ವಿಜ್ಞಾನೇಶ್ವರನು 'ಮಿತಾಕ್ಷರ' ಎಂಬ ಸಂಸ್ಕೃತ ಗ್ರಂಥವನ್ನು ರಚಿಸಿದನು.[೨೫] ಈತನ ಶಾಸನಗಳಿಂದ ವಿಕ್ರಮಾದಿತ್ಯನು ಕಾಗಿನೆಲೆ ಪ್ರದೇಶ ಮತ್ತು ಬ್ಯಾಡಗಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿರುವುದು ತಿಳಿದುಬರುತ್ತದೆ. ಈತನ ಆಳ್ವಿಕೆಯ ಅವಧಿಯಲ್ಲಿ ಕ್ರಿ.ಶ.೧೧೨೨ರಲ್ಲಿ ಕಾಗಿನೆಲೆಯಲ್ಲಿ ಕಾಳೇಶ್ವರ ದೇವಾಲಯ ನಿರ್ಮಾಣವಾಗಿತ್ತು. ಕ್ರಿ.ಶ.೧೧೨೧ರಲ್ಲಿ ಕಾಳೇಶ್ವರ ದೇವಾಲಯದ ನಿರ್ಮಾತೃವಾದ ಬಾಸವೂರಿನ ಕಾಳಸೆಟ್ಟಿಯು ಮುಂದೆ ಬ್ರಹ್ಮೇಶ್ವರ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ.[೨೬] ಕ್ರಿ.ಶ.೧೦೯೨ರ ಬ್ಯಾಡಗಿ ಶಾಸನದಲ್ಲಿ[೨೭] ಮಹಾಮಂಡಳೇಶ್ವರ ವೀರಗಾಂಗೆಯರಾಯನು ಬನವಾಸಿ ೧೨೦೦೦ವನ್ನು ಆಳುವಾಗ ಬ್ಯಾಡಗಿಯ ಮಲ್ಲಿಕಾರ್ಜುನ ದೇವರಿಗೆ ಬಿಟ್ಟ ದತ್ತಿಯನ್ನು ಕುರಿತು ವಿವರಿಸುತ್ತದೆ.

ಹೀಗೆ ೬ನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲಾವಧಿಯಲ್ಲಿ ಬ್ಯಾಡಗಿ ಮತ್ತು ಕಾಗಿನೆಲೆ ಪರಿಸರದಲ್ಲಿ ಆಳ್ವಿಕೆ ನಡೆಸಿದ್ದಾನೆಂಬುದಕ್ಕೆ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದಂತಹ ಅತಿ ಹೆಚ್ಚು ಶಾಸನಗಳು ಈ ಪ್ರದೇಶದಲ್ಲಿ ಕಂಡುಬಂದಿವೆ.

೬ನೇ ವಿಕ್ರಮಾದಿತ್ಯನು ಅವ್ಯಾಹತವಾಗಿ ಧಾರ್ಮಿಕ ಕಾರ್ಯವನ್ನು ಕೈಗೊಂಡನು. ಅಷ್ಟೇ ಅಲ್ಲದೆ ಕನ್ನಡ ನಾಡಿನಲ್ಲಿ ಆಳ್ವಿಕೆ ನಡೆಸಿದ ಹಲವಾರು ಅರಸರುಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಶಾಸನಗಳನ್ನು ಬರೆಯಿಸಿದ ಅರಸನೆಂದರೆ ೬ನೇಯ ವಿಕ್ರಮಾದಿತ್ಯನಾಗಿದ್ದಾನೆ ಎಂದು ಡಾ.ಪಿ.ಬಿ.ದೇಸಾಯಿಯವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಅತ್ಯಂತ ಸುದೀರ್ಘಕಾಲದವರೆಗೆ ಸುವ್ಯವಸ್ಥಿತವಾಗಿ ಆಳ್ವಿಕೆಯನ್ನು ಕೈಗೊಂಡಂತಹ ವಿಕ್ರಮಾದಿತ್ಯನು ಕ್ರಿ.ಶ.೧೧೨೬ರಲ್ಲಿ ಮರಣವನ್ನು ಹೊಂದಿದನು. ವಿಕ್ರಮಾದಿತ್ಯನ ತರುವಾಯ ಸರ್ವಜ್ಞ ಭೂಪನೆಂದು ಹೆಸರುವಾಸಿಯಾದ ಈತನ ಮಗನಾದ ೩ನೇ ಸೋಮೇಶ್ವರನು ಕ್ರಿ.ಶ.೧೧೨೬ ರಿಂದ ೧೧೩೯ರವರೆಗೆ ಆಳ್ವಿಕೆಯನ್ನು ನಡೆಸಿದನು. 'ಸಂಸ್ಕೃತ' ವಿಶ್ವಕೋಶ ಎಂದು ಹೆಸರಿಗೆ ಖ್ಯಾತವಾಗಿರುವ ಇತನ ಮನೋಸೂಲ್ಲಾಸ ಎಂಬ ಕೃತಿಯ ನಿಮಿತ್ತ ಈತನನ್ನು 'ಸರ್ವಜ್ಞಭೂಪ' ಎಂಬ ಹೆಸರಿನಿಂದ ಕರೆಯಲಾಗಿದೆ. ಈತನು ಕೂಡ ಕಾಗಿನೆಲೆ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿದ್ದನೆಂದು ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳಿಂದ ನಮಗೆ ತಿಳಿದುಬರುತ್ತದೆ. ಈತನ ಕಾಲಾವಧಿಯಲ್ಲಿ ವಿಷ್ಣುವರ್ಧನ ಮತ್ತೆ ಬಂಡಾಯ ಹೂಡಿದರೂ ಅವನನ್ನು ಸದೆಬಡಿದನು. ಆದರೆ ಉಚ್ಚಂಗಿ ಹೊಯ್ಸಳರ ಕೈವಶವಾಯಿತು. ಕ್ರಿ.ಶ.೧೧೩೬ರಲ್ಲಿ ವೆಂಗಿಯು ಸೋಮೇಶ್ವರನ ಕೈ ತಪ್ಪಿದರು ವೆಂಗಿಯ ರಾಜ್ಯಕ್ಕೆ ಸೇರಿದ ಬಹುಭಾಗವನ್ನು ಅವನು ವಶಪಡಿಸಿಕೊಂಡನು ಮತ್ತು ಕ್ರಿ.ಶ.೧೧೩೮ರ ಕಾಗಿನೆಲೆ ಬಳಿಯ ಮತ್ತೂರ ಶಾಸನದಲ್ಲಿ[೨೮] ಕಮ್ಮನವಳ್ಳಿಯ ಜಕ್ಕಸೆಟ್ಟಿ ಮತ್ತೂರ ಮೇಲೆ ದಾಳಿ ಮಾಡಿರುವ ಕಮ್ಮಾರ ಮಾಚನವೀರನ ಮರಣ, ಜಕ್ಕಾಗೌಡದಿಗಳಿಂದ ಆತನ ಅಣ್ಣನಿಗೆ ಭೂದಾನವನ್ನು ನೀಡಿದ ವಿಷಯವನ್ನು ತಿಳಿಸುತ್ತದೆ. ಈ ರೀತಿಯಾಗಿ ೩ನೇ ಸೋಮೇಶ್ವರನು ಕಾಗಿನೆಲೆ ಮತ್ತು ಬ್ಯಾಡಗಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಆಳ್ವಿಕೆಯನ್ನು ಕೈಗೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ.

೩ನೇ ಸೋಮೇಶ್ವರನ ಮಗನಾದ ೨ನೆಯ ಜಗದೇಕಮಲ್ಲನು ಕ್ರಿ.ಶ.೧೧೩೯ರಲ್ಲಿ ಸಿಂಹಾಸನಕ್ಕೆ ಬಂದನು. ಇವನ ಪೆರ್ಮಾಡಿ, ಪೆರ್ಮಾಡಿ ಪರಮಾಡಿದೇವ ಎಂಬ ಬಿರುದನ್ನು ಹೊಂದಿದ್ದನು. ಈತನ ಆಳ್ವಿಕೆಯ ಆದಿಭಾಗದಲ್ಲಿ ಹಲವಾರು ಸಾಮಂತರು ದಂಗೆ ಎದ್ದಿದ್ದರು. ಅರಸರನ್ನು ಸೋಲಿಸಿ ಕೊನೆಗೆ ದೊರಸಮುದ್ರವನ್ನು ಆಕ್ರಮಿಸಿ ಹೊಯ್ಸಳ ವಿಷ್ಣುವರ್ಧನನ್ನು ಬೆನ್ನಟ್ಟಿ ಸೋಲಿಸಿ ವಶಪಡಿಸಿಕೊಂಡನು.[೨೯] ಚೋಳರಾಜರನ್ನು ಸೋಲಿಸಿ ೧೧೪೩ರ ಶಾಸನವೊಂದರಲ್ಲಿ ಬಲ್ಲಾಳನೆಂಬುವನನ್ನು ಪರಮಾರ ಸಿಂಹಾಸನದಲ್ಲಿರಿಸಿದನು. ಸ್ವತಂತ್ರನಾಗಲು ಹವಣಿಸಿದ

ನೊಳಂಬಾಧಿಪತಿಯನ್ನು ಸೋಲಿಸಿದನು. ಕೇವಲ ಆಡಳಿತಾತ್ಮಕ ಸಾಧನೆ ಹಿಡಿದಾಗಿದ್ದು ಸ್ವಲ್ಪ ಮಟ್ಟಿಗೆ ಯುದ್ಧಗಳು ನಡೆದವಾದರೂ ಕೊನೆಗೆ ರಾಜ್ಯದಲ್ಲಿ ಶಾಂತಿ ನೆಲೆಸಿತ್ತು. ಈತನ ಆಳ್ವಿಕೆಯಲ್ಲಿ ಹಲವು ದಾನದತ್ತಿಗಳನ್ನು ನೀಡಿರುವುದು ತಿಳಿದುಬರುತ್ತದೆ. ಹಿರೇಹಳ್ಳಿ ಶಾಸನದಲ್ಲಿ[೩೦] ಯೋಗೇಶ್ವರ ದಂಡನಾಯಕನ ಮಹಾಸಾಮಂತನಾದ ಕಲಿಯವರಸನ ಕುರಿತು ತಿಳಿಸುತ್ತದೆ. ಈತನ ಕಾಲದಲ್ಲಿ ಕಾಗಿನೆಲೆಯ ಪ್ರಜೆಗಳು ಈತನ ವಿರುದ್ಧ ಬಂಡಾಯ ಹೂಡಿ ನಾಡಪ್ರಭು ಕೇತಿಸೆಟ್ಟಿಯವರ ಪರ ಹೋರಾಡಿ ಮಡಿದ ಉಲ್ಲೇಖ ೧೧೪೬ರಲ್ಲಿ ತಿಳಿದುಬರುತ್ತದೆ.

೨ನೇ ಜಗದೇಕಮಲ್ಲನ ನಂತರ ೩ನೇ ತೈಲಪನು ಉತ್ತರಾಧಿಕಾರಿಯಾದ ನಂತರ ೪ನೇ ಸೋಮೇಶ್ವರ ಈತನ ಜೊತೆಗೂಡಿ ಜಂಟಿ ಅರಸನಾಗಿದ್ದು, ತೈಲಪನು ಕಾಕತೀಯ ಪೋರನ ಕೈಯಲ್ಲಿ ಸೋತು ಬಂಧಿತನಾಗಿ ಪ್ರತಿಷ್ಠೆ ಕಳೆದುಕೊಂಡನು. ಕ್ರಿ.ಶ.೧೧೫೭ರಲ್ಲಿ ತರ್ದವಾಡಿ ತರಿಕಾಡುನಾಡುಗಳ ಮಾಂಡಳೀಕ ಹಾಗೂ ೬ನೇ ವಿಕ್ರಮಾದಿತ್ಯನ ಮಗಳ ಮಗ ಕಳಚೂರಿ ೨ನೇ ಬಿಜ್ಜಳನು ಕಲ್ಯಾಣವನ್ನು ಗೆದ್ದುಕೊಂಡನು. ನಂತರ ತೈಲಪನು ೧೧೬೨ರಲ್ಲಿ ಮರಣ ಹೊಂದಿದನೆಂದು ತಿಳಿದುಬರುತ್ತದೆ.

ಕಲಚೂರಿಗಳು

೬ನೇ ವಿಕ್ರಮಾದಿತ್ಯನ ಸುಖ ಸಮೃದ್ಧಿಗಳು ದೀರ್ಘ ಸಾಮರ್ಥ್ಯ ಆಳ್ವಿಕೆಯ ನಂತರ ಅವನ ಮಗ ೩ನೇ ಸೋಮೇಶ್ವರ ಮತ್ತು ಮೊಮ್ಮಗ ೨ನೇ ಜಗದೇಕಮಲ್ಲನ ಆಳ್ವಿಕೆಯು ಯಾವ ವಿಶೇಷ ಘಟನಾವಳಿಯಿಲ್ಲದೆ ಕೊನೆಗೊಂಡು, ಚಾಲುಕ್ಯರ ೩ನೇಯ ತೈಲಪ ಅಧಿಕಾರಕ್ಕೆ ಬರುತ್ತಲೇ ಬಿಜ್ಜಳನ ಒಳಸಂಚು ಒಮ್ಮೆಲೆ ಲಾವರಸವಾಗಿ ಹೊರಹೊಮ್ಮಿತು. ತತ್ಪರಿಣಾಮವಾಗಿ ಕಲಚೂರಿಯ ೨ನೆಯ ಬಿಜ್ಜಳ ಆಂತರಿಕ ಕ್ರಾಂತಿಯ ಕೇಂದ್ರಬಿಂದುವಾಗಿ ದಂಗೆ ಎದ್ದನು. ಚಾಲುಕ್ಯ ಸಿಂಹಾಸನದ ಉತ್ತರಾಧಿಕಾರಿಯಾದ ಇವನು. ಕ್ರಿ.ಶ.೧೧೬೨ರಲ್ಲಿ ಕಲ್ಯಾಣವನ್ನು ವಶಪಡಿಸಿಕೊಂಡನು. ಹೊಯ್ಸಳರ ಒಂದನೆಯ ನರಸಿಂಹನನ್ನು ಸೋಲಿಸಿದನು.[೩೧] ಈತನ ತರುವಾಯ ಪುತ್ರರಾದ ರಾಯಮರಾರಿ ಸೋವಿದೇವ ಕ್ರಿ.ಶ.(೧೧೬೭–೧೧೭೭)ರವರೆಗೆ ಆಳ್ವಿಕೆ ನಡೆಸಿದನು. ಆರಂಭದಲ್ಲಿ ಸೋವಿದೇವನು ತರ್ದವಾಡಿ ೧೦೦೦ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಆಳುತ್ತಿದ್ದನು. ತಂದೆಯಾದ ಬಿಜ್ಜಳನು ಕ್ರಿ.ಶ.೧೧೬೮ರಲ್ಲಿ ಪಟ್ಟ ಕಟ್ಟಿದನು. ಆ ಸಂದರ್ಭದಲ್ಲಿ ಸಿಂಹಾಸನಕ್ಕಾಗಿ ಕೆಲಕಾಲ ತೊಂದರೆಯಾಯಿತೆಂದು ಸೋವಿದೇವ ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಬಿಜ್ಜಳನ ತಮ್ಮ ಮೈಲುಗಿದೇವನು ರಾಜ್ಯವನ್ನು ೨ ವರ್ಷಗಳ ಕಾಲ ತನ್ನ ಅಧೀನದಲ್ಲಿಟ್ಟುಕೊಂಡಿದ್ದನು. ನಂತರ ಆತನನ್ನು ಸೋಲಿಸಿ ತಾನೇ ರಾಜ್ಯಭಾರ ಕೈಗೊಂಡನು. ಶಾಂತಿಯುತವಾದ ಆಡಳಿತವನ್ನು ಕೈಗೊಂಡನು ಮತ್ತು ಕರ್ನಾಟಕದ ಹಲವು ಭಾಗಗಳಲ್ಲಿ ಪ್ರದೇಶಗಳಲ್ಲಿ ಆಳ್ವಿಕೆ ಮಾಡಿ, ತುಂಗಭದ್ರೆಯ ದಕ್ಷಿಣ ತೀರದ ೩೦೦ ನಾಡೊಂದನ್ನು ವಶಪಡಿಸಿಕೊಂಡನು. ಅಲ್ಲದೆ ಬೆಳಗಾಂವ, ಬಿಲ್ಲಕುಂಡಿ, ಮಡಗಿಹಾಳ ಪ್ರಾಂತ್ಯಗಳನ್ನು ಹೊಸದಾಗಿ

ಸೇರಿಸಿಕೊಂಡನು. ಚೋಳ, ಮಾಳ್ವ, ಕಲಿಂಗಾದಿಗಳನ್ನು ಸೋಲಿಸಿದನೆಂದು ಶಾಸನಗಳು ಸಾರಿವೆ. ಬಿಜ್ಜಳನ ಕಾಲಕ್ಕಿಂತಲೂ ಸೋವಿದೇವನ ಕಾಲದಲ್ಲಿ ಕಲಚೂರ್ಯ ರಾಜ್ಯವು ಹೆಚ್ಚು ಸಮೃದ್ಧಿಯಾಗಿತ್ತೆಂದು ಇಂಗಳೇಶ್ವರ ಶಾಸನ ಹೇಳಿದೆ. ಸೋವಿದೇವನ ಮಂತ್ರಿಗಳಲ್ಲಿ ಬಮುಕ ಕೇಶವನು ತರ್ದವಾಡಿ ೧೦೦೦, ಹಾನಗಲ್ಲು ೫೦೦, ಬನವಾಸಿ ೧೨,೦೦೦, ನಾಗರಖಂಡ ೭೦ ನಾಡಿಗೆ ಅಧಿಕಾರಿಯಾಗಿದ್ದನು. ಬನವಾಸಿ ೧೨೦೦೦ ಪ್ರಾಂತವು ಕಲಚೂರ್ಯ ಸಾಮ್ರಾಜ್ಯದ ಮುಖ್ಯ ಭಾಗವಾಗಿದ್ದಿತು ಎಂದು ತಿಳಿದುಬರುತ್ತದೆ. ಈ ರೀತಿ ಸೋವಿದೇವನು ಕಾಗಿನೆಲೆ ಮತ್ತು ಬ್ಯಾಡಗಿ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಅಲ್ಲಿ ದೊರೆತಿರುವ ಶಾಸನಗಳು ಸಾಕ್ಷಿಯಾಗಿವೆ. ಕ್ರಿ.ಶ.೧೧೭೨ರ ಬ್ಯಾಡಗಿ ತಾಲೂಕಿನ ಮತ್ತೂರ ಶಾಸನವು ಶ್ರೀಯುತ ಕಲಚುರಿಯ ಚಕ್ರವರ್ತಿ ರಾಯಮುರಾರಿ ಸೋವಿದೇವ ಎಂದಿದೆ. ಮುಂದೆ ಬನವಾಸಿ–೧೨೦೦೦ವನ್ನು ಆಳುತ್ತಿದ್ದ ಕಸಿಮಯ್ಯ ದಂಡನಾಯಕನು ಮತ್ತೂರ ತರುಗಳನ್ನು ಕೊಂಡು ಹೋಗುವಾಗ ಅಗಸರ ಕಾಳಿಯನು ಶತ್ರುಗಳನ್ನು ಎದುರಿಸಿ ಹೋರಾಡುತ್ತ ಮಡಿದನೆಂದು[೩೩] ಈ ಶಾಸನವು ಉಲ್ಲೇಖಿಸುತ್ತದೆ. ಈ ರೀತಿಯಾಗಿ ಕಲಚೂರಿಗಳ ಕಾಗಿನೆಲೆ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿರುವುದು ಅವರ ಶಾಸನಗಳಿಂದ ತಿಳಿದುಬರುತ್ತದೆ.

ದೇವಗಿರಿಯ ಯಾದವರು(ಸೇವಣರು)(ಕ್ರಿ.ಶ.೧೧೮೭–೧೩೩೪)

ಕಾಗಿನೆಲೆ ಮತ್ತು ಬ್ಯಾಡಗಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೇವಗಿರಿಯ ಯಾದವರು ಆಳ್ವಿಕೆ ನಡೆಸಿರುವುದಕ್ಕೆ ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಸಿಂಘಣ, ರಾಮಚಂದ್ರ ಮತ್ತು ಕನ್ನರ ಎಂಬ ಅರಸರುಗಳು ಆಳ್ವಿಕೆ ಮಾಡಿದ್ದಾರೆ. ದೇವಗಿರಿಯ ಯಾದವರು ಮೊದಲು ಕಲ್ಯಾಣ ಚಾಲುಕ್ಯರ ಮಾಂಡಲೀಕರಾಗಿದ್ದರು. ಇವರ ಇತಿಹಾಸವು ಕರ್ನಾಟಕದ ಇತಿಹಾಸದಲ್ಲಿ ಮಹತ್ವದ್ದಾಗಿದೆ. ಯಾದವರು ಕಲ್ಯಾಣ ಚಾಲುಕ್ಯರ ತರುವಾಯ ಅಧಿಪತ್ಯಕ್ಕೆ ಬಂದು ಕನ್ನಡ ದೇಶದ ಬಹುಭಾಗ ಪ್ರದೇಶದ ಮೇಲೆ ರಾಜ್ಯಭಾರ ಮಾಡಿದರು. ಅವರು ದೂರಸಮುದ್ರ ಹೊಯ್ಸಳರೊಂದಿಗೆ ಹೋರಾಟವನ್ನು ನಡೆಸುತ್ತಿದ್ದರು. ಕೊನೆಗೆ ಅವರು ಉತ್ತರದಿಂದ ನುಗ್ಗಿ ದಾಳಿ ನಡೆಸಿದ ಮುಸ್ಲಿಂರಿಗೆ ಸೋತು ಹೋದರು. ಅದು ವಿಜಯನಗರ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾಯಿತು.

ಈ ರಾಜವಂಶದ ವಿಷಯವನ್ನು ಗಮನಹರಿಸಿದರೆ ಕರ್ನಾಟದದ ಅನೇಕ ರಾಜರುಗಳು ಪ್ರಾಚೀನ ಸಾಹಿತ್ಯಗಳಾದ ಇತಿಹಾಸ ಪುರಾಣಗಳಲ್ಲಿ ತಮ್ಮ ಹುಟ್ಟು ಮತ್ತು ಪರಂಪರೆಯ ವಿಷಯ ಉಕ್ತವಾಗಿದೆಯೆಂದು ಹೇಳಿಕೊಳ್ಳುತ್ತವೆ. ದಕ್ಷಿಣ ಭಾರತದ ೧೩ ಮತ್ತು ೧೪ನೇ ಶತಮಾನಗಳಲ್ಲಿ ಪ್ರಮುಖ ಪಾತ್ರವಹಿಸಿದ ದೇವಗಿರಿಯ ಯಾದವರು ನಹ, ಷ್ಟಾನ, ಮಗ ಯಾಯತಿಯ ೫ ಜನ ಮಕ್ಕಳಲ್ಲಿ ಒಬ್ಬನಾದ ಯದುವಿನಿಂದ ವಂಶಾವಳಿಯನ್ನು ಹೇಳಕೊಳ್ಳುತ್ತಾರೆ.

ಚಾಲುಕ್ಯ ದೊರೆ ೪ನೆಯ ಸೋಮೇಶ್ವರನು ಮಾಂಡಳೀಕನಾಗಿದ್ದ ೫ನೆಯ ಬಿಲ್ಲಮನು ಚಾಲುಕ್ಯರ ಅವನತಿಯ ಲಾಭ ಪಡೆದು ಸ್ವತಂತ್ರ ದೊರೆಯಾದನು. ಈತನು ದೇವಗಿರಿಯ ನಗರವನ್ನು ಕಟ್ಟಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಕಲ್ಯಾಣ ಚಾಲುಕ್ಯರ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಹೋರಾಡಿದನು. ಕ್ರಿ.ಶ.೧೧೯೦ರಲ್ಲಾದ ಸೊರಟೂರು ಕಾಳಗದಲ್ಲಿ ಬಿಲ್ಲಮನು ಬಲ್ಲಾಳನಿಂದ ಪರಾಭವ ಹೊಂದಿದನು. ಬಿಲ್ಲಮನ ರಾಜ್ಯ ದಕ್ಷಿಣದಲ್ಲಿ ಕೃಷ್ಣ ನದಿಯವರೆಗೂ ಹಬ್ಬಿತ್ತು. ಈತನು ಕ್ರಿ.ಶ.೧೨೦೦ರವರೆಗೆ ಆಳಿದನು. ಈತನ ತರುವಾಯ ಈತನ ಮಗನಾದ ಸಿಂಘಣ ಯಾದವ ರಾಜ್ಯವನ್ನು ಆಳಿದನು.

ಸಿಂಘಣನು ಯಾದವ ದೊರೆಗಳಲ್ಲಿಯೇ ಅತ್ಯಂತ ಸಮರ್ಥ ಹಾಗೂ ಪ್ರಸಿದ್ಧ ದೊರೆ. ಈತನು ಆಡಳಿತ, ಸೈನಿಕ ಮತ್ತು ಶಿಕ್ಷಣದ ಅನುಭವವನ್ನು ಪಡೆದಿದ್ದನು. ಅಲ್ಲದೇ ಡೆಕ್ಕನ್‌ದಲ್ಲಿ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸುವ ಮಹಾತ್ವಾಕಾಂಕ್ಷೆಯನ್ನು ಹೊಂದಿದ್ದನು. ಸುರಟೂರ ಕಾಳಗದಲ್ಲಿ ಹೊಯ್ಸಳರಿಂದ ಪರಾಭವ ಹೊಂದಿದ ಸೇಡನ್ನು ತೀರಿಸಿಕೊಳ್ಳುವ ಛಲವನ್ನು ಈ ದೊರೆಯು ಹೊಂದಿದ್ದನು. ಇದರಿಂದ ಹೊಯ್ಸಳರೊಂದಿಗೆ ಸಂಘರ್ಷವಾಯಿತು. ೨ನೇ ಸಿಂಘಣನು ಬನವಾಸಿ, ಕೊಲ್ಲಾಪುರ, ಲಕ್ಕುಂಡಿ, ಪುಲಗೇರಿ, ಬೆಳ್ವಲ, ಅನಂತಪುರ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಗೆದ್ದುಕೊಂಡನು. ಹೀಗೆ ಹೊಯ್ಸಳರು ತಮ್ಮ ರಾಜ್ಯದ ಉತ್ತರ ಭಾಗಗಳನ್ನು ಕಳೆದುಕೊಂಡರು. ಪರಮಾರ ದೊರೆ ಸಬತವರ್ಮನನ್ನು ಸೋಲಿಸಿದನು. ಹೀಗೆ ಸಿಂಘಣನು ಹಲವು ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿ ಸ್ರಾಮಾಜ್ಯ ವಿಸ್ತರಿಸಿದನು. ಹಾಗಾಗಿ ಕಾಗಿನೆಲೆ ಪ್ರದೇಶವು ಕೂಡ ಈತನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಕ್ಕೆ ಅಲ್ಲಿ ದೊರೆತಿರುವ ಕ್ರಿ.ಶ.೧೨೨೮ರ ಬ್ಯಾಡಗಿಯ ಸಿದ್ದೇಶ್ವರ ದೇವಾಲಯದಲ್ಲಿರುವ(ಮುಂದುಗಡೆ) ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ಕುಂಚೂರ ಕಾಳಗದಲ್ಲಿ ಬೀಡುಗೆಯ ಮಡಿವಾಳರ ಯೋಧನೊಬ್ಬ ಮಡಿದ ವಿಷಯವನ್ನು ದಾಖಲಿಸಿದೆ. ಇದೇ ಊರಿನ ಶಾಸನವು ಬಣ್ಣಿವೂರ ಮತ್ತು ಮಲವೂರ ನಡುವಿನ(ಸೀಮೆ) ಗಡಿಯಲ್ಲಿ ನಡೆದ ಜಗಳದಲ್ಲಿ ಚಿಕ್ಕ ಎಂಬ ವೀರನು ಮರಣ ಹೊಂದಿದನೆಂದು ದಾಖಲಿಸುತ್ತದೆ. ಈ ಶಾಸನವು ಬೆಣವೂರಿನ ಬೊಪ್ಪಗೌಡರ ಮತ್ತು ಇತರ ಧೈರ್ಯವನ್ನು ಮೆಟ್ಟಿ ಮಾಡಿದ ದಾನದ ಉಲ್ಲೇಖವನ್ನು ತಿಳಿಸುತ್ತದೆ. ಸಿಂಘಣನ ನಂತರ ಮಗನಾದ ಜೈತುಗಿ ಮೊದಲೇ ಮರಣ ಹೊಂದಿದ್ದರಿಂದ ಜೈತುಂಗಿಯ ಮಗನಾದ ೨ನೇ ಕೃಷ್ಣನು ಪಟ್ಟಕ್ಕೆ ಬಂದನು.

ಈತನು ಸಹ ತನ್ನ ಅಜ್ಜನಂತೆ ಸಮರ್ಥ ದೊರೆಯಾಗಿದ್ದನು. ತನ್ನ ಸಾಮ್ರಾಜ್ಯದ ಪ್ರಾದೇಶಿಕ ಸಮಗ್ರತೆಯನ್ನು ಕಾಪಾಡಿಕೊಂಡನು. ಯಾದವರ ರಾಜಕೀಯ ಶತ್ರುಗಳಾಗಿದ್ದ ಹೊಯ್ಸಳರ ಸೊಕ್ಕನ್ನು ಮುರಿದನು. ಇವನ ನಂತರ ಸಹೋದರ ಮಹಾದೇವನು ಕ್ರಿ.ಶ.೧೨೬೧-೧೨೭೧ರಲ್ಲಿ ಅಧಿಕಾರಕ್ಕೆ ಬಂದನು. ೨ನೇ ಕೃಷ್ಣನು ೧೨೬೧ರ ಬ್ಯಾಡಗಿ ಶಾಸನದಿಂದ ಉತ್ತಮವಾದ ಆಡಳಿತವನ್ನು ನಿರ್ವಹಿಸಿಕೊಂಡು ಬಂದಿರುವುದು ತಿಳಿಯುತ್ತದೆ.

ಮಹಾದೇವನು(ಕ್ರಿ.ಶ.೧೨೬೧-೧೨೭೧)ಠಾಣದ ಶಿಲಾಹಾರ ಶಾಖೆಯ ದೊರೆ ಸೋಮೇಶ್ವರನನ್ನು ಸೋಲಿಸಿ, ಕೊಂಕಣವನ್ನು ವಶಪಡಿಸಿಕೊಂಡನು. ಈ ಸಾಧನೆಯಿಂದ ಕೊಂಕಣ ಚಕ್ರವರ್ತಿ ಎಂಬ ಬಿರುದನ್ನು ಧರಿಸಿದನು. ಗುಜರಾತಿನ ವಾಘೇಲ ವಂಶದ ಬುಸಲದೇವನನ್ನು ಪರಾಭವಗೊಳಿಸಿದನು. ಹೊಯ್ಸಳರು ಹಿಂದೆ ಕಳೆದುಕೊಂಡಿದ್ದ ಉತ್ತರ ಭಾಗದ ಪ್ರದೇಶಗಳನ್ನು ಮರಳಿ ಗಳಿಸಲು ಮಾಡಿದ ಯತ್ನವನ್ನು ಮಹಾದೇವನು ನಿಷ್ಫಲಗೊಳಿಸಿದನು. ಈತನ ನಂತರ ಇತನ ಮಗ ರಾಮಚಂದ್ರನು(ಕ್ರಿ.ಶ.೧೨೭೧-೧೩೧೨)ಪಟ್ಟಕ್ಕೆ ಬಂದನು. ಈತನು ಸಹ ತನ್ನ ಪೂರ್ವಜರಂತೆ ಹಲವು ದಿಗ್ವಿಜಯಗಳನ್ನು ಮಾಡಿದನು. ಮಾಳ್ವದ ಪರಮಾರರು, ವಾರಂಗಲ್ಲಿನ ಕಾಕತೀಯರ ಮೇಲೆ ವಿಜಯ ಸಾಧಿಸಿದನು. ನಂತರ ಇವನ ಕಾಲದಲ್ಲಿ ಪುನಃ ಹೊಯ್ಸಳ ಮತ್ತು ಯಾದವರ ನಡುವೆ ಸಂಘರ್ಷಗಳು ಆರಂಭಗೊಂಡವು. ಈ ಹೋರಾಟದಲ್ಲಿ ಯಾದವರಿಗೆ ಜಯ ಲಭಿಸಿತು. ದ್ವಾರಸಮುದ್ರಕ್ಕೆ ೧೨೭೬ರಲ್ಲಿ ಮುತ್ತಿಗೆ ಹಾಕಿ ಅಪಾರ ಸಂಪತ್ತನ್ನು ಪಡೆದುಕೊಂಡನು. ಕ್ರಿ.ಶ.೧೨೯೪ರಲ್ಲಿ ಅಲ್ಲಾವುದ್ದೀನ ಖಿಲ್ಜಿ ಯಾದವ ರಾಜಧಾನಿ ದೇವಗಿರಿಯ ಮೇಲೆ ಹಠಾತ ದಾಳಿ ಮಾಡಿ ರಾಮಚಂದ್ರನನ್ನು ಸೋಲಿಸಿ ಒಪ್ಪಂದ ಮಾಡಿಕೊಂಡನು. ಈತನ ನಂತರ ಇವನ ತಮ್ಮನಾದ ಶಂಕರದೇವನು ಅತ್ಯಲ್ಪ ಕಾಲ ಆಳಿದನು. ನಂತರ ೩ನೇಯ ಸಿಂಘಣ(ಕ್ರಿ.ಶ.೧೩೧೨-೧೩೧೩), ಹರಿಪಾಲದೇವ(ರಾಮಚಂದ್ರನ ಅಳಿಯ ಕ್ರಿ.ಶ.೧೩೧೩-೧೩೧೮), ಮೆಳಿಗಿದೇವನು(ಕ್ರಿ.ಶ.೧೩೩೩-೧೩೩೪) ಆಳಿದರು. ಇವರ ನಂತರ ದೇವಗಿರಿ ಯಾದವರು ರಾಜಕೀಯದಿಂದ ನಿರ್ಗಮಿಸಿದರು.

ಕ್ರಿ.ಶ.೧೨೪೫ರ ಮಲ್ಲೂರ ಶಾಸನವು ಶ್ರೀ ಯಾದವ ನಾರಾಯಣಂ ಭುಜಬಲ ಪ್ರತಾಪ ಚಕ್ರವರ್ತಿ ಶ್ರೀ ಸಿಂಹದೇವನೆಂದು ಉಲ್ಲೇಖಿಸುತ್ತದೆ. ಕ್ರಿ.ಶ.೧೨೫೮ರ ಕೆಂಗೂಂಡ ಶಾಸನವು ಯಾದವ ದೊರೆ ಕನ್ನರ ಬಗ್ಗೆ ತಿಳಿಸುತ್ತದೆ. ಸ್ವಸ್ತಿ ಶ್ರೀಮತ್ ಯಾದವನ ರಾಯಾಭುಜಬಲಪ್ರತಾಪ ಚಕ್ರವರ್ತಿ ವೀರಕಾಲಧಾರದೇವ ಎಂದಿದೆ. ಈ ರೀತಿ ಯಾದವರು(ಸೇವಣರು) ಕಾಗಿನೆಲೆ ಮತ್ತು ಬ್ಯಾಡಗಿಯ ಸುತ್ತಮುತ್ತಲ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ.[೩೪]

ಹೊಯ್ಸಳರು

ಸೇವುಣರ ಆಳ್ವಿಕೆ ಕೊನೆಗೊಂಡ ನಂತರ ದಕ್ಷಿಣ ಕರ್ನಾಟಕ ಮತ್ತು ಸುತ್ತಲಿನ ಭಾಗಗಳನ್ನು ಆಳಿದ ರಾಜಮನೆತನ ಹೊಯ್ಸಳರು. ಈ ವಂಶದ ಅರಸರ ರಾಜಧಾನಿ ಮೊದಲು ಶಶಾಕಪುರ ಅಥವಾ ಸೊಸೆವೂರು(ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಅಂಗಡಿ) ಅನಂತರ ಬೇರೂರು ಮತ್ತು ದ್ವಾರಸಮುದ್ರ. ಮಲೆನಾಡಿನ ಒಂದು ಚಿಕ್ಕ ಪಾಳೆಯ ಪಟ್ಟಾಗಿ ಆರಂಭವಾಗಿ ತತ್ಕಾಲಿನ ಅಸ್ಥವ್ಯಸ್ಥ ರಾಜಕೀಯ ಪರಿಸ್ಥಿತಿಯ ಲಾಭ ಪಡೆದು ಮೊದಲು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ನೆಲೆಗೊಂಡು, ಮುಂದೆ ಶೌರ್ಯ ಹಾಗೂ ಸಾಮರ್ಥ್ಯದಿಂದ ರಾಜ್ಯ ವಿಸ್ತಾರ

ಮಾಡಿ, ಸ್ವತಂತ್ರರಾಗಿ ತಮ್ಮ ಪ್ರಭಾವವನ್ನು ತಮಿಳುನಾಡಿಗೂ ವಿಸ್ತರಿಸಿ ನಾಡಿನ ಆರ್ಥಿಕ, ಸಾಂಸ್ಕೃತಿಕ ರಂಗಳಲ್ಲಿ ಉನ್ನತ ಸಾಧನೆಗಳಿಗೆ ಪ್ರೋತ್ಸಾಹ ನೀಡಿ ಸುಮಾರು ೩ ಶತಮಾನಗಳಿಗೂ ಹೆಚ್ಚು ಕಾಲ ವೈಭವೋತವಾಗಿ ಮೇರೆದ ಈ ರಾಜವಂಶದ ಇತಿಹಾಸ ಕರ್ನಾಟಕ ಇತಿಹಾಸದ ಒಂದು ಮುಖ್ಯ ಅಧ್ಯಾಯ. ಕಾಗಿನೆಲೆ ಶಾಸನಗಳನ್ನು ಅವಲೋಕಿಸಿ ನೋಡಿದಾಗ ಹೊಯ್ಸಳರ ಸಾಮ್ರಾಜ್ಯದ ಆಳ್ವಿಕೆ ೨ನೇ ವೀರಬಲ್ಲಾಳನ ಕಾಲದಿಂದ ರಾಜಕೀಯ ಇತಿಹಾಸವು ಪ್ರಾರಂಭ ವಾಗುತ್ತದೆ.[೩೫] ಕ್ರಿ.ಶ.೧೨೦೪ರ ಸಾತೇನಹಳ್ಳಿಯ ಶಾಸನದಲ್ಲಿ[೩೬] ಒಂದು ಪ್ರಮುಖ ಬಣರದಪಟ್ಟಣ, ನಾಗರಖಂಡ-೭೦ನ್ನು ಬೊಮ್ಮನು ಆಳುತ್ತಿದ್ದು ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿದ ವಿಚಾರವಿದೆ. ನಂತರ ಸಿಂಘಣನ ಕಾಲದ ಅನೇಕ ಶಾಸನಗಳು ದೊರೆತಿದ್ದು ಹೆಚ್ಚು ವೀರಗಲ್ಲು ಗಳಾಗಿವೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹೊಯ್ಸಳರು ಈ ಭಾಗದಲ್ಲಿ ಆಡಳಿತ ಸ್ಥಾಪಿಸಿದ್ದು ಸರಿ. ಆದರೆ ಇವರ ಶಾಸನಗಳು ಅಷ್ಟಾಗಿ ಈ ಜಿಲ್ಲೆಯಲ್ಲಿ ದೊರೆಯದಿರುವುದು ಒಂದು ವಿಷಾದದ ಸಂಗತಿಯಾಗಿದೆ.

ವಿಜಯನಗರ ಸಾಮ್ರಾಜ್ಯ (೧೩೩೦–೧೬೪೬)

ಕ್ರಿ.ಶ.೧೩೭೦ರ ಹೊತ್ತಿಗೆ ಕರ್ನಾಟಕ ರಾಜಕೀಯ ಚರಿತ್ರೆಯನ್ನು ಅಮೂಲಾಗ್ರ ಬದಲಾವಣೆಯಾಯಿತು. ಸೇವುಣರು ಮತ್ತು ಕಾಕತೀಯರ ರಾಜ್ಯಗಳು ಉತ್ತರದ ಮುಸಲ್ಮಾನ ರಾಜ್ಯಗಳಿಗೆ ತುತ್ತಾಗಿದ್ದವು. ಅದರ ಮುಂದೆ ಈ ದಾಳಿಯ ಬಿಸಿ ಹೊಯ್ಸಳ ರಾಜ್ಯದವರೆಗೂ ತಟ್ಟಿ ಅಂದಿನ ರಾಜಕೀಯದಲ್ಲಿ ಹಿಂದೂಗಳಿಗೆ ಒಗ್ಗಟ್ಟಿಲ್ಲದ ಕಾರಣ ಮಹತ್ತರವಾದ ಕೊಡಲಿ ಪೆಟ್ಟು ಬಿದ್ದಿತು. ಅದನ್ನು ಮನಗಂಡು ವಿದ್ಯಾರಣ್ಯರು ಸ್ವತಂತ್ರ ಹಿಂದೂ ಸಾಮ್ರಾಜ್ಯ ಸ್ಥಾಪಿಸಿ ಮುಸಲ್ಮಾನರ ವಿರುದ್ಧ ಹೋರಾಟದ ನಂತರ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರು.

೧ನೆಯ ಹರಿಹರ ವಿಜಯನಗರ ಸಾಮ್ರಾಜ್ಯದ ಪ್ರಥಮ ದೊರೆಯಾದನು. ಅತ್ಯಂತ ಸೂರನು, ಯುದ್ಧ ತಂತ್ರ ನಿಪುಣನು, ದೂರ ದೃಷ್ಟಿವುಳ್ಳವನಾಗಿದ್ದನು. ಉನ್ನತ ವಿಚಾರವಾದಿಯೂ ಆದಂತಹ ಹರಿಹರನು ಮುಸಲ್ಮಾನರ ದಾಳಿಯಿಂದ ತುತ್ತಾಗಿದ್ದ ಒಂದೊಂದೇ ರಾಜ್ಯವನ್ನು ಓಡಿಸುತ್ತಾ, ದಕ್ಷಿಣಾ ಭಾರತದಲ್ಲಿ ವಿಶಾಲ ಸಾಮ್ರಾಜ್ಯ ಕ್ರಿ.ಶ.೧೩೪೭ರಲ್ಲಿ ಬಹುಮನಿ ಸಾಮ್ರಾಜ್ಯ ಉದಯ ವಾಯಿತು. ಅಲ್ಲಾವುದ್ದೀನ ಹಸನ್ ಬಹುಮನ್ ಷಾ ಪ್ರಥಮ ರಾಜನಾದನು. ಬಹುಮನಿ ಮತ್ತು ವಿಜಯನಗರದ ನಡುವಿನ ವೈಷ್ಯಮ್ಯ ತಲತಲಾಂತರಗಳಿಂದಲೂ ಮುಂದುವರಿಯಿತು.[೩೭]

ಇವನ ನಂತರ ಕ್ರಿ.ಶ.೧೩೫೬ರಲ್ಲಿ ೧ನೇ ಬುಕ್ಕ ಪಟ್ಟಾಭಿಷಕ್ತನಾದನು. ಬುಕ್ಕನ ರಾಜಕೀಯ ಸಾಧನೆಯಲ್ಲಿ ಚಂಗಲಪೇಟೆಯ ಶಂಭುವರಾಯನನ್ನು ಸೋಲಿಸಿದನು. ನಂತರ ಮಧುರೈಯ ಮೇಲೆ ದಾಳಿ ಮಾಡಿ ಮಧುರೈಯ ರಾಜನಾದ ಮಹಮ್ಮದನನ್ನು ಕೊಂದು ಮಧುರೈಯನ್ನು ವಶಪಡಿಸಿಕೊಂಡನು. ಇದೇ ಸಮಯದಲ್ಲಿ ಉದಯಿಸಿದ ಬಹುಮನಿ ಸಾಮ್ರಾಜ್ಯದವರು ರಾಜ್ಯ

ವಿಸ್ತರಣೆಗಾಗಿ ಯುದ್ಧಯಾತ್ರೆ ಆರಂಭಿಸಿದರು. ಕೃಷ್ಣಾ ನದಿಯವರೆಗೂ ವಿಜಯನಗರ ಮತ್ತು ಬಹುಮನಿ ಸಾಮ್ರಾಜ್ಯವು ವಿಸ್ತರಿಸಲ್ಪಟ್ಟಿತು.

ಕೃಷ್ಣಾ ನದಿ ಹರಿದ ಪ್ರದೇಶವೇ ಒಂದು ಸಾಮ್ರಾಜ್ಯದ ಸೀಮಾ ರೇಖೆಯಾಯಿತು. ಇದೇ ಸಮಯದಲ್ಲಿ ಮುಸಲ್ಮಾನರ ರಾಜ್ಯದಲ್ಲಿ ಬಿರುಕು ಉಂಟಾಗಿ ಬಿಜಾಪುರ, ಬೀದರ, ಅಹಮ್ಮದನಗರ, ಗೊಲ್ಕಂಡ ಎಂಬ ನಾಲ್ಕು ಭಾಗವಾಯಿತು. ಬಹುಮನಿ ಸುಲ್ತಾನರೊಂದಿಗೆ ಬುಕ್ಕರಾಯನ ಎರಡು ಭಾರಿ ಯುದ್ಧಗಳಾದವು. ಕ್ರಿ.ಶ.೧೩೬೮ರಲ್ಲಿ ಬುಕ್ಕರಾಯನು ಕೋಟೆಯನ್ನು ಗೆದ್ದುಕೊಂಡನು. ಇವನು ಧಾರ್ಮಿಕ ಸಾಧನೆಗಳು ಪ್ರಮುಖವಾದಂತಹ ಜೈನ ಮತ್ತು ವೈಷ್ಣವರಲ್ಲಿದ್ದ ವೈಷಮ್ಯವು ಕಡಮೆಯಾಯಿತು.

ಇವನ ನಂತರ ೭ನೇ ಹರಿಹರನು ಅಧಿಕಾರಕ್ಕೆ ಬಂದನು. ಇವನ ಸಾಧನೆಯಲ್ಲಿ ಪಶ್ಚಿಮದ ಕರಾವಳಿ ಪ್ರದೇಶಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿದ್ದನ್ನಲ್ಲದೇ ಕ್ರಿಶ೧೩೯೫ರಲ್ಲಿ ಮೊದಲನೆಯ ಭಾರಿ ದಾಳಿ ಮಾಡಿದನು. ೨ನೆಯದಾಗಿ ಬಹುಮನಿ ಸುಲ್ತಾನರೊಂದಿಗೆ ಕ್ರಿ.ಶ.೧೩೯೮–೯೯ರಲ್ಲಿ ಯುದ್ಧವಾಯಿತು. ಮೂರನೆಯದಾಗಿ ಕ್ರಿ.ಶ.೧೩೯೮ರಲ್ಲಿ ಪಂಗಲೆ ಕೋಟೆಯನ್ನು ವಶಪಡಿಸಿಕೊಂಡನು. ಈತನ ಕಾಗಿನೆಲೆ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾನೆ ಎಂಬುದಕ್ಕೆ ಹಿರೇಹಳ್ಳಿಯ ತದೆರಹಿತ ಶಾಸನದಲ್ಲಿ ೨ನೇ ಹರಿಹನ ಕಾಲದಲ್ಲಿ ವೀರನೊಬ್ಬನು ಮರಣ ಹೊಂದಿದ ಉಲ್ಲೇಖ ಮತ್ತು ವೀರನ ತಂದೆ ತಾಯಂದಿರ ಹೆಸರು ಪ್ರಸ್ತಾಪವಿದೆ. ಕ್ರಿ.ಶ.೧೪೦೩ರ ಬ್ಯಾಡಗಿ ಶಾಸನದಲ್ಲಿ ವೀರನೊಬ್ಬ ಹರಿಹರನ ಕಾಲದಲ್ಲಿ ಮರಣ ಹೊಂದಿದ ಕುರಿತು ತಿಳಿಯಪಡಿಸಲಾಗಿದೆ. ಇವೆಲ್ಲವನ್ನು ಗಮನಿಸಿ ನೋಡಿದಾಗ ಹರಿಹರನು ಕಾಗಿನೆಲೆ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿರುವ ಸಂಗತಿ ತಿಳಿದುಬರುತ್ತದೆ.[೩೮]

ಈತನ ತರುವಾಯ ಕ್ರಿ.ಶ.೧೪೦೬ರಲ್ಲಿ ೧ನೆಯ ಹರಿಹನು ಅಧಿಕಾರಕ್ಕೆ ಬಂದನು ಇವನ ಆಳ್ವಿಕೆ ಕಾಲದಲ್ಲಿ ಹೆಚ್ಚು ಯುದ್ಧಗಳು ಜರುಗಿದವು. ಇವನ ಸಾಧನೆಗಳಲ್ಲಿ ಪ್ರಮುಖವಾದದು ವಿಜಯನಗರ ಸಾಮ್ರಾಜ್ಯವನ್ನು ಗೋದಾವರಿ ನದಿಯ ತೀರದ ವರೆಗೆ ವಿಸ್ತರಿಸಿರುವುದು ಕಂಡುಬರುತ್ತದೆ.

ನಂತರ ೨ನೇ ದೇವರಾಯ ಕ್ರಿ.ಶ.೧೪೨೪–೪೬ರಲ್ಲಿ ೧ನೇ ಹರಿಹರನ ತುರುವಾಯ ಅಧಿಕಾರಕ್ಕೆ ಬಂದನು ಇವನ ಕಾಲದಲ್ಲಿ ಬಹುಮನಿ ರಾಜ್ಯದೊಂದಿಗೆ ೩ ಬಾರಿ ಯುದ್ಧ ಮಾಡಿ ಸಿಲೋನದವರೆಗೆ ರಾಜ್ಯ ವಿಸ್ತರಣೆ ಮಾಡಿದನು. ಇವನ ನಂತರ ಮಲ್ಲಿಕಾರ್ಜುನ ಆಳ್ವಿಕೆಗೆ ಬಂದನು ಈತನ ಕಾಲದಲ್ಲಿ ಅಷ್ಟೊಂದು ರಾಜಕೀಯ ಬೆಳವಣಿಗೆಗಳು ಕಂಡುಬರುವುದಿಲ್ಲ. ಇಲ್ಲಿಗೆ ಸಂಗಮ ವಂಶದ ಆಳ್ವಿಕೆ ಕೊನೆಗೊಂಡು ಸಾಳ್ವ ವಂಶದ ಆಳ್ವಿಕೆ ಆರಂಭವಾಯಿತು.[೩೯]

ಸಾಳುವ ವಂಶ ಕ್ರಿ.ಶ.೧೪೮೫ರಲ್ಲಿ ಅಸ್ತಿತ್ವಕ್ಕೆ ಬಂದು ಒಂದನೆಯ ನರಸಿಂಹನು ಈ ವಂಶದ ಮೊದಲ ಅರಸನಾಗಿದ್ದನು. ಈ ಮನೆತನದ ಅರಸರು ಅಸಮರ್ಥರಾಗಿದ್ದರಿಂದ ಕ್ರಿ.ಶ.೧೫೦೫ರಲ್ಲಿ ಈ ಮನೆತನದ ಆಳ್ವಿಕೆಯೂ ಕೊನೆಗೊಂಡಿತು.

ಮುಂದೆ ಸಾಳುವ ವಂಶದ ವೀರನರಸಿಂಹನು ವಿಜಯನಗರದಲ್ಲಿ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿ ಕ್ರಿ.ಶ.೧೫೦೫–೧೫೦೯ರ ವರೆಗೆ ಆಳ್ವಿಕೆ ಮಾಡಿದನು. ಆದರೆ ಇವನ ನಂತರ ವಿಜಯನಗರ

ಶ್ರೇಷ್ಠ ಅರಸನಾದ ಶ್ರೀ ಕೃಷ್ಣದೇವರಾಯನು ಕ್ರಿ.ಶ.೧೫೦೯-೧೫೨೯ರವರೆಗೆ ಆಳ್ವಿಕೆ ಮಾಡಿದನು. ಇವನ ಸೈನಿಕ ಸಾಧನೆಯನ್ನು ಪೋರ್ಚಗೀಸರ ಮೇಲೆ ದಾಳಿ ಮಾಡಿ ಉಮ್ಮತ್ತೂರಿನ ಗಂಗರಾಜನನ್ನು ಸದೆ ಬಡಿದನು. ಕ್ರಿ.ಶ.೧೫೧೦೮ರಲ್ಲಿ ಒಡಿಸ್ಸಾದ ಗಜಪತಿ ಪ್ರತಾಪರುದ್ರನನ್ನು ಬಗ್ಗು ಬಡಿದನು. ನಂತರ ಗೋವಾಳಗುಂಡದ ರಾಜನನ್ನು ಸಂಪೂರ್ಣವಾಗಿ ಸೋಲಿಸಿ ಗುಲಬರ್ಗಾದ ಮೇಲೆ ಆಕ್ರಮಣ ಮಾಡಿದನು. ಹೀಗೆ ದಕ್ಷಿಣ ಭಾರತದ್ಯಾದಂತ ವಿಜಯನಗರ ಸಾಮ್ರಾಜ್ಯದ ಕೀರ್ತಿ ಪತಾಕೆಯನ್ನು ಹಾರಿಸಿದನು. ಇವನ ನಂತರ ಕ್ರಿ.ಶ.೧೫೨೯ರಲ್ಲಿ ಅಚ್ಚುತರಾಯನು ಅಧಿಕಾರಕ್ಕೆ ಬಂದನು. ಇವನ ಕಾಲದಲ್ಲಿ ವಿಜಾಪುರ ಸುಲ್ತಾನರು ಮತ್ತೆ ಯುದ್ಧ ಆರಂಭಿಸಿದರು. ನಂತರ ಕ್ರಿ.ಶ.೧೫೪೩ರಲ್ಲಿ ರಾಮರಾಯನು ಅಧಿಕಾರಕ್ಕೆ ಬಂದನು ಇವನ ಕಾಲದಲ್ಲಿ ವಿಜಯನಗರ ಇತಿಹಾಸದಲ್ಲಿಯೇ ಮಹತ್ವದ ಘಟನೆ ನಡೆಯಿತು. ಕ್ರಿ.ಶ.೧೫೬೫ರಲ್ಲಿ ರಕ್ಕಸ ತಂಗಡಿಯಲ್ಲಿ ಬಿಜಾಪುರ ಸುಲ್ತಾನರಿಗೂ ವಿಜಯನಗರ ರಾಮರಾಯನಿಗೂ ನಡೆದ ನಿರ್ಣಯಕ ಯುದ್ಧದಲ್ಲಿ ವಿಜಯನಗರ ಸೈನ್ಯವು ಸಂಪೂರ್ಣವಾಗಿ ಸೋತು ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.[೮೦]

ಅಡಿಟಿಪ್ಪಣಿಗಳು

೧. **ಭಾರತೀಯ ಸಾಮಾಜಿಕ ಸಂಸ್ಥೆಗಳು,** ಪು.೧೦೮

೨. **ಅಂಕಿಸಂಖ್ಯೆಗಳ ವಿಭಾಗ,** ಬ್ಯಾಡಗಿ ತಹಶೀಲ್ದಾರ ಕಚೇರಿ

೩. ಸೂರ್ಯನಾಥ ಯು.ಕಾಮತ್, **ದಾವಣಗೆರೆ ಜಿಲ್ಲೆ,** ಪು.೫೨

೪. ಶಿವತಾರಕ ಕೆ.ಬಿ., **ಕರ್ನಾಟಕ ಪುರಾತತ್ವ ನೆಲೆಗಳು,** ಪು.೬೨-೬೩೦

೫. ದಿವಾಕರ್ ಆರ್.ಆರ್., ೧೯೭೨, **ಕರ್ನಾಟಕ ಪರಂಪರೆ,** ಸಂ.೧, ಪು.

೬. ಶ್ರೀನಿವಾಸ ಪಾಡಿಗಾರ, ೧೯೮೧, **ಭಾರತೀಯ ಶಾಸನ ಆಕರಗಳು,** ಪು.೪

೭. ಸೂರ್ಯನಾಥ ಯು.ಕಾಮತ್, ೧೯೮೬, **ಧಾರವಾಡ ಜಿಲ್ಲಾ ಗ್ಯಾಸೆಟಿಯರ್,** ಪು.೫೫

೮. ದಿವಾಕರ್ ಆರ್.ಆರ್., **ಪೂರ್ವೋಕ್ತ,** ಪು.೨೩೭-೨೫೬

೯. ಸೂರ್ಯನಾಥ ಯು.ಕಾಮತ್, **ಪೂರ್ವೋಕ್ತ,** ಪು.೫೫

೧೦. ಎಫ್.ಎಂ.ಸಂ.xxxii, ಪು.೩೧೭-೩೨೪

೧೧. ಸೂರ್ಯನಾಥ ಯು.ಕಾಮತ್, **ಕರ್ನಾಟಕ ಸಂಕ್ಷಿಪ್ತ ಚರಿತ್ರೆ,** ಪು.೭೫

೧೨. ತಿಪ್ಪೇರುದ್ರಸ್ವಾಮಿ ಎಚ್., ೨೦೧೦, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಪು.೧೧೦-೧೨

೧೩. ನಾಯಕ ಹಾ.ಮಾ.(ಸಂ), ೨೦೦೫, **ಕನ್ನಡ ವಿಷಯ ವಿಶ್ವಕೋಶ,** ಪು.೮೩೫

೧೪. ಅದೇ ಪು.೮೩೫

೧೫. ಅದೇ, ಪು.೮೩೬

೧೬. ಅದೇ, ಪು.೮೩೬

೧೭. ಕಲಬುರ್ಗಿ ಎಂ.ಎಂ., ೧೯೭೫, **ಧಾರವಾಡ ಜಿಲ್ಲಾ ಶಾಸನ ಸೂಚಿ ಸಂಪುಟ.೨೬,** ಪು.೨೮

೧೮. ಸೂರ್ಯನಾಥ ಯು.ಕಾಮತ್, **ಪೂರ್ವೋಕ್ತ,** ಪು.೬೬

೧೯. ಅದೇ, ಪು.೬೭

೨೦. ಅದೇ, ಪು.೬೭

೨೧. ಕಲಬುರ್ಗಿ ಎಂ.ಎಂ., ೧೯೭೫, **ಪೂರ್ವೋಕ್ತ,** ಪು.೫೨

೨೨. ಸೌ.ಇ.ಇ.ಸಂ., ಪು.೯೮

೨೩. ಕಲಬುರ್ಗಿ ಎಂ.ಎಂ., ೧೯೭೫, **ಪೂರ್ವೋಕ್ತ,** ಪು.೫೨

೨೪. ಅದೇ, ಪು.೫೦

೨೫. ಸೂರ್ಯನಾಥ ಯು.ಕಾಮತ್, **ಧಾರವಾಡ ಜಿಲ್ಲಾ ಗ್ಯಾಸೆಟಿಯರ್,** ಪು.೬೯–೭೦

೨೬. ಅದೇ, ಪು.೭೦

೨೭. ಕಲಬುರ್ಗಿ ಎಂ.ಎಂ., ೧೯೭೫, **ಪೂರ್ವೋಕ್ತ,** ಪು.೫೨

೨೮. ಕ.ಇ.ಸಂ.VI, ಪು.೨೭

೨೯. ಸೂರ್ಯನಾಥ ಯು.ಕಾಮತ್, **ಪೂರ್ವೋಕ್ತ,** ಪು.೭೧

೩೦. ಕಲಬುರ್ಗಿ ಎಂ.ಎಂ., ೧೯೭೫, **ಪೂರ್ವೋಕ್ತ,** ಪು.೫೩

೩೧. ಅದೇ, ಪು.೭೧

೩೨. ದೇಸಾಯಿ ಪಿ.ಬಿ., **ಕರ್ನಾಟಕ ಇತಿಹಾಸ,** ಪು.೧೯೪

೩೩. ಸುಭಾಸ್ ಬ್ಯಾಡಗಿ ಸುತ್ತಮುತ್ತಲಿನ ಜಾನಪದ ಒಂದು ಅಧ್ಯಯನ, ಪು.೩೫

೩೪. ಅದೇ, ಪು.೩೬–೩೭

೩೫. ನಾಯಕ ಹಾ.ಮಾ.(ಸಂ), ೨೦೦೫, **ಕನ್ನಡ ವಿಷಯ ವಿಶ್ವಕೋಶ,** ಪು.೧೧೪೧–೪೨

೩೬. ಕ.ಇ.ಸಂ.IV, ಪು.೯೬೦

೩೭. ಹೊನ್ನಲಿಂಗಯ್ಯ ಎಸ್.ಆರ್., **ಕರ್ನಾಟಕದ ಕೈಫಿಯತ್ತುಗಳು**, ಪು.೪೪

೩೮. ಕಲಬುರ್ಗಿ ಎಂ.ಎಂ., ೧೯೭೫, **ಪೂರ್ವೋಕ್ತ**, ಪು.೭೧

೩೯. ಬೆಳಗಾಂ ಜಿಲ್ಲಾ ಗ್ಯಾಸೆಟಿಯರ್, ಪು.೧೦೧

೪೦. ಮಹಮ್ಮದ್ ಹಬಿಬ್ ಮತ್ತು ನಿಜಾಮಿ ಕೆ.ಎ., **ದೆಹಲಿ ಸುಲ್ತಾನರು**, ಪು.೯೭೦

ಅಧ್ಯಾಯ ಮೂರು

ಮೌಖಿಕ ಆಕರಗಳು

ಅಧ್ಯಾಯ ಮೂರು

ಮೌಖಿಕ ಆಕರಗಳು

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯ ನಿರ್ಮಾಣದಲ್ಲಿ ಪ್ರಧಾನ ಪಾತ್ರವಹಿಸುವ ಅಂಶಗಳನ್ನು ಸ್ಥಳನಾಮ ಮತ್ತು ಸ್ಥಳಪುರಾಣಗಳು ಐತಿಹ್ಯ ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಕಾಗಿನೆಲೆ ಪರಿಸರದ ಸ್ಥಳನಾಮ ಸ್ಥಳಪುರಾಣ ಕುರಿತು ವಿಶ್ಲೇಷಿಸಲಾಗಿದೆ.

ಸ್ಥಳನಾಮ

ಅಲೆಮಾರಿ ಜೀವನದಿಂದ ಆರಂಭವಾದ ಮಾನವರ ಬದುಕು ಕ್ರಮೇಣ ಕೃಷಿಯ ಆರಂಭದೊಂದಿಗೆ ಒಂದೆಡೆ ನೆಲೆ ನಿಲ್ಲುವಂತಾಯಿತು. ಅಲೆಮಾರಿ ಸಮುದಾಯಗಳು ಭೌಗೋಳಿಕ ಪರಿಸರದ ಗವಿ, ಬಂಡೆ, ಬೆಟ್ಟದ ಅಂಚಿನಲ್ಲಿ ತುಂಗುತ್ತಿದ್ದರು. ಕೆಲವು ಹಂತಗಳಲ್ಲಿ ಅಲೆಮಾರಿತನವನ್ನು ತೂರದ ಸಮುದಾಯಗಳು ಒಟ್ಟಿಗೆ ಬದುಕುವುದನ್ನು ಆರಂಭಿಸಿದವು. ಈ ಹಂತದಲ್ಲಿ ಪ್ರಕೃತಿನಿಷ್ಠ ಗ್ರಾಮನಾಮಗಳು ಹುಟ್ಟಿಕೊಂಡರೂ ಕಾಲಾನಂತರದಲ್ಲಿ ವ್ಯಕ್ತಿವಾಚಕ, ಸಮುದಾಯವಾಚಕ ಮತ್ತು ವಸ್ತುವಾಚಕ ಮುಂತಾದವುಗಳಿಂದ ಗ್ರಾಮನಾಮವನ್ನು ಹೆಸರಿಸಲಾಯಿತು. ಒಂದು ಗ್ರಾಮ ಸಮಾಜದ ಒಟ್ಟು ಸಂಸ್ಕೃತಿಯನ್ನು ಒಂದು ರೂಪ ರೇಷೆಯ ಮಾದರಿಯಲ್ಲಿ ಹೆಸರುಗಳು ಒಳಗು ಮಾಡಿಕೊಂಡು ಪ್ರತಿನಿಧಿಸುತ್ತಿರುತ್ತವೆ. ಈ ಕಾರಣದಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಸ್ಥಳನಾಮಗಳ ಮಹತ್ವದ ಪಾತ್ರವನ್ನು ಹೊಂದಿರುತ್ತವೆ.

ಸ್ಥಳನಾಮ ಮೊದಲು ಪ್ರಾರಂಭಿಸಿದವರು ವಿದೇಶಿಯರು. ಜರ್ಮನಿಯ ಗಾಟ್‌ಫ್ರೀಡ್ ವಿಲ್‌ಹೆಲ್ಮ್ ಮುಂತಾದವರು. ಆದರೆ ಭಾರತದಲ್ಲಿ ಮೊದಲು ಸ್ಥಳನಾಮಕ್ಕೆ ಭದ್ರ ಕೋಟೆ ಹಾಕಿದವನು ಹೆಚ್.ಡಿ.ಸಂಕಾಲಿಯಾರವರು.[೧]

ಸ್ಥಳನಾಮಗಳು ಜೀವಂತ ಪಳೆಯುಳಿಕೆಗಳು ಇದ್ದ ಹಾಗೆ ಅವುಗಳನ್ನು ಇತಿಹಾಸಕಾರರು ಶಾಸ್ತ್ರಕ್ಕನುಗುಣವಾಗಿ ನೋಡಿದಾಗ ಸ್ಥಳನಾಮಗಳ ಕುತುಹಲಕಾರಿ (ನಿಜ ಸಂಗತಿಗಳು) ಹೊರಬರಲಾಗಿದೆ. ಭೌಗೋಳಿಕ ಚಾರಿತ್ರಿಕ ಅಂಶಗಳ ಮೇಲೆ ಸ್ಥಳನಾಮಗಳು ಹೊಸ ಬೆಳಕನ್ನು

ಚೆಲ್ಲುತ್ತವೆ. ಮತ್ತು ಅವುಗಳ ಹೋಲಿಕೆಯನ್ನು ಕಾಣಲು ಸಹಾಯಕಾರಿಯಾಗುತ್ತದೆ ಎಂದು ತಜ್ಞರ ಅಭಿಪ್ರಾಯವಾಗಿದೆ.[೨]

ಸ್ಥಳನಾಮಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರಮುಖತೆಯನ್ನು ಪಡೆದುಕೊಂಡಿವೆ. ಸ್ಥಳನಾಮವು ಇದು ವೈಜ್ಞಾನಿಕ ಅಧ್ಯಯನಗಳಲ್ಲಿ ಒಂದಾಗಿದ್ದು ಇಲ್ಲಿ. ಒಂದು ಮಗು ಹುಟ್ಟಿದ ಮೇಲೆ ಇಡುವ ಹೆಸರನ್ನು ಅಥವಾ ಅಡ್ಡ ಹೆಸರನ್ನು ಕೊಡುವುದು ಪ್ರಾಕೃತಿಕವಾಗಿದೆ.

ಗ್ರಾಮಗಳ ಕುರಿತು ಅಧ್ಯಯನ ಕೈಗೊಂಡಂತಹ ಸಂದರ್ಭದಲ್ಲಿ ಅವುಗಳ ನಿರ್ಣಯ ನಿಷ್ಪತ್ತಿಗಳು ಪ್ರಮುಖ ಅಂಶಗಳಾಗಿವೆ. ಇಂತಹವುಗಳನ್ನು ಸರಿಯಾಗಿ ಹುಡಿಕಿ ಅಧ್ಯಯನ ಕೈಗೊಳ್ಳುವುದು ಸೂಕ್ತವಾದುದ್ದಾಗಿದೆ.[೩] ಎಂ.ಎಂ.ಕಲಬುರ್ಗಿಯವರು ಹೇಳಿರುವಂತೆ ಗ್ರಾಮಗಳ ಹೆಸರಿನ ಕುರಿತು ೩ ನಿಷ್ಪತ್ತಿಗಳು ಕೇಳಿಬರುತ್ತವೆ.[೪]

೧. ಜಾನಪದ ನಿಷ್ಪತ್ತಿ(ಪಾಮರ)

೨. ಪಂಡಿತ ನಿಷ್ಪತಿ

೩. ನಿಜ ನಿಷ್ಪತಿ

ಇವುಗಳಲ್ಲಿ ಮೊದಲ ೨ನ್ನು ಕಲ್ಪನೆಯ ಮೂಲಕ ಕಟ್ಟಲಾಗುವುದು. ಮೂರನೆಯದು ಸತ್ಯಸಂಗತಿಯನ್ನು ಒಳಗೊಂಡಿದೆ. ಸ್ಥಳನಾಮವು ಒಂದು ಪ್ರದೇಶದ ಸಂಸ್ಕೃತಿ, ಆಚಾರ, ವಿಚಾರ, ಜೀವನ ಕ್ರಮ ಹಲವಾರು ವಿಚಾರಗಳನ್ನು ಒಳಗೊಂಡಂತೆ ಅಲ್ಲಿನ ಸ್ಥಳನಾಮಗಳು ಅಥವಾ ಗ್ರಾಮನಾಮಗಳ ಉಲ್ಲೇಖಗಳು ಕಂಡುಬರುತ್ತದೆ. ಹೀಗಾಗಿ ಕಾಗಿನೆಲೆ ಪರಿಸರದ ಕೆಲವು ಗ್ರಾಮಗಳ ಕುರಿತು ಲಭ್ಯವಾಗಿರುವ ಸ್ಥಳನಾಮಗಳನ್ನು ತಿಳಿಯುವಂತಹ ಪ್ರಯತ್ನ ಮಾಡಲಾಗಿದೆ.

ವರ್ಗಗಳು

ಒಂದು ಪ್ರದೇಶದಲ್ಲಿ ವ್ಯಕ್ತಿಯು ವಾಸಸ್ಥಳವನ್ನೇ ಖಚಿತಪಡಿಸುವ ಸ್ಥಳನಾಮ ಅಥವಾ ಗ್ರಾಮನಾಮಗಳ ಕೊನೆಯ ಪದಗಳನ್ನು ಅನೇಕ ವರ್ಗಗಳಾಗಿ ವಿಂಗಡಿಸಬಹುದು. ಹೀಗಾಗಿ ಕಾಗಿನೆಲೆಯ ಪರಿಸರಕ್ಕೆ ಸಂಬಂಧಿಸಿರುವಂತೆ ಕಂಡುಬರುವ ಪದಗಳು ಅಥವಾ ವರ್ಗಗಳೆಂದರೆ ಪುರ, ಹಳ್ಳಿ, ಊರು, ಕೊಪ್ಪ, ಪೂಜೆ, ಅಣಜಿ, ವಡಿ ಅಂಬಿ, ಕಟ್ಟಿ ಈ ರೀತಿಯಾಗಿ ಅವುಗಳನ್ನು ಹೆಸರಿಸಬಹುದು.

೧. **ಪುರ:** ಪುರಗಳಿಂದ ಕೊನೆಗೊಳ್ಳುವ ಸ್ಥಳಗಳ, ಊರುಗಳಿಗಿಂತ ದೊಡ್ಡವು ಗಾತ್ರದಲ್ಲಿರುತ್ತದೆ. ಉದಾ: ಗುಡ್ಡದ ಮಲ್ಲಾಪುರ, ತಿಪಲಾಪುರ, ತಿಮ್ಮಾಪುರ.

೨. **ಹಳ್ಳಿ:** ಪುರದಂತೆ ಹಳ್ಳಿಯು ವಾಸಸ್ಥಾನವನ್ನು ಕುರಿತು ತಿಳಿಯಪಡಿಸುವ ಕೆಲವು ಸ್ಥಳನಾಮಗಳನ್ನು ಕಾಣಬಹುದು. ಉದಾ: ಹಿರೇಹಳ್ಳಿ, ಬನ್ನಿಹಳ್ಳಿ, ಚಿಕ್ಕಳ್ಳಿ

೩. **ಊರು:** ಹಳ್ಳಿಯಂತೆ ಕೊನೆಗೊಳ್ಳುವ ಊರು ಸ್ಥಳನಾಮದ ಕುರಿತು ತಿಳಿಯಪಡಿಸುತ್ತವೆ. ಉದಾ: ಕುಮ್ಮೂರ, ಮತ್ತೂರ, ಚಿಕ್ಕಬಸೂರು

೪. **ಕೊಪ್ಪ:** ಹಳ್ಳಿಯಂತೆ ಕೊನೆಗೊಳ್ಳುವ ಕೊಪ್ಪವು ಕೂಡ ಗ್ರಾಮಗಳ ಸ್ಥಳನಾಮದ ಕುರಿತು ತಿಳಿಯಪಡಿಸುತ್ತದೆ. ಉದಾ: ಧೂಳಿಕೊಪ್ಪ, ದಾಸನಕೊಪ್ಪ, ಬೀರನಕೊಪ್ಪ.

೫. **ಪೂಜಿ:** ಪೂಜಿಯು ಕೂಡ ಹಳ್ಳಿಯಂತೆ ಕೊನೆಗೊಳ್ಳುವ ಸ್ಥಳನಾಮದ ಕುರಿತು ತಿಳಿಯಪಡಿಸುತ್ತದೆ. ಉದಾ: ಗಾಳಿಪೂಜಿ.

೬. **ವಡೆ:** ವಡೆಯು ಕೂಡ ಸ್ಥಳನಾಮದ ಕೊನೆಯ ಪದವನ್ನು ಒಳಗೊಂಡಿದೆ. ಉದಾ: ಕೆರೆವಡಿ.

೭. **ಅಂಬಿ:** ಇದು ಕೂಡ ಸ್ಥಳಣಾಮದ ಕುರಿತು ತಿಳಿಯಪಡಿಸುವ ಕೊನೆಯ ಪದವಾಗಿದೆ. ಉದಾ: ಕಾಸಂಬಿ.

೮. **ಕಟ್ಟಿ:** ಇಲ್ಲಿಯು ಸಹ ಸ್ಥಳನಾಮದಿಂದ ಕೊನೆಗೊಳ್ಳುವ ಪದವಾಗಿದೆ. ಉದಾ: ಚೆನ್ನಿಕಟ್ಟಿ.

ಈ ರೀತಿಯಾಗಿ ಸ್ಥಳನಾಮದ ಅಂತಿಮ ಪದಗಳನ್ನು ತಿಳಿಯಪಡಿಸುತ್ತವೆ. ಇವುಗಳನ್ನು ವರ್ಗಿಕ ದೃಷ್ಟಿಯಿಂದ ಬಿಡಿಯಾಗಿ ಗಮನಿಸಿದಂತೆಯೇ ಕೆಲವೊಂದು ಪೂರ್ಣಸ್ಥಳವನ್ನು ಇಡಿಯಾಗಿ ಪರಿಗಣಿಸಿ ಹಲವಾರು ವಿಧಗಳಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು. ದೈವವಾಚಕ, ಜಲವಾಚಕ, ಶಿಲಾವಾಚಕ, ವ್ಯಕ್ತಿವಾಚಕ, ಜಾತಿ ಮತ್ತು ವೃತ್ತಿವಾಚಕಗಳೆಂದು ಅಧ್ಯಯನ ಮಾಡಬಹುದು. ಹೀಗಾಗಿ ಪ್ರಸ್ತುತ ಪರಿಸರದ ಕೆಲವೊಂದು ಗ್ರಾಮನಾಮಗಳು ಅಥವಾ ಸ್ಥಳನಾಮಗಳನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ.

ಕೇರೂಡಿ

ಕೇರೆ+ವಡಿ=ಕೆರವಡಿ

ಕೇರೆ+ಬೇಸಾಯಕ್ಕೆ ನೀರು ನಿಲ್ಲಿಸುವ ತಗ್ಗುಪ್ರದೇಶ.

ಕೇರವಡಿ–ಕೆರೂಡಿಯಾಗಿ ಮಾರ್ಪಟ್ಟಿದೆ.

ಈ ಗ್ರಾಮಕ್ಕೆ ಕೆರವಡಿ ಎಂಬ ಹೆಸರು ಬರಲು ಮುಖ್ಯ ಕಾರಣವೆನೆಂದರೆ ಗ್ರಾಮದ ಸುತ್ತಮುತ್ತಲು ಅತಿ ಹೆಚ್ಚು ಕೆರೆಗಳು ಕಂಡುಬಂದಿವೆ. ಮತ್ತು ಆ ಎಲ್ಲ ಕೆರೆಗಳಿಗೂ ವಡ್ಡುಗಳು, ಕೆರೆಯ ಸುತ್ತಮುತ್ತಲು ಇರುವುದರಿಂದ ಈ ಊರಿಗೆ ಕೆರೆವಡಿ ಎಂಬ ಹೆಸರು ಬಂದಿತು. ಅದು ಕ್ರಮೇಣವಾಗಿ ಕೆರೆವಡಿ ಎಂಬ ಮೂಲನಾಮವು ಹೋಗಿ ಕೇರೂಡಿ ಎಂಬ ಹೆಸರು ರೂಢಿಗತವಾಗಿ ಬಂದಿತು.

ಚಿಕ್ಕ ಬಾಸೂರು

ಚಿಕ್ಕ+ಬಾಸೂರು=ಚಿಕ್ಕಬಾಸುರು

ಚಿಕ್ಕ+ಸಣ್ಣ

ಬಾಸುರ+ಕಬ್ಬು (ಒಂದು ಬಗೆಯ ಕಬ್ಬು)

ಚಿಕ್ಕ ಬಾಸೂರು ಅಂದರೆ ಕಬ್ಬು ಬೆಳೆಯುವ ಚಿಕ್ಕ ಗ್ರಾಮ ಎಂದರ್ಥವಾಗುತ್ತವೆ.[೨]

ಚಿಕ್ಕ ಬಾಸೂರು ಎಂಬ ಗ್ರಾಮವು ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವ ಗ್ರಾಮವಾಗಿದ್ದು ಈ ಊರಲ್ಲಿ ಹಿಂದೆ ಒಬ್ಬ ಚಿಕ್ಕ ಬಕಾಸುರ ಎಂಬ ವ್ಯಕ್ತಿಯು ಈ ಊರನ್ನು ಇದ್ದನಂತೆ. ಆಗ ಒಬ್ಬ ಪೋದ್ದಾರ ಬಂದು ನಿನ್ನ ಹೆಸರು ಏನು ಎಂದು ಕೇಳಿದಾಗ ಆವ್ಯಕ್ತಿಯು ನನ್ನ ಹೆಸರು ಚಿಕ್ಕ ಬಕಾಸುರ ಎಂದನಂತೆ ಆಗ ಪೋದ್ವಾರನು ಆ ವ್ಯಕ್ತಿಗೆ ನಿನ್ನ ಹೆಸರು ಚಿಕ್ಕ ಬಕಾಸುರ ಬೇಡ ಚಿಕ್ಕ ಬಾಸುರ ಎಂಬುದಾಗಿ ಕರೆದನಂತೆ. ಅದರಂತೆ ಮುಂದೆ, ಕ್ರಮೇಣ ರೂಢಿಗತವಾಗಿ ಚಿಕ್ಕ ಬಕಾಸುರನ ಬದಲು, ಚಿಕ್ಕ ಬಾಸುರು ಎಂಬುದಾಗಿ ರೂಢಿಗತವಾಗಿ ಬಂದಿತು ಎಂದು ಊರಿನ ಸಿದ್ದರಾಮೇಶ್ವರ ದೇವಸ್ಥಾನದ ಅರ್ಚಕರಾದ ಶಂಬರಯ್ಯ ಹೊಳಯ್ಯ ಮಠದವರು ತಿಳಿಯಪಡಿಸಿದ್ದಾರೆ.

ಗುಡ್ಡದ ಮಲ್ಲಾಪುರ

ಗುಡ್ಡದ+ಮಲ್ಲಾಪುರ=ಗುಡ್ಡದ ಮಲ್ಲಾಪುರು(ಮಲ್ಲಯ್ಯನಪುರ)

ಗುಡ್ಡ+ಅಂದರೆ ಹುಡುಗ, ಶಿಷ್ಯ, ಚಿಕ್ಕಬೆಟ್ಟ (ಒಂದು ಬಗೆಯ ಗಿಡ)

ಮಲ್ಲಾಪುರ+(ವ್ಯಕ್ತಿವಾಚಿ) ಮಲ್ಲಯ್ಯನಪುರ

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡುವ ಗುಡ್ಡನ ಮಲ್ಲಾಪುರದ ಸ್ಥಳನಾಮ ಕುರಿತು ಉರು ಮಲ್ಲಿಕಾರ್ಜುನ ಸ್ವಾಮಿಗಳು ಈ ರೀತಿ ಮೌಖಿಕವಾಗಿ ತಿಳಿಯಪಡಿಸಿದ್ದಾರೆ. ಹಿಂದೆ ಹುಚ್ಚಪ್ಪ ಎಂಬ ಸ್ವಾಮಿಗಳು ಬಂದು ಇಲ್ಲಿನ ಗುಡ್ಡದ ಮೇಲೆ ನೆಲೆನಿಂತರು. ಹೀಗೆ ನೆಲೆನಿಂತ ಹುಚ್ಚಪ್ಪ ಸ್ವಾಮಿಗಳು ಅಲ್ಲಿಯ(ಗುಡ್ಡದ ಮಲೆ) ಮಲ್ಲಯ್ಯನ ಗುಡಿಯನ್ನು ಸ್ಥಾಪಿಸಿ(ಮಲ್ಲಿಕಾರ್ಜುನ ಗುಡಿ) ಮಾಡಿದರು. ಆಗ ಗುಡ್ಡದ ಮೇಲೆ ಮಲ್ಲಯ್ಯನ ಗುಡಿಯನ್ನು ಸ್ಥಾಪನೆ ಮಾಡಿದ್ದರಿಂದ ಈ ಊರಿಗೆ ಗುಡ್ಡದ ಮಲ್ಲಯ್ಯನ ಪುರ ಎಂಬುದಾಗಿದೆ. ಅದು ಕ್ರಮೇಣ ರೂಢಿಗತವಾಗಿ ಗುಡ್ಡದ ಮಲ್ಲಯ್ಯನ ಪುರ ಹೋಗಿ ಗುಡ್ಡದ ಮಲ್ಲಾಪುರ ಎಂಬುದಾಗಿದೆ.

ದಾಸನಕೊಪ್ಪ

ದಾಸನ+ಕೊಪ್ಪ=ದಾಸನಕೊಪ್ಪ

ದಾಸ–ಅಂದರೆ ದೇವಕ ದಾಸಪಂಥದವನು, ಹರಿಭಕ್ತ.

ಕೊಪ್ಪ –ಅಂದರೆ ಚಿಕ್ಕಗುಡ್ಡ, ದಿಬ್ಬ(ವೃತ್ತಿವಾಚಕ)

ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ದಾಸನಕೊಪ್ಪ ಗ್ರಾಮಕ್ಕೆ ದಾಸನಕೊಪ್ಪ ಎಂಬ ಹೆಸರು ಬರಲು ಮೂಲ ಕಾರಣವೆಂದು ಈ ಗ್ರಾಮದಲ್ಲಿ ಕನಕದಾಸರ ಸೇವೆಯನ್ನು ಮತ್ತು ಕನಕಾದಾಸರು ನೀಡಿದ ಉಂಬಳಿ ಜಮೀನಿನ ಬೇಸಾಯ ಮಾಡುವ ಬಹುಪಾಲು ಜನ ಇದೇ ಊರಿನಲ್ಲಿ ವಾಸವಾಗಿದ್ದರಿಂದ ಈ ಊರಿಗೆ ದಾಸನಕೊಪ್ಪ ಎಂಬ ಹೆಸರು ಬಂದಿತೆಂದು ಊರ ಹಿರಿಯರ ಅಭಿಪ್ರಾಯಪಟ್ಟಿದ್ದಾರೆ.

ಘಾಳಪೂಜಿ

ಘಳಾ+ಪೂಜಿ=ಘಾಳಿಪೂಜಿ

ಘಾಳಿ+ಅಂದರೆ –ವಾಯು

ಪೂಜೆ– ಅಂದರೆ ಆರಾಧನೆ ಮಾಡುವುದು(ನಿಸರ್ಗವಾಚಿ).

ಅಂದರೆ ಗಾಳಿಯನ್ನು ಪೂಜಿಸುವುದರಿಂದ ಈ ಊರಿಗೆ ಗಾಳಿಪೂಜೆ ಎಂಬ ಹೆಸರು ಬಂದಿತು ಎನ್ನಬಹುದು.

ಪ್ರಸ್ತುತ ಅಧ್ಯಯನದ ವ್ಯಪ್ತಿಗೆ ಒಳಪಡುವ ಘಾಳಿಪೂಜೆಯು ಗ್ರಾಮನಾಮದ ಕುರಿತು ಊರಿನ ಹಿರಿಯರಾದ ಭರಮಗೌಡ ಸಂಗಪ್ಪ, ಮರಿಗೌಡ್ರರವರು ಈ ರೀತಿಯಾಗಿ ತಿಳಿಯಪಡಿಸಿದರೆ, ಅಂದರೆ ಒಂದು ದಿನ ಊರಿನಲ್ಲಿರುವ ವೀರಕ್ತ ಮಠದಲ್ಲಿ ಒಬ್ಬ ಗುರುವು ಶಾಂತ ಚಿತ್ತವಾಗಿ ಧ್ಯಾನ ಮಗ್ನನಾಗಿರುವಂತಹ ಸಂದರ್ಭದಲ್ಲಿ ಗಾಳಿದೇವನು(ಗಾಳಿಯು) ವಿರಕ್ತ ಮಠದಲ್ಲಿ ನುಗ್ಗಿದನಂತೆ. ಆ ಒಂದು ಸಂದರ್ಭದಲ್ಲಿ ವಿರಕ್ತ ಮಠದಲ್ಲಿ ಗುರುಗಳು ಘಾಳಿಯನ್ನು ಪೂಜಿಸಲು ಸಿದ್ಧರಾದಂತೆ ಹೀಗೆ ಘಾಳಿಯನ್ನು ಪೂಜೆ ಮಾಡಿದ್ದರಿಂದ ಗಾಳಿಯು ಕಡಿಮೆಯಾಯಿತು. ಹೀಗಾಗಿ ಘಾಳಿಪೂಜೆ ಎಂಬ ಹೆಸರು ಈ ಊರಿಗೆ ಬಂದಿತು ಎಂದು ತಿಳಿಯಪಡಿಸುತ್ತಾರೆ.

ಧೂಳಿಕೊಪ್ಪ

ಧೂಳಿ+ಕೊಪ್ಪ=ಧೂಳಿಕೊಪ್ಪ(ನಿಸರ್ಗವಾಚಿ)

ಧೂಳಿ ಅಂದರೆ ಅತಿಯಾದ ದೂಳು ಕಣಗಳು.

ಕೊಪ್ಪ ಅಂದರೆ ದಿಬ್ಬ, ಚಿಕ್ಕಗುಡ್ಡ ಆಗಿದೆ.

ಅಂದರೆ ಧೂಳಿಕೊಪ್ಪವೆಂದರೆ ಅತಿಯಾದ ಧೂಳಿನ ಕಣಗಳಿಂದ ಕೂಡಿದ ಚಿಕ್ಕ ಗುಡ್ಡ ಅಥವಾ ಪ್ರದೇಶವೇ ಧೂಳಿಕೊಪ್ಪ ಎಂದಾಗುತ್ತದೆ. ದೂಳಿಕೊಪ್ಪದಲ್ಲಿ ಮೊದಲು ಗೋಮಳ ಭೂಮಿಯಿತ್ತು. ಹೀಗಾಗಿ ಅಲ್ಲಿ ಹೆಚ್ಚು ದನಗಳು ಕಂಡುಬಂದಿದ್ದು, ಆ ದನಕರುಗಳು ಹೆಚು ದೂಳನ್ನು ಎಬ್ಬಿಸುತ್ತಿದ್ದರಿಂದ ದೂಳಿಕೊಪ್ಪ ಎಂದು ಹೆಸರು ಬಂದಿತ್ತೆಂದು ತಿಳಿಸುತ್ತಾರೆ.

ಕಾಗಿನೆಲೆ

ಕಾಗಿ+ನೆಲೆ=ಕಾಗಿನೆಲೆ (ಪಕ್ಷವಾಚಿ/ನಿಸರ್ಗವಾಚಿ)

ಕಾಗಿ ಅಂದರೆ ಕಪ್ಪು

ನೆಲೆ ಅಂದರೆ ಭೂಮಿ, ವಾಸಸ್ಥಾನ

ಕಾಗಿನೆಲೆ ಅಂದರೆ ಕಪ್ಪು ಮಣ್ಣಿನಿಂದ ಕೂಡಿದ ಪ್ರದೇಶವೆ ಕಾಗಿನೆಲೆಯಾಗಿದೆ ಎಂದು ಹೇಳಬಹುದು. ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಕಾಗಿನೆಲೆಯನ್ನು ಕುರಿತು ಗ್ರಾಮಸ್ಥರು ಕಾಗಿನೆಲೆ ಎಂಬ ಎಸರು ಬರಲು ಮುಖ್ಯ ಕಾರಣವೆಂದರೆ ಕಾಗೆಯು ದಿನಾಲು ನೆಲ್ಲಿಕಾಯಿಯನ್ನು ತಂದು ಹುತ್ತದ ಮೇಲೆ ಹಾಕುತ್ತಿತ್ತು. ಅಲ್ಲಿ ಒಂದು ದೊಡ್ಡ ನೆಲ್ಲಿಕಾಯಿಯ ಮರವೊಂದು ಬೆಳೆಯಿತು. ಇದರಿಂದಾಗಿ ಕಾಗಿನೆಲೆ ಎಂಬ ಹೆಸರು ಬಂದಿತು ಎಂದು ಊರ ಹಿರಿಯರು ತಿಳಿಸುತ್ತಾರೆ.

ಕಾಶಂಬಿ

ಕಾಸ+ಅಂಬಿ=ಕಾಶಂಬಿ (ವ್ಯಕ್ತಿವಾಚಕ)

ಕಾಸ ಅಂದರೆ ಅರಳಿಕೆ, ವಿಕಾಸ, ಪ್ರಕಾಶ ಇತ್ಯಾದಿಗಳು.

ಅಂಬಿ, ಅಂದರ, ಹೆಸರು, ನಾಮ, ಎಂದರ್ಥ.

ಕಾಶಂಬಿ ಅಂದರೆ ಒಬ್ಬ ಹೆಣ್ಣು ಮಗಳಿನಿಂದ ಉದ್ಭವವಾದಂತಹ ಒಂದು ಊರು ಇದೆ.

ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಕಾಗಿನೆಲೆ ಪರಿಸರಕ್ಕೆ ಸಂಬಂಧಪಟ್ಟ ಕಾಶಂಬಿ ಗ್ರಾಮದ ಸ್ಥಳನಾಮವನ್ನು ಕುರಿತು ನೋಡುವುದಾದರೆ, ಯಾದಗಿರಿ(ಈಗೀನ) ಜಿಲ್ಲೆಯ ಕೊಡೆಕಲ್ ಎಂಬ ಪ್ರದೇಶದಿಂದ ಬಂದ ಸಂಗಮೇಶ್ವರ ಸ್ವಾಮಿ ಎಂಬ ವ್ಯಕ್ತಿಯು ಪ್ರತಿದಿನ ಭಿಕ್ಷೆ ಬೇಡಿ ಕಾಗಿನೆಲೆಯಲ್ಲಿ ಜೀವನ ಸಾಗಿಸುತ್ತಿದ್ದರು. ಭಿಕ್ಷೆ ಬೇಡುತ್ತಿದ್ದ ಸಂದರ್ಭದಲ್ಲಿ ಸ್ವಾಮಿಯನ್ನು ಕುಸಂಬಿ ಎಂಬ ಮಹಿಳೆ ಪ್ರೀತಿಸುತ್ತಿದ್ದಳು. ಸಂಗಮೇಶ್ವರನು ಅವಳನ್ನು ಮದುವೆಯಾಗಿ ಹೆಂಡತಿಯನ್ನಾಗಿ ಸ್ವೀಕರಿಸಿ ಕಾಗಿನೆಲೆಯ ಪಕ್ಕದ ಒಂದು ಹಳ್ಳಿಯಲ್ಲಿ ಅವಳನ್ನು ಇರಿಸಿದ್ದನು. ಹೀಗಾಗಿ ಇದಕ್ಕೆ ಕಾಸಂಬಿ ಎಂಬ ಹೆಸರು ಬಂದಿತೆಂದು ಹೇಳಬಹುದು. ಈ ರೀತಿಯಾಗಿ ಸ್ಥಳನಾಮಗಳ ಉಲ್ಲೇಖವು ದೊರೆಯುತ್ತವೆ.

ಸ್ಥಳಪುರಾಣ ಮತ್ತು ಐತಿಹ್ಯಗಳು

ಒಂದು ಪ್ರದೇಶದ ಸ್ಥಳಪುರಾಣಗಳು ಐತಿಹಾಸಿಕ ಚರಿತ್ರೆಯ ಪ್ರಮುಖ ಆಕರಗಳಾಗಿವೆ. ಹೀಗಾಗಿ ಹಿಂದೆ ನಡೆದ ಘಟನೆಗಳನ್ನು ಮತ್ತು ನೀತಿಯನ್ನು ತಿಳಿಯಪಡಿಸುವ ಪುರಾಣಗಳು

ಅರಸರ ಜೀವನ ವೃತ್ತಾಂತ, ದೇವರ ಅವತಾರ, ಕಥೆಗಳನ್ನು ಒಳಗೊಂಡಿತ್ತು. ಇವೆಲ್ಲವನ್ನು ಗಮನಿಸಿದಾಗ ಸ್ಥಳಪುರಾಣ ಐತಿಹ್ಯಗಳು ಒಂದು ಪ್ರದೇಶದ ಸ್ಪಷ್ಟ ನಿಲುವನ್ನು ತಿಳಿಯಪಡಿಸುವಲ್ಲಿ ಸಹಾಯಕಾರಿಯಾಗಿರುವುದನ್ನು ನಾವಿಲ್ಲಿ ಕಾಣಬಹುದು.

ಗುಡ್ಡದ ಮಲ್ಲಾಪುರದ ಮೂಕಪ್ಪ ಸ್ವಾಮಿಗಳ ಉಲ್ಲೇಖ

ಪ್ರಸ್ತುತ ಅಧ್ಯಯನ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಗುಡ್ಡದ ಮಲ್ಲಾಪುರದ ಮೂಕಪ್ಪ ಸ್ವಾಮಿಗಳ ಉಲ್ಲೇಖ ಕಂಡುಬರುತ್ತದೆ. ಮೂಲ ಹೆಸರು ಅಜ್ಜಯಸ್ವಾಮಿ. ತಂದೆ ತಾಯಿಗಳು ಶ್ರೀಶೈಲದ ಜಗದ್ಗುರುಗಳ ಒಂದು ಅಪ್ಪಣೆಯ ಮೇರೆಗೆ(೧೬ನೇ ಶತಮಾನದಲ್ಲಿ) ಸರ್ವಧರ್ಮವನನು ರಕ್ಷಣೆ ಮಾಡುವಂತೆ ಸೂಚಿಸಿದರು. ಆಗ ಶ್ರೀಶೈಲದಿಂದ ಬರುವಾಗ ಎರಡು ಎತ್ತುಗಳನ್ನು ಹೊಡೆದುಕೊಂಡು ಬಂದರು. ಒಂದು ಎತ್ತಿನಲ್ಲಿ ಪೂಜೆ ಸಾಮಗ್ರಿಗಳನ್ನು, ಇನ್ನೊಂದು ಎತ್ತಿನಲ್ಲಿ ತಾವುಗಳು ಕುಳಿತುಕೊಂಡು ರಾಯಚೂರು, ಮಸ್ಕಿ, ಕೊಟ್ಟೂರು, ಹಡಗಲಿ, ಸೂಡಂಬಿ, ಹಿರೇಬಾಸೂರು ಮಳಗಿಪಾಳಿ ಹೀಗೆ ಮುಂತಾದ ಸ್ಥಳಗಳಲ್ಲಿ ಭೇಟಿಯನ್ನು ನೀಡಿ ಅಲ್ಲಿ ವಾಸ್ತವ್ಯ ಮಾಡಿ ಪ್ರತಿಯೊಂದು ಸ್ಥಳಗಳು ಒಂದೊಂದು ಮಠವನ್ನು ನಿರ್ಮಿಸಿಕೊಂಡು ಧರ್ಮಗಳ ರಕ್ಷಣೆಯ ಕುರಿತು ತಿಳಿಯಪಡಿಸುತ್ತ ಗುಡ್ಡದ ಮಲ್ಲಪುರಕ್ಕೆ ಬಂದು ನೆಲೆಸಿದರು.

ಹೀಗೆ ನೆಲೆಸಿದ ಅಜಯ್ಯಸ್ವಾಮಿಗಳು ಮುಂದೆ ಗುಡ್ಡದ ಮಲ್ಲಾಪುರದ ಬೆಟ್ಟದಲ್ಲಿರುವ ಗುಹೆಯನ್ನು ತಮ್ಮ ವಾಸಸ್ಥಾನವಾಗಿ ಮಾಡಿ ಅಲ್ಲಿಯೇ ನೆಲೆಸಿದರು. ಬೆಟ್ಟದ ಮೇಲೆ ಮಲ್ಲಿಕಾರ್ಜುನ (ಮಲ್ಲಯ್ಯ) ದೇವಾಲಯವನ್ನು ನಿರ್ಮಿಸಿದರು. ಪೂರ್ವಾಭಿಮುಖವಾಗಿರುವ ಗುಹೆಯನ್ನು ತಮ್ಮ ಒಂದು ಆಶ್ರಮವನ್ನಾಗಿ ಮಾಡಿಕೊಂಡು ಅಲ್ಲಿಯೇ ಐಕ್ಯರಾದರು. ಇಂತಹ ಸಂದರ್ಭದಲ್ಲಿ ಮಠದ ಅಧಿಕಾರವನ್ನು ಯಾರಿಗೆ ವಹಿಸಿಬೇಕೆಂದು ತಿಳಿದು ಕೂಡಲ್ಲಿ ಕಡ್ಲಿಬಸವಣ್ಣ ನವರಿಗೆ ಮಠದ ಅಧಿಕಾರವನ್ನು ನೀಡಿದರು. ಅಂದಿನಿಂದ ಇಂದಿನವರೆಗೂ ಮಠದ ಜವಾಬ್ದಾರಿಯನ್ನು ಈ ಮಾಕಪ್ಪ ಸ್ವಾಮಿಗಳು ನಡೆಸಿಕೊಂಡು ಕಾಲನಂತರ ಅವರು ಗುಡ್ಡದಿಂದ ಕೆಳಗೆ ಬಂದು ನೆಲೆಸಿ ಅಲ್ಲಿಯೇ ಮಠವನ್ನು ಕಟ್ಟಿಕೊಂಡು ಅಧಿಕಾರ ನಡೆಸಿಕೊಂಡು ಬಂದಿದ್ದಾರೆ.

ಹೀಗೆ ಈ ಮೂಕಪ್ಪಸ್ವಾಮಿಗಳು ಐಕ್ಯರಾದ ಮೇಲೆ ಮತ್ತೊಂದು ಮೂಕಪ್ಪಸ್ವಾಮಿಯು ಆ ದಿನ ಜನ್ಮ ತಾಳುತ್ತದೆ. ಆದರೆ ಅದು ಎಲ್ಲಿ ಜನನವಾಯಿತು ಎಂಬುದು ಐದಾರು ದಿನಗಳ ನಂತರ ಮಠದ ಅಧಿಕಾರಿಗಳಿಗೆ ಗೊತ್ತಾದಾಗ ಅವರು ಅಲ್ಲಿಗೆ ಹೋಗಿ ಆ ಮರಿ ಮೂಕಪ್ಪ ಸ್ವಾಮಿಗಳನ್ನು ಭೇಟಿ ಮಾಡಿ ಅದು ಹೌದು ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸುತ್ತಾರೆ. ಅದು ಹೌದಾದ ಪಕ್ಷದಲ್ಲಿ ಕರವು ಹುಟ್ಟಿನಿಂದ ಹಿಡಿದು ಒಂದು ಹನಿ ಹಾಲನ್ನು ಕೂಡಿಯುವುದಿಲ್ಲ ಮತ್ತು ತಾಯಿ ಮಡಿಲನ್ನು ಸೇರುವುದಿಲ್ಲ. ಆಗ ಮಠದ ೪ ಜನ ಹಿರಿಯರು ಕತೃ ಗದ್ದುಗೆಯಿಂದ ಪಾದೋದಕ ಪ್ರಸಾದ ತೆಗೆದುಕೊಂಡು ಬಂದು ಅಲ್ಲಿ ಸಭಾದಲ್ಲಿ ಇಟ್ಟು ಅದನ್ನು ಪೂಜೆ

ಮಾಡುತ್ತಾರೆ. ಆಗ ಆ ಕರವು ಆ ಪಾದೋದಕ ಪ್ರಸಾದವನ್ನು ಸ್ವೀಕರಿಸಿದರೆ ಮಾತ್ರ ಇದು ಮರಿ ಮೂಕಪ್ಪ ಸ್ವಾಮಿಗಳು ಜನಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಅದಾದ ನಂತರ ಆ ಕರುವಿಗೆ ಲಿಂಗದಾರಣ ಮಾಡಿ ಪ್ರತಿದಿನ ೩ ಹೊತ್ತು ಸ್ಥಾನ ಮಾಡಿಸಿ ಪೂಜೆಯನ್ನು ಮಾಡಿದ ನಂತರ ಅದು ತಾಯಿಯ ಹಾಲನ್ನು ಕುಡಿಯುತ್ತದೆ. ಈ ಪೂಜೆಯನ್ನು ಮನೆಯವರು ಮಾಡುತ್ತಾರೆ. ಇಲ್ಲವಾದ ಪಕ್ಷದಲ್ಲಿ ಮಠದಿಂದ ಒಬ್ಬ ವ್ಯಕ್ತಿಯನ್ನು ೮ ತಿಂಗಳವರೆಗೆ ತಾಯಿ ಮೊಲೆ ಬಿಡುವವರಿಗೂ ಪೂಜಿಸಲು ಕಳಿಸುತ್ತಾರೆ. ಅದಾದ ನಂತರ ಒಂದು ಒಳ್ಳೆಯ ದಿನವನ್ನು ನೋಡಿ ಎಲ್ಲ ಸ್ವಾಮಿಜಿಗಳು ಊರ ನಾಗರಿಕರು ಭಕ್ತಾದಿಗಳು ಸೇರಿ ಮಠದಲ್ಲಿ ಪಟ್ಟಾಧಿಕಾರ ಮಾಡುತ್ತಾರೆ. ಅಲ್ಲಿಂದ ಮೂಕಪ್ಪ ಸ್ವಾಮಿಗಳು ಅಧಿಕಾರವನ್ನು ನಿರ್ವಹಿಸುತ್ತಾರೆ ಎಂದು ಮಠದ ಸ್ವಾಮಿಜಿಯವರು ತಿಳಿಯಪಡಿಸುತ್ತಾರೆ.

ಐತಿಹ್ಯ

ಒಂದು ಪ್ರದೇಶದ ಸಂಸ್ಕೃತಿಯಲ್ಲಿ ಸ್ಥಳನಾಮ ಸ್ಥಳ ಪುರಾಣಗಳಂತೆಯೇ ಐತಿಹ್ಯಗಳು ಕೂಡ ಮಹತ್ವತೆಯನ್ನು ಒಳಗೊಂಡಿರುತ್ತದೆ. ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದ ಜನಪದ ಪುರಾಣಗಳು ಹಿಂದೆ ನಡೆದಿರಬಹುದಾದ ಘಟನೆಗಳನ್ನು ಕಲಾತ್ಮಕತೆಯ ಬಣ್ಣವನ್ನು ಹಚ್ಚಿ ಹೆಣದಿರಬಹುದಾದ ಜನಪದ ಸಾಹಿತ್ಯ ಪ್ರಕಾರವಿದು. ರಾಜರ ಸಾಧನೆಗಳ ನೋವು-ನಲಿವು, ಸಾಧನೆ-ದುರಂತಗಳು ಮುಂತಾದ ಐತಿಹ್ಯಗಳು ಕಂಡುಬರುತ್ತದೆ. ಇನ್ನು ಅನೇಕ ಐತಿಹ್ಯಗಳು ಪ್ರಸ್ತುತ ಪರಿಸರದಲ್ಲಿ ಕಂಡುಬರುತ್ತದೆ.

ವಿಷಪರಿಹಾರೇಶ್ವರ ದೇವಾಲಯ ಸೂಡಂಬಿ ಐತಿಹ್ಯ

ಈ ದೇವಾಲಯವು ಕೆರೆಯ ದಂಡೆಯ ಪಕ್ಕದಲ್ಲಿ ಇರುವ ಈ ದೇವಾಲಯದ ಮೂಲ ಹೆಸರು ರಾಮಲಿಂಗೇಶ್ವರ ದೇವಾಲಯವಾಗಿದ್ದು, ಇಲ್ಲಿನ ಜನರು ಇದಕ್ಕೆ ವಿಷ ಪರಿಹಾರೇಶ್ವರ ದೇವಾಲಯ ಎಂಬುದಾಗಿ ಕರೆಯುತ್ತಾರೆ. ಏಕೆಂದರೆ ಈ ದೇವರು ಒಂದು ದಿನಕ್ಕೆ ೭ ಅವತಾರಗಳನ್ನು ಬೇರೆ ಬೇರೆ ವರ್ಗಗಳಾಗಿ ಪಡೆಯುತ್ತಾನೆ. ಮತ್ತು ದೇವರ ತೀರ್ಥವನ್ನು ಸ್ವೀಕರಿಸಿದರೆ ತನ್ನಲ್ಲಿರುವ ಕೆಟ್ಟ ವಿಷವು ಕೂಡ ಪರಿಹಾರವಾಗಿ ಶುದ್ಧವಾಗಿ ಪರಿವರ್ತನೆಯಾಗುತ್ತದೆ ಯೆಂದು ಇಲ್ಲಿನ ಜನರ ನಂಬಿಕೆ ಇವತ್ತಿಗೂ ಕೂಡ ಆಚರಣೆಯಲ್ಲಿರುವುದನ್ನು ಕಾಣುತ್ತೇವೆ ಎಂದು ಊರಿನ ಮಲ್ಲಿಕಾರ್ಜುನ ಪಾಟೀಲರು ತಿಳಿಯಪಡಿಸಿದ್ದಾರೆ.

ಅಡಿಟಿಪ್ಪಣಿಗಳು

೧. ಜಾಜಿ ದೇವೇಂದ್ರಪ್ಪ, ೨೦೦೪, **ಅಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು,** ಪು.೧೪

೨. ಗೋಪಾಲ ಕೃಷ್ಣ ವಿ., **ಸ್ಥಳನಾಮ ಅಧ್ಯಯನಗಳು,** ಪು.೧೨೯

೩.	ಕಲಬುರ್ಗಿ ಎಂ.ಎಂ., **ಧಾರವಾಡ ಗ್ರಾಮ ನಾಮವಿವೇಚನೆ**(ಮಾರ್ಗ ೨ರಲ್ಲಿ), ಪು.೪೭೧

೪.	ಗೋಪಾಲಕೃಷ್ಣ ಎ., **ಸ್ಥಳನಾಮ ಅಧ್ಯಯನಗಳು,** ಪು.೪೧

೫.	ಡಿ.ಲಿಂಗಯ್ಯ, ಡಾ.ಚಕ್ಕರೆ ಶಿವಶಂಕರ್, **ಸ್ಥಳನಾಮಗಳ ಅಧ್ಯಯನ,** ಪು.೧೮೩-೧೮೪

೬.	ವಿರೇಶ ಶಿ. **ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು(ಪಿಎಚ್.ಡಿ ಮಹಾಪ್ರಬಂಧ),** ಪು.೧೧೬

೭.	ಕೇಶಿರಾಜ(ಸಂ), **ಕನ್ನಡ ನಿಘಂಟು,** ಪು.೬೪೦೮

೮.	ಅದೇ, ಪು.೨೫೪೦

೯.	ಕೇಶಿರಾಜ(ಸಂ), **ಪೂರ್ವೋಕ್ತ,** ಪು.೨೬೯೬

೧೦.	ಅದೇ, ಪು.೪೨೫೩

೧೧.	ಹೊರಿಯಾಲ ದೊರೆಸ್ವಾಮಿ, **ಕಾಗೆನೆಲೆ,** ಪು.೧೩

ಅಧ್ಯಾಯ ನಾಲ್ಕು

ದೇವಾಲಯ ವಾಸ್ತು ಮತ್ತು ಮೂರ್ತಿಶಿಲ್ಪ

ಅಧ್ಯಾಯ ನಾಲ್ಕು

ದೇವಾಲಯ ವಾಸ್ತು ಮತ್ತು ಮೂರ್ತಿಶಿಲ್ಪ

ದೇವಾಲಯಗಳು ನಮ್ಮ ದೇಶದ ಸಂಸ್ಕೃತಿಯ ಪ್ರತೀಕವಾಗಿದೆ. ಜಾತಿ ಮತ ಪಂಥಗಳ ಸಂಕುಚಿತ ಅರ್ಥವನ್ನು ಮೀರಿದೆ. ದೇಶದ ಜನಪದರ ಸಾಂಸ್ಕೃತಿಕ ಪರಂಪರೆಯ ಪ್ರತೀಕಗಳಾಗಿ ದೇವಾಲಯಗಳು ನಮ್ಮೆದುರಿಗಿವೆ. ಆಸ್ತಿಕರಿಗೆ ದೇವಸ್ಥಾನಗಳು, ಶ್ರದ್ಧಾಕೇಂದ್ರಗಳು ಅವರವರ ನಂಬಿಕೆಗೆ ಅನುಸಾರವಾಗಿ ಹರಿ, ಹರ, ದೇವಿಯರ ದೇವಾಲಯಗಳು, ಬಸದಿಗಳು ರೂಪುಗೊಂಡವು. ಜಿಜ್ಞಾಸೆಯ ಕೇಂದ್ರಗಳು ಸಂಸ್ಕೃತಿಯ ಭಂಡಾರ, ಮಾನವನ ಜೀವನಕ್ಕೆ ಆದರ್ಶದ ಮೂಲಗಳಾಗಿ ಗೋಚರಿಸುತ್ತವೆ. ಅದೇ ರೀತಿಯಾಗಿ ದೇವಾಲಯದ ಶಿಲ್ಪಗಳು ಶಿಲಾಶಾಸನಗಳಿಂದ ಐತಿಹಾಸಿಕ ಮಾಹಿತಿಗಳು ಯಾವುದೇ ದೇಶಕ್ಕೆ ಅಮೂಲ್ಯ ಆಸ್ತಿ.[೧]

ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆಯಾಗಿ ನಿಲ್ಲಬೇಕೆಂದೂ, ಒಂದು ಸುರಕ್ಷಿತ ಗೂಡಿನಲ್ಲಿ ವಾಸಬೇಕೆಂದೂ, ಎಂದಿನಿಂದ ಬದುಕಿದನೋ ಅಂದಿನಿಂದ ತನಗಾಗಿ ಮನೆಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದ. ಸುತ್ತ ಗೋಡೆ ಅದರ ಮೇಲೆ ವಿವಿಧ ಆಕಾರದ ಮುಚ್ಚಿಗೆ, ಮುಂಭಾಗದಲ್ಲಿ ಬಾಗಿಲು ಅದರ ಮೇಲೆ ಗಾಳಿ ಬೆಳಕು ಬರಲು ಕಮಾನು ತೆರವು ಹೀಗೆ ಅವನ ಮನೆ ರೂಪುಗೊಂಡಿತು. ಇದು ವಾಸ್ತುಶಿಲ್ಪದ ಪ್ರಥಮ ಹೆಜ್ಜೆ.

ಮಾನವನ ಶಕ್ತಿಗೆ ಮೀರಿದ ನಮ್ಮನ್ನು ತನ್ನನ್ನು ನಿಯಂತ್ರಿಸುವ ಬೇರೆ ಒಂದು ಶಕ್ತಿ ಬಗ್ಗೆ ಪ್ರತಿಯೊಬ್ಬ ಜೀವಿಯ ಅರಿವಿಗೂ ಬರುತ್ತಿದ್ದು, ಜೊತೆಗೆ ಪ್ರಾಣಿಗಳು, ಗಾಳಿ, ಮಳೆ, ಗುಡುಗು, ಸಿಡಿಲು ಮುಂತಾದ ಪ್ರಕೃತಿಯ ಶಕ್ತಿಗಳಿಂದ ಭಯಭೀತನಾಗಿ ತನ್ನ ರಕ್ಷಣೆಗಾಗಿ ದೇವರ ಮೊರೆ ಹೋಗತೊಡಗಿದನು. ಎಲ್ಲಕ್ಕಿಂತಲೂ ಮಿಗಿಲಾಗಿ ದೇವರು ಎಂಬ ಆಧ್ಯಾತ್ ಶಕ್ತಿ ಇದೆ ಎಂಬ ನಂಬಿಕೆಯುಂಟಾಗಿ ಆ ಶಕ್ತಿಯ ಮೇಲಿನ ಭಯದಿಂದ ಅಥವಾ ಪ್ರೇಮದಿಂದ ಹಾಗೂ ಸಹಜ ಕುತೂಹಲದಿಂದ ಅವುಗಳ ರಹಸ್ಯಗಳನ್ನು ಅರಿಯಲು ಮುಂದಾದನು. ಅಷ್ಟೇ ಅಲ್ಲದೆ, ನಿಸರ್ಗ ಶಕ್ತಿಗಳನ್ನು ಪವಿತ್ರ, ಪೂಜಾರ್ಹ, ಆಶ್ಚರ್ಯವತ್, ಪ್ರಕೃತಿ ಎಂದು ಭಾವಿಸಿ ಶೋಧಿಸಲು ಪ್ರಾರಂಭಿಸಿದನು. ಇದರಿಂದ ಅಂತಹ ಅಗೋಚರ ಶಕ್ತಿಗೆ ಒಂದು ರೂಪ ನೀಡಿ, ಅದನ್ನು

ಪ್ರತಿಮೆಯನ್ನಾಗಿಸಿ ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ಕ್ರಮೇಣ ಇಂತಹ ಪವಿತ್ರ ಸ್ಥಳಕ್ಕೆ ಬೇರೆ ಯಾರೂ ಅಜಾಗರೂಕರಾಗಿ ಓಡಾಡುವುದನ್ನು ನಿಷೇಧಿಸಿ, ಅದಕ್ಕೆ ರಕ್ಷಣೆಯನ್ನು ಒದಗಿಸಬೇಕೆಂದು ದೇವಾಲಯಗಳ ರಚನೆ ಪ್ರಾರಂಭವಾಯಿತು.[೩]

ತನಗಾಗಿ ಕಟ್ಟಿಕೊಂಡ ಮನೆ 'ಗೃಹವಾಸ್ತು' ಎನಿಸಿದರೆ ತನ್ನ ದೇವರಿಗಾಗಿ ಕಟ್ಟಿದ್ದು 'ಧಾರ್ಮಿಕ ವಾಸ್ತುಶಿಲ್ಪ' ಅಥವಾ ದೇವಾಲಯ ವಾಸ್ತುಶಿಲ್ಪ ಎನಿಸಿತು.[೪] ಇಂದಿಗೂ ಕೂಡ ಸ್ಥಳೀಯ ಚರಿತ್ರ ರಚನೆಗೆ ಸಹಾಯಕವಾಗಿರುವ ಆಕರಗಳಲ್ಲಿ ದೇವಾಲಯಗಳು ಅತ್ಯಂತ ಮಹತ್ವವನ್ನು ಪಡೆದುಕೊಂಡಿವೆ. ಇಂತಹ ದೇವಾಲಯಗಳ ಅಧ್ಯಯನದಿಂದ ಸಂಸ್ಕೃತಿ, ಅದರ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ರಾಜಾಶ್ರಯ, ದತ್ತಿ, ಧರ್ಮ, ಸಾಂಸ್ಕೃತಿಕವಾದ ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು, ಸಂಗೀತ, ಶಿಕ್ಷಣ, ನ್ಯಾಯಿಕವಾದ ಅಂಶಗಳನ್ನು ತಿಳಿಯಲು ಸಹಾಯಕವಾಗಿದೆ.

ಪ್ರಸ್ತುತ ಅಧ್ಯಯನ ಪರಿಸರದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳಿಂದ ಅನೇಕ ರಚನಾತ್ಮಕ ದೇವಾಲಯಗಳು ನಿರ್ಮಾಣಗೊಂಡಿದ್ದು, ಆ ರಾಜ ಮನೆತನಗಳು ಸಂಸ್ಕೃತಿಗೆ ನೀಡಿದ ಕೊಡುಗೆಯಾಗಿದೆ.

ವಾಸ್ತುಶಿಲ್ಪದ ಪ್ರಾಚೀನತೆ

ವಾಸ್ತುಶಿಲ್ಪದಲ್ಲಿ ಗರುಡ ಪುರಾಣವು ಗ್ರಾಮಗಳು, ನಗರಗಳು, ಕೋಟೆಗಳು, ಪಟ್ಟಣಗಳು, ಮಠಗಳು ಸಹ ವಾಸ್ತುಗಳೆಂದು ಹೇಳಿದೆ.[೫] "ನಿವಾಸಾತ್ ಸರ್ವ ಭೂತಾನಾಂ ವಾಸ್ತುರೀತಿ ಶಬ್ಧಿತ" ಎಲ್ಲ ಪ್ರಾಣಿಗಳ ವಸತಿಗಾಗಿ ವಾಸ್ತು ಪದವು ಬಳಕೆಗೊಂಡಿದೆ. ಇದು ಅಮರಕೋಶದ ವ್ಯಾಖ್ಯೆ ಮಯಮತ ಗ್ರಂಥವು ವಾಸ್ತುಶಿಲ್ಪವನ್ನು ಎರಡು ಹಂತಗಳಲ್ಲಿ ವಿವರಿಸಿದೆ.

ಅಮರ್ತ್ಯಾಶ್ಚೈವ ಮರ್ತ್ಯಾಶ್ಚಯಂತ್ರ ಯತ್ರ ವಸಂತಿ ಹಿ ತದ್ವಸ್ತು ಇತಿ ಮತಂ – ಮರ್ತ್ಯರು ಮತ್ತು ಅಮಾರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದು ಹೆಸರು. ವಸ್ತುವನ್ನು ಆಶ್ರಯಿಸಿದ್ದು ವಾಸ್ತು. 'ಪ್ರಾಸಾದಾದೀನಿ ವಾಸ್ತೂನಿ ವಸ್ತುತ್ವಾಲ್ ವಸ್ತು ಸಂದ್ರಯಾಲ್'' ಪ್ರಸಾದ, ಹರ್ಮ್ಯ, ಸೌಧ ಇತ್ಯಾದಿಗಳು ವಸ್ತುವನ್ನು ಆಶ್ರಯಿಸಿದ್ದು, ವಾಸ್ತು ಎಂದೆನಿಸಿಕೊಳ್ಳುತ್ತದೆ. ಆದ್ದರಿಂದ 'ವಾಸ್ತು' ಎಂದಲ್ಲಿ ವಸತಿ ಯೋಗ್ಯ ಭೂಮಿ ಹಾಗೂ ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನು ಒಳಗೊಳ್ಳುತ್ತದೆ.[೬]

ಪ್ರಸ್ತುತ ಅಧ್ಯಯನ ವ್ಯಾಪ್ತಿಯಾದ ಕಾಗಿನೆಲೆ ಪರಿಸರದಲ್ಲಿ ಕಂಡುಬರುವ ದೇವಾಲಯಗಳನ್ನು ಅಧ್ಯಯನ ಮಾಡುವುದಕ್ಕಿಂತ ಮುಂಚೆ ವಿವಿಧ ಕಾಲಘಟ್ಟದಲ್ಲಿ ದೇವಾಲಯಗಳು ವಿಕಾಸ ಹೊಂದುವ ರೀತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ದೇವಾಲಯ ಧಾರ್ಮಿಕ ಶ್ರದ್ಧೆ, ನಂಬಿಕೆ, ಭಕ್ತಿಯ ಸಂಕೇತಗಳಾಗಿವೆ. ದೇವಾಲಯವನ್ನು ದೇವ+ಆಲಯ ಎಂದು

ಬಿಡಿಸಿದಾಗ ದೇವ ಎಂದರೆ ದೇವರು, ಆಲಯ ಎಂದರೆ ಕಟ್ಟಡ ಎಂದರ್ಥ. ಅಂದರೆ ದೇವರು ವಾಸಿಸುವ ಸ್ಥಾನ ಎಂದರ್ಥಗಳಾಗುತ್ತದೆ.[೭]

ಸಾಮಾನ್ಯವಾಗಿ ಎಲ್ಲ ಕಲೆಗಳಿಗೂ ಹೇಳುವಂತೆ ವಾಸ್ತುಶಿಲ್ಪಕ್ಕೂ ನಮ್ಮ ಶಾಸ್ತ್ರಗ್ರಂಥಗಳು ದೈವಿಕವಾದ ಮೂಲವನ್ನು ಹೇಳುತ್ತವೆ. ವಾಸ್ತುಶಿಲ್ಪದ ಹುಟ್ಟನ್ನು ಮಾನಸಾರ ನಿರ್ದೇಶಿಸುವ ರೀತಿ ಹೀಗಿದೆ. ಬ್ರಹ್ಮನ ನಾಲ್ಕು ಮುಖಗಳಿಂದ ವಿಶ್ವಕರ್ಮ, ಮಯ, ತ್ವಷ್ಟ ಮತ್ತು ಮನು ಹುಟ್ಟಿದರು. ಇವರ ನಾಲ್ಕು ಜನ ಮಕ್ಕಳು ಕ್ರಮವಾಗಿ ಸ್ಥಪತಿ, ಸೂತ್ರಗ್ರಾಹಿ, ವರ್ಧತಿ ಮತ್ತು ತಕ್ಷಕ ಎಂಬುವರು. ಇವರಿಂದ ವಾಸ್ತುಕಲೆ ಬೆಳೆಯಿತು ಎನ್ನುತ್ತದೆ ಮಾನಸಾರ.

ಆದಿಮಾನವ ಗುಹೆಗಳಲ್ಲಿ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದು, ವಾಸಕ್ಕೆ ಅನುಕೂಲವಾದ ಮನೆಗಳನ್ನು ಕಟ್ಟಿಕೊಳ್ಳುವುದನ್ನು ಕಲಿತಾಗ, ನಾಗರೀಕತೆಯ ಜೀವನದಲ್ಲಿ ಬಹುದೊಡ್ಡ ಹೆಜ್ಜೆಯನ್ನು ಇಟ್ಟಂತಾಯಿತು. ಕ್ರಮೇಣ ಅವನ, ಅನುಭವ, ಬೆಳೆದಂತೆ, ಸನ್ನಿವೇಶಗಳು ಬದಲಾದಂತೆ, ಕಟ್ಟಡಗಳ ನಿರ್ಮಾಣದಲ್ಲಿ ಕೇವಲ ಉಪಯುಕ್ತತೆಯ ಜೊತೆಗೆ ಸೌಂದರ್ಯ ದೃಷ್ಟಿಯೂ ಬೆಳೆಯತೊಡಗಿತು. ಜಗತ್ತಿನ ಅತಿ ಪ್ರಾಚೀನವಾದ ನಾಗರೀಕತೆಗಳನ್ನು ಉದಾಹರಣೆಗೆ ಈಜಿಪ್ಟ್, ಗ್ರೀಕ್, ರೋಮ್ ಮತ್ತು ಸಿಂಧೂ ಇತ್ಯಾದಿಗಳಲ್ಲಿ ಬೆಳೆದುಬಂದ ಕಟ್ಟಡ ನಿರ್ಮಾಣದ ಕಥೆಯನ್ನು ಲಭ್ಯವಿರುವ ಆಧಾರಗಳಿಂದ ಕಟ್ಟಿ ನೋಡಲು ಪ್ರಯತ್ನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇತರೆ ಕಲೆಗಳಂತೆಯೇ ವಾಸ್ತುಶಿಲ್ಪವೂ ಆಯಾ ಕಾಲದ ಮತ್ತು ಆಯಾ ಜನಾಂಗದವರ ಆಂತರಿಕ ಆಕಾಂಕ್ಷೆ, ಅನುಭವಗಳಿಂದ ಕನ್ನಡಿಯನ್ನು ಹಿಡಿಯಬಲ್ಲದೆಂಬುದನ್ನು ಸೂಚಿಸುತ್ತದೆ.[೮]

ಭಾರತದ ಪ್ರಾಚೀನ ನಾಗರಿಕತೆಯಾದ ಸಿಂಧೂ ನದಿ ಸಂಸ್ಕೃತಿಯಲ್ಲಿ ದೊರೆತ ಮುದ್ರೆಗಳು, ಮೆಹೆಂಜೋದರದಲ್ಲಿ ದೊರೆತ ನರ್ತಕಿಯರ ಕಂಚಿನ ವಿಗ್ರಹ ಪುರೋಹಿತನ ಶಿಲ್ಪ, ಪಶುಪತಿ, ಶಿವ, ಗೂಳಿ ಹಾಗೂ ಇನ್ನಿತರ ವಸ್ತುಗಳು ಅವರ ಕಲೆಯ ಆಸಕ್ತಿಗೆ ಸಾಕ್ಷಿಗಳಾಗಿವೆ. ಪಶುಪತಿಯಂತಹ ವಿಗ್ರಹವನ್ನು ಪೂಜಿಸುತ್ತಿದ್ದುದು ಬೆಳಕಿಗೆ ಬಂದ ಸಂಗತಿಯಾಗಿದೆ. ಈ ಸಂಸ್ಕೃತಿಯಲ್ಲಿ ಗಮನ ಸೆಳೆಯುವ ಒಂದಂಶವೆಂದರೆ ದೇಗುಲಗಳಿಗಿಂತ ಮುಂಚೆಯೇ ಮೂರ್ತಿಶಿಲ್ಪದ ಬೆಳವಣಿಗೆ ಆರಾಧನೆ ಇತ್ತೆಂದು ಹೇಳಬಹುದು.

ಮೂರ್ತಿಗಳ ಪೂಜೆ ಆರಂಭವಾದ ಬಳಿಕ ಅವುಗಳ ರಕ್ಷಣೆಗೆ ವಾಸ್ತು ರೂಪ ನೀಡಲಾಯಿತು. ಕಲಾನಂತರದಲ್ಲಿ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಮೌರ್ಯರಿಗೆ ಸಲ್ಲುತ್ತದೆ.[೯] ಈ ದೃಷ್ಟಿಯಿಂದ ಅಶೋಕನ ಕಾಲದಲ್ಲಿ ಬೌದ್ಧ ಧರ್ಮ ರಾಜ್ಯ ಧರ್ಮವಾದುದಲ್ಲದೇ ಧರ್ಮವು ಆಯಿತು. ವಾಸ್ತುಶಿಲ್ಪದ ಮೇಲೆ ಬೌದ್ಧಧರ್ಮ ಅಚ್ಚಳಿಯದ ಪ್ರಭಾವವನ್ನು ಬೀರಿತು. ಬುದ್ಧನ ಅವಶೇಷಗಳ ರಕ್ಷಣೆಗಾಗಿ ಅನೇಕ ಸ್ತೂಪಗಳು ನಿರ್ಮಾಣವಾದವು. ಕಲ್ಲುಗಳನ್ನು ಕೊರೆದು ಗುಹೆಗಳನ್ನು ನಿರ್ಮಿಸಿದರು. ಇವು ವಾಸ್ತುಶಿಲ್ಪದ ಮೇಲೆ ಅಚ್ಚಳಿಯದ

ಪ್ರಭಾವವನ್ನು ಬೀರಿದವು. ಕಲ್ಲಿನ ಕೊರೆಯುವ, ಹೊಸ ತಂತ್ರದ ದೃಷ್ಟಿಯಿಂದ ಗುಹೆಗಳೂ, ಆ ಕಾಲದ ಕಟ್ಟಡ ನಿರ್ಮಾಣದ ಮೇಲೆ ಕ್ರಾಂತಿಕಾರಕ ಬದಲಾವಣೆಯನ್ನು ಉಂಟು ಮಾಡಿದವು. ಮೌರ್ಯರ ನಂತರ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಶುಂಗರು ಪ್ರಬಲರಾದರು. ದಕ್ಷಿಣದಲ್ಲಿ ಶಾತವಾಹನರು ಪ್ರಬಲರಾದರು. ಇವರ ಕಾಲದಲ್ಲಿನ ವಾಸ್ತುಶಿಲ್ಪವನ್ನು ಕಲ್ಲುಗಳ ಮೇಲೆ ಕೆತ್ತನೆಗಳು, ಸಾಂಕೇತಿಕ ನಿರೂಪಣೆಗಳು(symbolism) ಕಲ್ಲು ಕಟ್ಟಡಗಳು ಮತ್ತು ಚೈತ್ಯಾಲಯಗಳು ಬೌದ್ಧ ಸನ್ಯಾಸಿಗಳ ಮಠಗಳು ಅಥವಾ ವಿಹಾರಗಳು ಹೀಗೆ ವಿಭಾಗಿಸಬಹುದು.

ಕ್ರಿ.ಶ.೨೫೦ ರಿಂದ ೪೫೦ರವರೆಗೆ ಬೆಳೆದು ಬಂದ ವಾಸ್ತುಶಿಲ್ಪದ ಯುಗವನ್ನು ಗಾಂಧಾರ ರೀತಿಯ ವಾಸ್ತುಶಿಲ್ಪ ಎಂದು ಕರೆಯಲಾಗಿದೆ. ಇವುಗಳಲ್ಲಿ ಪ್ರಾರಂಭದ ಕಟ್ಟಡಗಳು ಒರಟು ರೂಪದ ಕಲ್ಲು ಗುಂಡುಗಳಿಂದ ನಿರ್ಮಿತವಾಗುತ್ತಿದ್ದವು. ಕುಶಾನರ ಕಾಲದಲ್ಲಿ ಇಂತಹ ಚೈತ್ಯಾಲಯಗಳು, ವಿಹಾರಗಳೂ ನಿರ್ಮಾಣವಾದವು. ಗಾಂಧಾರ, ವಾಸ್ತುಶಿಲ್ಪದ ಕಾಲದಲ್ಲಿಯೇ ಮೂಡಿಬಂದ ಇನ್ನೊಂದು ಮಾದರಿಯೆಂದರೆ ಮಥುರಾ ಶೈಲಿ. ಈ ಮಥುರಾ ಶೈಲಿಯನ್ನೂ ಚೈತ್ಯಾಲಯಗಳ ಕಮಾನುಗಳನ್ನು ಮತ್ತು ಅದರ ಮುಖ್ಯ ಅಂಶಗಳ ನಿರ್ಮಾಣದಲ್ಲಿ ಕಾಣ ಬಹುದು.[೧೦]

ಹಿಂದೂ ದೇವಾಲಯಗಳನ್ನು ಕಲ್ಲಿನಿಂದ ನಿರ್ಮಿಸುವುದರಲ್ಲಿ ಪ್ರಮುಖವಾದ ಹೆಜ್ಜೆಯನ್ನಿತ್ತವರು ಗುಪ್ತರ ಯುಗ. ಹಿಂದೂ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ ಗುಪ್ತರಿಂದ ದೇವಾಲಯಗಳ ರಚನೆಗೆ ವಿಶೇಷ ಪ್ರೋತ್ಸಾಹ, ಪೋಷಣೆಗಳು ಸಿಕ್ಕವು. ಇವರ ಕಾಲದಲ್ಲಿ ಅಂದರೆ ಸುಮಾರು ೪ನೇ ಶತಮಾನದಿಂದ ೬ನೇ ಶತಮಾನದವರೆಗೆ ದೇವಾಲಯಗಳ ನಿರ್ಮಾಣದ ಕಲೆ ಗಮನಾರ್ಹವಾದ ವಿಕಾಸವನ್ನು ಪಡೆಯಿತು. ಕರ್ನಾಟಕವನ್ನು ಚಾಲುಕ್ಯರಿಗಿಂತ ಹಿಂದೆ ನಿರ್ಮಿತವಾದ ಎಲ್ಲಾ ದೇವಾಲಯಗಳನ್ನು ಮೂರ್ರ್ಯಾಸ್‌ರವರು 'ಕದಂಬಶೈಲಿ' ಎಂದು ಕರೆದಿದ್ದಾರೆ. ಹಲಸಿಯ ಹಟ್ಟಿಕೇಶ್ವರ, ಕಡಲೇಶ್ವರ, ನರಸಿಂಹ ದೇವಾಲಯಗಳು, ಕದಂಬರ ಕಾಲದ ವಾಸ್ತುಶಿಲ್ಪ ಶೈಲಿಯ ದ್ಯೋತಕಗಳಾಗಿವೆ.

ಕರ್ನಾಟಕದ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಅನೇಕ ಬಗೆಯ ಪ್ರಯೋಗಗಳನ್ನು ನಡೆಸಿದ ಕೀರ್ತಿ ಬಾದಾಮಿ ಚಾಲುಕ್ಯರ ಮನೆತನಕ್ಕೆ ಸಲ್ಲುತ್ತದೆ. ಇವರ ಕಾಲದಲ್ಲಿ ದ್ರಾವಿಡ, ನಾಗರ, ವೇಸರ ಶೈಲಿಗಳ ದೇಗುಲಗಳನ್ನು ಕಟ್ಟಿಸಿದ್ದಾರೆ. ಇವರ ಕಾಲದಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ, ಪಾಪನಾಥ ಐಹೊಳೆಯಲ್ಲಿ ಲಾಡಾಖಾನ, ದುರ್ಗಾ ದೇವಾಲಯ, ಮೇಗುತಿ ದೇವಾಲಯ ಮುಂತಾದ ಗುಹಾಲಯಗಳನ್ನು ಕಾಣುತ್ತೇವೆ. ಇವರು ವಾಸ್ತುಶಿಲ್ಪಕ್ಕೆ ನೀಡಿದ ಅಪಾರ ಕೊಡುಗೆಯಿಂದಾಗಿ ಈ ಕಾಲವನ್ನು 'ಸುವರ್ಣಯುಗ'[೧೧] ಎನ್ನುತ್ತಾರೆ.

ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ವಾಸ್ತುಶಿಲ್ಪ ಕ್ಷೇತ್ರ ಗಟ್ಟಿಯಾದ ಸ್ವರೂಪವನ್ನು ಪಡೆಯಿತು. ಇದರ ವಾಸ್ತುಶೈಲಿಯನ್ನು ಎಲ್ಲೋರದ ಕೈಲಾಸನಾಥ ದೇವಾಲಯ ಮತ್ತು ಅಲ್ಲಿನ

ಗುಹಾಲಯಗಳಲ್ಲಿ ಕಾಣಬಹುದಾಗಿದೆ. ನಂತರದಲ್ಲಿ ಕಲ್ಯಾಣ ಚಾಲುಕ್ಯರು ಕರ್ನಾಟಕದ ವಾಸ್ತುಶಿಲ್ಪ ಕ್ಷೇತ್ರಕ್ಕೆ ನವೀನತೆಯನ್ನು ತುಂಬಿದರು. ಚಾಲುಕ್ಯರು ಬಳಸಿದ ಒರಟಾದ ಕೆಂಪು, ಮರಳು ಶಿಲೆಯನ್ನು ಒಟ್ಟು ಮೃದು ಮತ್ತು ನಯವಾದ ನೀಲಿ ಛಾಯೆಯ ಬಳಪದ ಕಲ್ಲನ್ನು ಬಳಸಿದ್ದಾರೆ. ಇವರ ಕಾಲದಲ್ಲಿ ರಚಿಸಿರುವ ಪ್ರಮುಖ ದೇವಾಲಯಗಳೆಂದರೆ, ಗದುಗಿನ ತ್ರಿಕೂಟೇಶ್ವರ, ಹಾನಗಲ್ಲಿನ ತಾರಕೇಶ್ವರ, ಬಂಕಾಪುರದ ೬೦ ಕಂಬದ ದೇವಾಲಯಗಳು[೧೨] ಇತ್ಯಾದಿ.

ಹೊಯ್ಸಳರ ಕಾಲವು ದೇವಾಲಯಗಳ ವಿಕಾಸದಲ್ಲಿ ಆಕರ್ಷಕವಾದ ಕಾಲಘಟ್ಟ ಎನ್ನಬಹುದು. ಹೊಯ್ಸಳ ವಾಸ್ತುಶಿಲ್ಪದ ಪ್ರಮುಖ ಅಂಶಗಳೆಂದರೆ ಕಟ್ಟಡದ ಒಟ್ಟು ರೂಪ ಮತ್ತು ತಲಾ ವಿನ್ಯಾಸ. ಗೋಡೆಯ ರಚನೆ ಮತ್ತು ಅದರ ಮೇಲಿನ ಅಲಂಕಾರಗಳು ಗೋಪುರ ಅಥವಾ ಶಿಖರಗಳ ರಚನೆ, ಕಂಬಗಳ ನಿರ್ಮಾಣದಲ್ಲಿ ಕಂಡುಬರುವ ಕುಶಲತೆ, ಇವರು ಕಲ್ಲು-ನೀಲಿ ಛಾಯೆಯುಳ್ಳ ಬಳಪದ ಕಲ್ಲನ್ನು ಬಳಸಿದ್ದಾರೆ.[೧೩]

ಇಡೀ ದಕ್ಷಿಣ ಭಾರತಕ್ಕೆ ಧಾರ್ಮಿಕ ರಕ್ಷಣೆಯನ್ನು ಕೊಟ್ಟ ಇನ್ನೊಂದು ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ. ವಿಜಯನಗರ ಅರಸರು ಗಟ್ಟಿಯಾದ ಗ್ರಾನೈಟ್ ಶಿಲೆಯನ್ನು ಬಳಸಿ ದೇವಾಲಯವನ್ನು ನಿರ್ಮಿಸಿದ್ದಾರೆ. ಇವರ ಕಾಲದ ದೇವಾಲಯಗಳು ಹಂಪಿ, ಕಂಚಿ, ತಿರುಪತಿ, ಮಧುರೆ[೧೪] ಮುಂತಾದ ಕಡೆಗಳಲ್ಲಿ ಕಂಡುಬರುತ್ತವೆ. ಇವರ ಕಾಲದಲ್ಲಿ ದ್ರಾವಿಡ ಶೈಲಿಯು ಉನ್ನತವಾದ ಹಂತವನ್ನು ತಲುಪಿತ್ತು. ವಿಜಯನಗರ ಪಥನಾನಂತರ ಪಾಳೆಗಾರರು ಅದನ್ನು ಮುಂದುವರಿಸಿಕೊಂಡು ಬಂದರು.

ಪ್ರಸ್ತುತ ಕಾಗಿನೆಲೆ ಪರಿಸರದಲ್ಲಿ ಕಾಲಾವಧಿಯಲ್ಲಿ ನಿರ್ಮಿತಗೊಂಡಿರುವ ಶೈವ, ವೈಷ್ಣವ, ಶಾಕ್ತ, ದೇವಾಲಯಗಳನ್ನು ಕಾಣಬಹುದು.

ದೇವಾಲಯಗಳು

ಊರು : ಹಳೇ ಕುಮ್ಮೂರು

ಸ್ಥಳ : ಕುಮ್ಮೂರು ಕಾಗಿನೆಲೆ ರಸ್ತೆಯ ಬಲಬದಿಗೆ

ಸ್ಮಾರಕ : ಕಲ್ಲೇಶ್ವರ ದೇವಾಲಯ

ಕಾಲ : ಕ್ರಿ.ಶ.ಸು.೧೨-೧೩ನೇಯ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಸ್ಥಿತಿ : ಜೀರ್ಣೋದ್ಧಾರಗೊಳ್ಳುತ್ತಿದೆ.

ಈ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿದ್ದು, ಶೈವ ದೇವಾಲಯವಾಗಿದೆ. ಈ ದೇವಾಲಯಕ್ಕೆ ಈಗ ಸಂಪೂರ್ಣವಾಗಿ ಜೀರ್ಣೋದ್ಧಾರ ಕೈಗೊಂಡಿದ್ದು ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ದೇವಾಲಯದ ಗರ್ಭಗುಡಿಯಲ್ಲಿರುವಂತಹ ಈಶ್ವರ ಲಿಂಗವನ್ನು ತೆಗೆದು ವೀರಭದ್ರ ಗುಡಿಯಲ್ಲಿ ಇಡಲಾಗಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಕಾಣಬಹುದಾಗಿದೆ. ಮತ್ತು ಬಾಗಿಲುವಾಡವು ಬಳ್ಳಿಗಳನ್ನು ಒಳಗೊಂಡಿದ್ದು, ಅದರ ಕೆಳಭಾಗದಲ್ಲಿ ದ್ವಾರಪಾಲಕರ ಮೂರ್ತಿಗಳಿರುವುದು ಕಂಡುಬರುತ್ತದೆ. ದೇವಾಲಯದ ಬಲಗಡೆಯ ಭಾಗದಲ್ಲಿ ನಾಗಶಿಲ್ಪಗಳು ಕಂಡುಬಂದಿವೆ. ಅವುಗಳಿಗೆ ಇಂದು ಜನರು ಸುಣ್ಣ ಬಣ್ಣ ಹಚ್ಚಿದ್ದಾರೆ.

ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಅದರ ಮುಂದೆ ನಂದಿಯ ಶಿಲ್ಪ ರಚನೆಯಾಗಿರಬಹುದು. ಆದರೆ ಈಗ ನಂದಿಯ ಶಿಲ್ಪವು ಕಾಣುತ್ತಿಲ್ಲ.

ಊರು	:	ಹಳೇ ಕುಮ್ಮೂರು
ಸ್ಥಳ	:	ಚಿಕ್ಕಬಸೂರು ರಸ್ತೆಯ ಎಡಬದಿಗೆ
ಸ್ಮಾರಕ	:	ರಾಮಲಿಂಗೇಶ್ವರ ದೇವಾಲಯ
ಕಾಲ	:	ಕ್ರಿ.ಶ.ಸು.೧೨–೧೩ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ

ಈ ದೇವಾಲಯವು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಿತವಾಗಿದ್ದು, ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದ್ದು, ಬಾಗಿಲು ತ್ರಿಶಾಖೆಗಳನ್ನು ಹೊಂದಿದೆ. ಅಂತರಾಳದ ಬಾಗಿಲು ಇಕ್ಕೆಲೆಗಳಲ್ಲಿ ಜಾಲಂಧಾರಗಳಿದ್ದು ದ್ವಾರಬಂಧದಲ್ಲಿ ತ್ರೈಪುರುಷ ಉಬ್ಬುಶಿಲ್ಪವಿರುವುದು ಕಂಡುಬಂದಿದೆ. ನವರಂಗದ ಮಧ್ಯಭಾಗದಲ್ಲಿ ತಿರುಗಣೆಯಂತ್ರದಿಂದ ನಿರ್ಮಾಣದ ನಾಲ್ಕು ಬಿಡಿ ಕಂಬಗಳಿವೆ. ಅದರ ಮೇಲ್ಛಾವಣಿಯಲ್ಲಿ ಭುವನೇಶ್ವರಿ ಮತ್ತು ಒಳಚಿತ್ರಗಳಲ್ಲಿ ದೇವಕೋಷ್ಟಕಗಳು ಕಂಡುಬಂದಿವೆ. ನಾಲ್ಕು ಕಂಬಗಳ ಮಧ್ಯದಲ್ಲಿ ನಂದಿಯ ಶಿಲ್ಪವು ಕಂಡುಬಂದಿದೆ.

ದೇವಕೋಷ್ಟಕದಲ್ಲಿ(ನವರಂಗದ) ಸಪ್ತ ಮಾತೃಕೆಯರ ಫಲಕ, ಸರಸ್ವತಿಯ ಮೂರ್ತಿ ಶಿಲ್ಪಗಳಿರುವುದನ್ನು ಕಾಣಬಹುದು. ಮತ್ತು ದೇವಾಲಯದ ಮತ್ತೊಂದು ಮೂಲೆಯಲ್ಲಿ ಶಿವಲಿಂಗವು ಕಂಡುಬಂದಿದೆ.[೧೬]

ದೇವಾಲಯದ ಹಿಂದಗಡೆ ವೀರಗಲ್ಲು ಶಾಸನವಿದ್ದು, ಅದರ ಪಕ್ಕದಲ್ಲಿಯೇ ಯುದ್ಧ ಮಾಡುತ್ತಿರುವ ಸನ್ನಿವೇಶದ ಮತ್ತೊಂದು ವೀರಗಲ್ಲಿರುವುದು ಕಂಡುಬರುತ್ತದೆ. ದೇವಾಲಯ ಎದುರುಗಡೆ ಈಗ ಸ್ತಂಭವಿರುವುದನ್ನು ಕಾಣುತ್ತೇವೆ. ಮತ್ತು ದೇವಾಲಯದ ಪಕ್ಕದಲ್ಲಿ(ಬಲಗಡೆ) ಒಂದು ಶಾಸನವಿದೆ. ಅದರ ಮೇಲೆ(ಪಟ್ಟಿಕೆ ಮೇಲೆ) ಸೂರ್ಯ, ಚಂದ್ರ, ಈಶ್ವರ ಲಿಂಗವಿದೆ. ಅದರ ಪಕ್ಕವೇ ಆಕಳು(ಬಲಗಡೆ), ಎಡಗಡೆ ಭಕ್ತ, ನಂದಿಯ ಶಿಲ್ಪಗಳಿವೆ. ದೇವಾಲಯದ ಎಡಭಾಗದಲ್ಲಿ ಒಂದು ದೊಡ್ಡ ಬಾವಿಯಿದ್ದು, ಅದನ್ನು ಈಗ ಮುಚ್ಚಲಾಗಿದೆ.

ಊರು : ಬಡಮಲ್ಲಿ

ಸ್ಥಳ : ಗ್ರಾಮದಿಂದ ೧ ಕಿ.ಮೀ. ಉತ್ತರಕ್ಕೆ

ಸ್ಮಾರಕ : ರಾಮಲಿಂಗ ದೇವಾಲಯ

ಕಾಲ : ಕ್ರಿ.ಶ.ಸು.೧೦ನೇಯ ಶತಮಾನ

ಶೈಲಿ : ರಾಷ್ಟ್ರಕೂಟ

ಅಭಿಮುಖ : ಪೂರ್ವ

ಸ್ಥಿತಿ : ಭಗ್ನ

ಈ ದೇವಾಲಯವು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದ್ದು, ರಾಷ್ಟ್ರಕೂಟ ದೊರೆ ೩ನೇ ಕೃಷ್ಣನು ಈ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿರುವಂತಹ ಸಂದರ್ಭದಲ್ಲಿ ಈ ದೇವಾಲಯವು ನಿರ್ಮಿತವಾಗಿದೆ. ದೇವಾಲಯವು ಬಡಮಲ್ಲಿಯಿಂದ ಉತ್ತರಕ್ಕೆ ಸುಮಾರು ೧ ಕಿ.ಮೀ. ದೂರದಲ್ಲಿದೆ. ಕೆರೆಯ ಎರಿಯ(ದಂಡೆಯ) ಮೇಲೆ ಎಡಭಾಗದಲ್ಲಿ ಕಂಡುಬರುತ್ತದೆ. ಈ ದೇವಾಲಯವು ಈಗ ಸಂಪೂರ್ಣವಾಗಿ ಮಣ್ಣಿನಿಂದ ಆವೃತವಾಗಿರುವುದು ಕಂಡುಬರುತ್ತದೆ. ದೇವಾಲಯವು ಗರ್ಭಗೃಹ ಮತ್ತು ಅಂತರಾಳಗಳನ್ನು ಒಳಗೊಂಡಿದೆ. ಆದರೆ ದೇವಾಲಯದ ನವರಂಗದ ಭಾಗವು ಸಂಪೂರ್ಣವಾಗಿ ನಶಿಸಿ ಹೋಗಿದೆ. ಗರ್ಭಗೃಹದಲ್ಲಿರುವ ಬಾಗಿಲುವಾಡವು ಸರಳವಾಗಿದೆ. ದೇವಾಲಯವನ್ನು ಇಟ್ಟಿಗೆ ಮತ್ತು ಸಣ್ಣ ಕಲ್ಲುಗಳಿಂದ ರಚಿಸಲಾಗಿದ್ದು,[೧೨] ಯಾವುದೇ ರೀತಿಯ ಶಿಖರವು ಅಲ್ಲಿ ಕಂಡುಬಂದಿಲ್ಲ(ಅದು ನಶಿಸಿ ಹೋಗಿವೆ, ಬಿದ್ದು ಹೋಗಿದೆ). ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅದರ ಪಕ್ಕದಲ್ಲಿ ಚಿಕ್ಕದಾದ ನಂದಿಶಿಲ್ಪವಿದೆ. ಮತ್ತು ಶಿವಲಿಂಗದ ಹಿಂದಗಡೆ ನಾಗಶಿಲ್ಪಗಳಿರುವುದು ಕಂಡುಬರುತ್ತದೆ. ಗರ್ಭಗೃಹದ ಶಿವಲಿಂಗದ ಹಿಂದೆ(ಕಪಾಟದಲ್ಲಿ) ಜೈನ ತೀರ್ಥಂಕರರ ಮೂರ್ತಿಯಿರುವುದನ್ನು ನಾವು ಕಾಣಬಹುದು. ದೇವಾಲಯದ ಅಂತರಾಳದಲ್ಲಿ ಗರ್ಭಗುಡಿಯ ಎದುರಿಗೆ ನಂದಿಯ ಶಿಲ್ಪಗಳಿರುವುದು ಮತ್ತು ಈ ದೇವಾಲಯದ ಮುಂದುಗಡೆ ಶಾಸನವು ಕಂಡುಬಂದಿದ್ದು, ಇದು ರಾಷ್ಟ್ರಕೂಟ ದೊರೆ ೩ನೇ ಕೃಷ್ಣನ ಆಳ್ವಿಕೆಗೆ ಸಂಬಂಧಿಪಟ್ಟದ್ದಾಗಿದೆ. ಈ ಶಾಸನದಲ್ಲಿ ಬನವಾಸಿ ೧೨೦೦೦ದ ಅಧಿಕಾರಿ ಭೀಮಪ್ಪರಸನ ಹೆಸರನ್ನು ಉಲ್ಲೇಖಿಸುತ್ತದೆ.

ದೇವಾಲಯದ ಎದುರುಗಡೆ ಇರುವ ಯಾದವರ ಕಾಲದ ಇನ್ನೇರಡು ಶಾಸನಗಳು ಮಹಾಮಂಡಳೇಶ್ವರ ಮತ್ತು ಗೌಡಿಕೆಯನ್ನು ನೀಡಿದ ಮಾಹಿತಿಯನ್ನು ತಿಳಿಯಪಡಿಸುತ್ತದೆ. ಈ ರೀತಿಯಾಗಿ ದೇವಾಲಯವು ಕಂಡುಬಂದಿದೆ.[೧೮]

ಊರು	:	ಹಿರೇಹಳ್ಳಿ
ಸ್ಥಳ	:	ಚಿಕ್ಕಬಾಸರು ರಸ್ತೆಯ ಬಲಬದಿಗೆ
ಸ್ಮಾರಕ	:	ರಾಮಲಿಂಗ ದೇವಾಲಯ
ಕಾಲ	:	ಕ್ರಿ.ಶ.ಸು.೧೧-೧೨ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಭಗ್ನ ಸ್ಥಿತಿಯಲ್ಲಿದೆ.[೧೯]

ಈ ದೇವಾಲಯವು ಕೂಡಾ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಿತವಾಗಿದ್ದು, ಸಂಪೂರ್ಣವಾಗಿ ಬೀಳುವ ಹಂತವನ್ನು ತಲುಪಿದೆ. ದೇವಾಲಯದ ಒಳಗಡೆ ಭಾಗ ಈಗಾಗಲೇ ಬಿದ್ದು ಹೋಗಿದ್ದು, ಅದರ ಬಾಗಿಲುವಾಡಗಳು, ಜಾಲಾಂಧರಗಳು ಕೆಳಗಡೆ ಬಿದ್ದುಹೋಗಿವೆ. ದೇವಾಲಯವು ದ್ವಿಕೂಟ ದೇವಾಲಯವಾಗಿದ್ದು, ೨ ಗರ್ಭಗೃಹಗಳನ್ನು, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಇದೊಂದು ದ್ವಿಕೂಟ ದೇವಾಲಯವಾಗಿದ್ದು, ಪೂರ್ವಾಭಿಮುಖವಾಗಿರುವ ಗರ್ಭಗೃಹಕ್ಕೆ ಅಂತರಾಳವಿದ್ದು, ಉತ್ತರಾಭಿಮುಖವಾಗಿ ಇವರು ಗರ್ಭಗೃಹಕ್ಕೆ ಅಂತರಾಳವಿಲ್ಲ. ಮುಖ್ಯವಾದ ಗರ್ಭಗುಡಿಯ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿರುವುದು ಕಂಡುಬರುತ್ತದೆ. ಮತ್ತು ಅಂತರಾಳದ ಬಾಗಿಲ ಇಕ್ಕೆಲೆಗಳಲ್ಲಿ ಸುಂದರವಾದ ಜಾಲಂಧರಗಳು ಕಂಡುಬಂದಿದ್ದು, ಬಾಗಿಲ ದ್ವಾರಬಂಧದ ಮೇಲೆ ಸುಂದರವಾದ ತ್ರಿಪುರುಷರ ಉಬ್ಬುಶಿಲ್ಪ ಮತ್ತು ಅದರ ಕೆಳಗೆ ಗಜಲಕ್ಷ್ಮಿಯ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ನವರಂಗದ ನಾಲ್ಕು ಕಂಬಗಳು, ಭುವನೇಶ್ವರಿಯನ್ನು ಹೊತ್ತು ನಿಂತಿವೆ. ಈ ದೇವಾಲಯಕ್ಕೆ ದಕ್ಷಿಣ ಮತ್ತು ಪೂರ್ವದಿಂದ ಪ್ರವೇಶ ದ್ವಾರಗಳಿದ್ದು, ಈಗ ಅವುಗಳು ಅಂದರೆ ದಕ್ಷಿಣದ ಕಡೆಯ ಪ್ರವೇಶ ದ್ವಾರವು ಸಂಪೂರ್ಣವಾಗಿ ಬಿದ್ದು ಹೋಗಿದೆ. ನವರಂಗದ ಒಳಭಿತ್ತಿಯಲ್ಲಿ ದೇವಕೋಷ್ಟಕಗಳಿದ್ದು, ನವರಂಗದಲ್ಲಿನ ಕಕ್ಷಾಸನವನ್ನು ಆವರಿಸಿದಂತ ಮಣ್ಣಿನ ಗೋಡೆ ನಿರ್ಮಿಸಿದ್ದು, ಅದು ಈಗ ನಾಶಹೊಂದುವ ಸ್ಥಿತಿಯಲ್ಲಿ ಕಂಡುಬಂದಿದೆ. ಈಗ ದೇವಾಲಯಕ್ಕೆ ಶಿಖರವು ಕಂಡಬಂದಿಲ್ಲ. ಅದು ಬಿದ್ದು ಹೋಗಿರುವುದು ಇಲ್ಲಿ ಬಿದ್ದಿರುವ ಕೆಲವು ವಾಸ್ತುಭಾಗಗಳಿಂದ ತಿಳಿದುಬರುತ್ತದೆ.

ಗರ್ಭಗೃಹದಲ್ಲಿ ಶಿವಲಿಂಗ ಮತ್ತು ವಿಷ್ಣುವಿನ ಮೂರ್ತಿಶಿಲ್ಪಗಳಿವೆ. ನವರಂಗದಲ್ಲಿ ನಂದಿಶಿಲ್ಪವಿದೆ. ದೇವಕೋಷ್ಟಕಗಳಲ್ಲಿ ಗಣಪತಿ, ಸಪ್ತ ಮಾತೃಕೆಯರ ಫಲಕ, ಕಾರ್ತಿಕೇಯ ಶಿಲ್ಪ,

ನಾಗಶಿಲ್ಪಗಳು ಕಂಡುಬಂದಿವೆ. ಮತ್ತು ದೇವಾಲಯದ ಆವರಣದಲ್ಲಿ ಅಲ್ಲಲ್ಲಿ ಮಾಸ್ತಿಕಲ್ಲು, ವೀರಗಲ್ಲು ಹೊರಗಡೆ ಬಿದ್ದಿರುವುದನ್ನು ಕಾಣಬಹುದು. ಶಾಸನ ಕಲ್ಲುಗಳು ಹೊರಗಡೆ ಗೋಡೆಗೆ ನಿಲ್ಲಿಸಿರುವುದು ಕಂಡುಬರುತ್ತದೆ. ಅದು ಯುದ್ಧ ಮಾಡುವ ಸನ್ನಿವೇಶಗಳನ್ನು ಒಳಗೊಂಡಿದ್ದು, ಶಾಸನವು ಅಂಗಜೇಶ್ವರ ಎಂಬ ಹೆಸರನ್ನು ಉಲ್ಲೇಖಿಸುತ್ತದೆ.[೨೦] ಒಟ್ಟಿನಲ್ಲಿ ಈ ದೇವಾಲಯವು ಬೀಳುವ ಹಂತವನ್ನು ತಲುಪಿದ್ದು, ದೇವಾಲಯದ ಮೇಲ್ಛಾವಣಿಯು ಕಲ್ಲಿನಿಂದ ಆವೃತವಾಗಿರುವುದು ಕಂಡುಬಂದಿದೆ.

ಊರು	:	ಚಿಕ್ಕ ಬಾಸೂರು
ಸ್ಥಳ	:	ಹಿರೇಹಳ್ಳಿ ರಸ್ತೆ ಎಡಬದಿಗೆ
ಸ್ಮಾರಕ	:	ಈಶ್ವರ ದೇವಾಲಯ
ಕಾಲ	:	ಕ್ರಿ.ಶ.ಸು.೧೨–೧೩ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಭಗ್ನ

ಈ ದೇವಾಲಯವು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಿತವಾಗಿದ್ದು, ಶೈವ ದೇವಾಲಯವಾಗಿದೆ. ದೇವಾಲಯ ಸಂಪೂರ್ಣವಾಗಿ(ಮೇಲ್ಛಾವಣಿ) ಮಣ್ಣಿನಿಂದ ಆವೃತವಾಗಿದ್ದು, ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪಗಳಿಂದ ಕೂಡಿರುವ ಈ ದೇವಾಲಯವು ಈಗ ಶಿಥಿಲಾವಸ್ಥೆಯಲ್ಲಿದೆ. ದೇವಾಲಯದ ಗರ್ಭಗೃಹದ ಬಾಗಿಲುವಾಡವು ಅಲಂಕೃತವಾಗಿದ್ದು ಅದರ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿರುವುದನ್ನು ಕಾಣಬಹುದು. ಬಾಗಿಲು ಲತಾ ಬಳ್ಳಿಗಳನ್ನು ಒಳಗೊಂಡಿದೆ. ಅಂತರಾಳದ ಭಾಗವನ್ನು ನವೀಕರಿಸಿರುವ ಕಾರಣ ಅಂತರಾಳದ ಬಾಗಿಲು ಗರ್ಭಗೃಹಕ್ಕೆ ನೇರ ಸರಳ ರೇಖೆಯಲ್ಲಿ ಕಂಡುಬರುವುದಿಲ್ಲ.

ತಿರುಗಣೆಯಿಂದ ರಚಿತವಾದ ನಾಲ್ಕು ಕಂಬಗಳು ನವರಂಗದಲ್ಲಿ ಭುವನೇಶ್ವರಿಯನ್ನು ಹೊತ್ತು ನಿಂತಿವೆ. ನವರಂಗದ ಮುಂಭಾಗದಲ್ಲಿ ಮುಖಮಂಟಪವಿದ್ದು, ಅದರಲ್ಲಿ ಎರಡು ಕಂಬಗಳಿವೆ. ನವರಂಗಕ್ಕೆ ಪೂರ್ವ ಮತ್ತು ದಕ್ಷಿಣದೆಡೆಗೆ ಎರಡು ಕಡೆ ಪ್ರವೇಶದ್ವಾರಗಳು ಕಂಡುಬಂದಿವೆ. ನವರಂಗವು ದೇವಕೋಷ್ಟಕಗಳನ್ನು ಒಳಗೊಂಡಿದೆ. ದೇವಾಲಯದ ಒಳಗಡೆ ಒಕ್ಕೈಗಲ್ಲುಗಳಿರುವುದು ಕಂಡುಬರುತ್ತದೆ. ನವರಂಗದಲ್ಲಿ ನಂದಿಶಿಲ್ಪ, ಮದನಿಕ, ಲಿಂಗ ಮತ್ತು ವಿಷ್ಣುವಿನ ಮೂರ್ತಿಶಿಲ್ಪಗಳು ಕಂಡುಬಂದಿವೆ. ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗ ಇರುವುದು ಕಂಡುಬಂದಿದೆ. ದೇವಾಲಯದ ಒಳಗಡೆ ಗೋಡೆಗೆ ಮಾಸ್ತಿಕಲ್ಲುಗಳನ್ನು ಒರಗಿಸಿ

ಇಡಲಾಗಿದೆ.[೨೧] ದೇವಾಲಯಗಳ ಜೀರ್ಣೋದ್ಧಾರ ಕೈಗೊಂಡಿಲ್ಲ, ಅದು ಸಂಪೂರ್ಣವಾಗಿ ಬೀಳುವ ಹಂತವನ್ನು ತಲುಪಿದೆ.

ಊರು	:	ಚಿಕ್ಕಬಾಸೂರು
ಸ್ಥಳ	:	ಸಿದ್ಧರಾಮೇಶ್ವರ ಗುಡಿಯ ಪಕ್ಕದಲ್ಲಿ
ಸ್ಮಾರಕ	:	ಗವಿಸಿದ್ದೇಶ್ವರ ದೇವಾಲಯ
ಕಾಲ	:	ಕ್ರಿ.ಶ.ಸು.೧೨–೧೩ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ[೨೨]
ಅಭಿಮುಖ	:	ಪೂರ್ವ
ಸ್ಥಿತಿ	:	ಮಧ್ಯಮ

ಈ ದೇವಾಲಯವು ಶೈವ ದೇವಾಲಯವಾಗಿದ್ದು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಿತವಾಗಿದೆ. ಈ ದೇವಾಲಯ ಗುಹೆಯಲ್ಲಿ ಆವೃತವಾಗಿದ್ದು, ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಅಂತರಾಳದ ಬಾಗಿಲುವಾಡಗಳು ಸರಳವಾಗಿದ್ದು, ನವರಂಗದಲ್ಲಿ ೪ ಕಂಬಗಳಿದ್ದು ಅದರ ಮುಂಭಾಗದ ಮುಖಮಂಟಪವನ್ನು ಎರಡು ಕಂಬಗಳಿಂದ ರಚಿಸಲಾಗಿದೆ.[೨೩] ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಎದುರುಗಡೆ ನವರಂಗದಲ್ಲಿ ನಂದಿಯ ಮೂರ್ತಿಯನ್ನು ಕಾಣಬಹುದು.[೨೪] ದೇವಾಲಯ ನವರಂಗದ ಬಲಭಾಗದ ಕೋಷ್ಟಕದಲ್ಲಿ ಮಹಿಷಮರ್ಧಿನಿಯ ಶಿಲ್ಪವಿರುವುದು ಕಂಡುಬರುತ್ತದೆ. ದೇವಾಲಯದ ಮುಖಮಂಟಪದ ಪ್ರವೇಶ ದ್ವಾರವನ್ನು ನವೀಕರಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಹಲವಾರು ನಾಗಶಿಲ್ಪಗಳಿವೆ. ಮಹಿಷಮರ್ದಿನಿ ನಂದಿಯ ಮೂರ್ತಿಗಳಿದ್ದು, ಶಾಸನವನ್ನು ಒಳಗೊಂಡಂತಹ ಒಂದು ವೀರಗಲ್ಲು ಇದೆ.[೨೫] ದೇವಾಲಯದ ಆವರಣದಲ್ಲಿ ಭಗ್ನಗೊಂಡಿರುವ ಶಿಲ್ಪಗಳು ಬಿದ್ದಿವೆ. ಈ ದೇವಾಲಯದ ಪಕ್ಕದಲ್ಲಿಯ ಸಿದ್ಧರಾಮೇಶ್ವರ ದೇವಾಲಯವಿರುವುದು ಕಂಡುಬಂದಿದೆ. ದೇವಾಲಯದ ಎಡಭಾಗದ ಎದುರುಗಡೆ ಮೂಲೆಯಲ್ಲಿ ಒಂದು ಬಾವಿಯಿರುವುದು ಕಂಡುಬರುತ್ತದೆ.

ಊರು	:	ಹಿರೇ ಅಣಜಿ
ಸ್ಥಳ	:	ಊರ ಹೊರಗೆ ಇರುವ ಹಳೇಕೆರೆ ಸಮೀಪ
ಸ್ಮಾರಕ	:	ಕಲ್ಲಮಲ್ಲಪ್ಪ(ಕಲ್ಮೇಶ್ವರ) ದೇವಾಲಯ
ಕಾಲ	:	ಕ್ರಿ.ಶ.ಸು.೧೧–೧೨ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	–	ಕನಿಷ್ಠ

ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಿತವಾದ ಈ ದೇವಾಲಯವು ಸಂಪೂರ್ಣವಾಗಿ ನಾಶ ಹೊಂದುವ ಸ್ಥಿತಿಯಲ್ಲಿ ಕಂಡುಬಂದಿದೆ. ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿಂದ ಕೂಡಿದೆ. ಗರ್ಭಗೃಹ ಹಾಗೂ ಅಂತರಾಳದ ಬಾಗಿಲುವಾಡಗಳು ಸುಂದರವಾಗಿವೆ. ನವರಂಗದ ಮಧ್ಯಭಾಗದಲ್ಲಿ ೪ ಕಂಬಗಳು ಭುವನೇಶ್ವರಿಯನ್ನು ಹೊತ್ತಿವೆ. ಅಂತರಾಳದಲ್ಲಿ ವೀರಭದ್ರನ ಮೂರ್ತಿಶಿಲ್ಪವಿದೆ(ಬಲಗಡೆ ಭಾಗದಲ್ಲಿ) ಮತ್ತು ಎಡಕ್ಕೆ ಲಕ್ಷ್ಮಿಮೂರ್ತಿ ಶಿಲ್ಪವು ಕಂಡುಬಂದಿದೆ. ನವರಂಗದ ಒಳಭಿತ್ತಿಯು ಶಿಥಿಲಾವಸ್ಥೆಯಲ್ಲಿದ್ದು, ಪೂರ್ವ ಸಂಪೂರ್ಣವಾಗಿ ನಶಿಸಿ ಹೋಗಿದೆ.

ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದೆ. ದೇವಾಲಯದ ಮುಂಭಾಗದಲ್ಲಿ ಶಾಸನ ಸಹಿತ ವೀರಗಲ್ಲಿದ್ದು ಅದರು ಯಾದವ ದೊರೆ ರಾಮಚಂದ್ರನ ೧೨೯೩ರ ಶಾಸನವು ಬಸದಿಗೆ ದಾನ ನೀಡಿದ ಮಾಹಿತಿಯನ್ನು ನೀಡುತ್ತದೆ. ಊರಿನಲ್ಲಿರುವ ವೀರಗಲ್ಲು ಮತ್ತು ನಿಷಿಧಿಗಲ್ಲು ಶಾಸನಗಳು ವೀರಮರಣ ಕುರಿತು ಉಲ್ಲೇಖಿಸುತ್ತದೆ.[೨೬] ದೇವಾಲಯವು ಸಂಪೂರ್ಣವಾಗಿ ಬೀಳುವ ಹಂತವನ್ನು ತಲುಪಿದ್ದು ಕಂಡುಬರುತ್ತದೆ. ದೇವಾಲಯದ ಮುಂದುಗಡೆ ನಾಗಶಿಲ್ಪಗಳು, ಅಪೂರ್ಣವಾದ ನಂದಿಯ ಶಿಲ್ಪವಿರುವುದು ಕಂಡುಬಂದಿವೆ.

ಊರು	:	ಹಿರೇ ಅಣಜಿ
ಸ್ಥಳ	:	ಊರ ಹೊರಗೆ ಹಳೇಕೆರೆ ಸಮೀಪ
ಸ್ಮಾರಕ	:	ಈಶ್ವರ ದೇವಾಲಯ
ಕಾಲ	:	ಕ್ರಿ.ಶ.ಸು.೧೦–೧೧ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಕನಿಷ್ಠ

ಈ ದೇವಾಲಯವು ಶೈವ ದೇವಾಲಯವಾಗಿದ್ದು, ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ದೇವಾಲಯವು ನಿರ್ಮಿತವಾಗಿದೆ. ದೇವಾಲಯವು ಗರ್ಭಗೃಹ ಮತ್ತು ತೆರೆದ ಅಂತರಾಳಗಳನ್ನು ಕಾಣಬಹುದು. ಗರ್ಭಗೃಹದ ಗೋಡೆಯು ಇತ್ತೀಚೆಗೆ ಇಟ್ಟಿಗೆಗಳಿಂದ ಕಟ್ಟಲಾಗಿದೆ. ಮುಂಭಾಗದಲ್ಲಿ (ಗರ್ಭಗುಡಿಯ) ಅಂತರಾಳವನ್ನು ಕಲ್ಲಿನಿಂದ ಕಟ್ಟಿರುವುದು ಕಂಡುಬರುತ್ತದೆ. ಮತ್ತು ಅದರಲ್ಲಿರುವ ಕಂಬಗಳನ್ನು ಸುಂದರವಾಗಿ ಕೆತ್ತಲಾಗಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಗಜಲಕ್ಷ್ಮಿಯರ ಶಿಲ್ಪ(ಉಬ್ಬು)ವಿದ್ದು ಅಂತರಾಳದಲ್ಲಿ ನವಗ್ರಹಗಳ ಮೂರ್ತಿಶಿಲ್ಪವಿದೆ.[೨೭]

ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಅಂತರಾಳದಲ್ಲಿ ಗಣಪತಿಯ ಶಿಲ್ಪಗಳು ಕಂಡು ಬರುತ್ತವೆ ಮತ್ತು ದೇವಾಲಯದ ಮುಂದುಗಡೆ ಪಾದಗಟ್ಟೆ ಇರುವುದು ಕಂಡುಬರುತ್ತದೆ.

ದೇವಾಲಯದ ಅವರಣದಲ್ಲಿ ಶಾಸನವು ಕಂಡುಬಂದಿದೆ. ಒಟ್ಟಾರೆಯಾಗಿ ಈ ದೇವಾಲಯವು ಸಂಪೂರ್ಣವಾಗಿ ಅವನತಿಯ ಅಂಚಿನಲ್ಲಿರುವುದನ್ನು ಕಾಣಬಹುದು. ದೇವಾಲಯವನ್ನು ಭಗ್ನಗೊಂಡಿರುವ ಮೂರ್ತಿಗಳನ್ನು ಕಾಣಬಹುದು. ಈ ದೇವಾಲಯವು ಊರ ಹಳೇ ಕೆರೆಯ ಸಮೀಪದಲ್ಲಿ ಕಂಡುಬಂದಿದೆ.

ಊರು : ಹಿರೇ ಅಣಜಿ

ಸ್ಥಳ : ಊರ ಒಳಗೆ

ಸ್ಮಾರಕ : ವೀರಭದ್ರ ಗುಡಿ

ಕಾಲ :

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಉತ್ತರಭಿಮುಖ

ಸ್ಥಿತಿ : ಉತ್ತಮ

ಈ ದೇವಾಲಯವು ಊರ ಒಳಗಡೆ ಕಂಡುಬಂದಿದ್ದು, ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಕೈಗೊಂಡಿರುವುದು ಕಂಡುಬರುತ್ತದೆ. ದೇವಾಲಯವು ಗರ್ಭಗುಡಿ, ತೆರೆದ ಮಂಟಪ, ಸಭಾಮಂಟಪವನ್ನು ಒಳಗೊಂಡಿದ್ದು, ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದು ಎಂದು ತಿಳಿದುಬರುತ್ತದೆ. ದೇವಾಲಯದ ಗರ್ಭಗುಡಿಯ ಒಳಗಡೆ ವೀರಭದ್ರನ ಮೂರ್ತಿಯ ಕಂಡುಬಂದಿದೆ. ದೇವಾಲಯದ ಎದುರುಗಡೆ(ಮುಂಭಾಗದಲ್ಲಿ) ಒಂದು ಜೈನ ಮೂರ್ತಿಗಳನ್ನು ಒಳಗೊಂಡ ಒಂದು ಶಾಸನವು ಕಂಡುಬರುತ್ತದೆ. ಈ ಶಾಸನವು ಯಾದವ ದೊರೆ ಸಿಂಘಣನ ಕಾಲದಲ್ಲಿ ನಿರ್ಮಿತವಾಗಿದೆ. ಈ ಶಾಸನವು ದೇವಗಿರಿ–೧೪೦ರಲ್ಲಿಯ ಗೊಟ್ಟಗಡಿಯ ಗೋಗ್ರಹಣದಲ್ಲಿ ಗೊಗ್ಗಿಸೆಟ್ಟಿಯ ವೀರಮರಣ ಹೊಂದಿದ ಕುರಿತು ಶಾಸನದಲ್ಲಿ ಒಳಗೊಂಡಿದೆ. ನಿಷಿಧಿಕಲ್ಲು, ನಾಗಶಿಲ್ಪಗಳು ದೇವಾಲಯದ ಮುಂಭಾಗದಲ್ಲಿ ಕಂಡುಬಂದಿವೆ. ದೇವಾಲಯದ ಎದುರುಗಡೆ ದೀಪಸ್ತಂಭವನ್ನು ಕಾಣಬಹುದು. ಊರ ಹಾಲಿನ ಡೈರಿ ಪಕ್ಕದಲ್ಲಿ ವೀರಗಲ್ಲುಗಳು ಕಂಡುಬಂದಿವೆ.

ಊರು : ಮತ್ತೂರು

ಸ್ಥಳ : ಲಿಂಗಾಪುರ ರಸ್ತೆ ಎಡಬದಿಗೆ

ಸ್ಮಾರಕ : ಕಲ್ಲೇಶ್ವರ ದೇವಾಲಯ

ಕಾಲ : ಕ್ರಿ.ಶ.ಸು.೧೨–೧೩ನೇಯ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಸ್ಥಿತಿ : ಉತ್ತಮ

ಈ ದೇವಾಲಯವು ಶೈವ ದೇವಾಲಯವಾಗಿದ್ದು, ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಿತಗೊಂಡಿದ್ದ ಈ ದೇವಾಲಯವನ್ನು ಸಂಪೂರ್ಣವಾಗಿ ಹೊಸದಾಗಿ ನಿರ್ಮಿಸಿದ್ದಾರೆ. ದೇವಾಲಯದ ಕಟ್ಟಡಕ್ಕೆ ಗ್ರಾನೈಟ್ ಕಲ್ಲುಗಳನ್ನು ಬಳಸಿದ್ದಾರೆ. ದೇವಾಲಯವು ಶಿಖರವನ್ನು ಒಳಗೊಂಡಿದ್ದು, ಶಿಖರದ ಎದುರುಗಡೆ ನಾಲ್ಕು ಮೂಲೆಯಲ್ಲಿ ನಂದಿಯ ಶಿಲ್ಪಗಳು ಕಂಡುಬರುತ್ತದೆ. ದೇವಾಲಯದ ಪ್ರವೇಶ ದ್ವಾರವನ್ನು ಒಳಗೊಂಡಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅಂತರಾಳದ ದ್ವಾರಬಂಧದ ಮೇಲೆ ವಿಷ್ಣು, ಲಕ್ಷ್ಮಿ, ರಾಮ, ಹಾಗು ಮಕರ ತೋರಣಗಳನ್ನು ಹೊಂದಿರುವ ಫಲಕವಿದೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ಜಾಲಂಧರ ವಿನ್ಯಾಸ ಬಾಗಿಲ ಇಕ್ಕೆಲಗಳಲ್ಲಿ ಕಂಡುಬಂದಿದ್ದು, ಗರ್ಭಗೃಹದ ಎದುರಿಗೆ ನಂದಿಯ ಶಿಲ್ಪವಿದೆ. ಸಭಾಮಂಟಪದ ಎಡಕ್ಕೆ ವಿಷ್ಣುಮೂರ್ತಿ, ಬಲಕ್ಕೆ ಈಶ್ವರ ಮೂರ್ತಿಯನ್ನು ಒಳಗೊಂಡಿದ್ದು, ಅಂತರಾಳವು ಕಂಡುಬಂದಿದೆ. ಸಭಾಮಂಟಪದಲ್ಲಿ ಬಲಕ್ಕೆ ಕಾಲಭೈರವ, ಅದರ ಬಲಕ್ಕೆ ನವಗ್ರಹ ಶಿಲ್ಪಗಳು ಕಂಡುಬಂದಿವೆ. ಪೂರ್ವಾಭಿಮುಖದ ಗರ್ಭಗೃಹವನ್ನು ಹೊರತುಪಡಿಸಿ ಮಿಕ್ಕೆರಡು ಗರ್ಭಗೃಹಗಳಿಗೆ ಅಂತರಾಳ ಗಳಿರುವುದಿಲ್ಲ.[೨೮] ದೇವಾಲಯದ ಮುಂದೆ (ಧ್ವಜಸ್ತಂಭವಿದೆ)ದ್ವೀಪಸ್ತಂಭವಿದೆ.

ಮುಖ್ಯಗರ್ಭಗೃಹದಲ್ಲಿ ಶಿವಲಿಂಗ ಮತ್ತು ನವರಂಗದಲ್ಲಿ ನಂದಿಯ ಶಿಲ್ಪಗಳಿವೆ. ಉತ್ತರ ಮತ್ತು ದಕ್ಷಿಣಾಭಿಮುಖವಾದ ಗರ್ಭಗೃಹಗಳಲ್ಲಿ ಕ್ರಮವಾಗಿ ವೀರಭದ್ರನ ಶಿಲ್ಪ ಮತ್ತು ಶಿವಲಿಂಗವಿದೆ. ಅದರ ಮುಂದೆ ಎಡಕ್ಕೆ ಶಿವಪಾರ್ವತಿಯರ ಮೂರ್ತಿ ಮತ್ತು ಮಹಿಷಮರ್ಧಿನಿ ಶಿಲ್ಪಗಳಿವೆ. ಮತ್ತು ಸಪ್ತಮಾತೃಕೆಯ ಫಲಕವನ್ನು ಒಳಗೊಂಡಿದೆ.

ದೇವಾಲಯದ ಮುಂದೆ ಅಗ್ನಿಕುಂಡವಿದ್ದು, ಅದರ ಮುಂಭಾಗದಲ್ಲಿ ಸಾಲಾಗಿ ಏಳು ವೀರಗಲ್ಲು ಶಾಸನಗಳು, ಬಲಭಾಗದಲ್ಲಿ ನಾಗಕಲ್ಲು, ಯುದ್ಧ ಮಾಡುವ ಸನ್ನಿವೇಶವನ್ನೊಳಗೊಂಡ ಮೂರ್ತಿಶಿಲ್ಪಗಳು ಕಂಡುಬಂದಿವೆ. ದೇವಾಲಯದ ಬಲಗಡೆ ಮೂಲೆಯನ್ನು ಯುದ್ಧ ಶಾಸನವು ಕಂಡುಬಂದಿದೆ. ಅವುಗಳೆಲ್ಲವನ್ನು ಸಿಮೆಂಟಿನ ಕಟ್ಟೆಯ ಮೇಲೆ ಕಟ್ಟಲಾಗಿದೆ. ಒಟ್ಟಾರೆ ಈ ದೇವಾಲಯವು ಕಲ್ಲಪ್ಪನ ಕೆರೆಯ ದಂಡೆಯ ಮೇಲೆ ನಿರ್ಮಿತಗೊಂಡಿದೆ.

ಊರು : ಘಾಳಪೂಜಿ

ಸ್ಥಳ : ಗ್ರಾಮದಿಂದ ಉತ್ತರಕ್ಕೆ ಇದೆ

ಸ್ಮಾರಕ : ರಾಮಲಿಂಗೇಶ್ವರ ದೇವಾಲಯ

ಕಾಲ : ಕ್ರಿ.ಶ.ಸು.೧೨–೧೩ನೇಯ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಸ್ಥಿತಿ : ಭಗ್ನ[೨೮]

ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ಈ ದೇವಾಲಯವು ಸಂಪೂರ್ಣವಾಗಿ ಬಿದ್ದು ಹೋಗಿದೆ. ದೇವಾಲಯದ ನವರಂಗ, ಅಂಗರಾಳ, ತೆರದ ಮಂಟಪ ಸಂಪೂರ್ಣವಾಗಿ ಬಿದ್ದು ಹೋಗಿವೆ. ದೇವಾಲಯದ ಗರ್ಭಗೃಹವು ೪ ಕಂಬಗಳು ಮತ್ತು ಮೇಲ್ಛಾವಣಿಯನ್ನು ಹೊಂದಿದೆ. ಗರ್ಭಗೃಹವು ಸಂಪೂರ್ಣವಾಗಿ ತೆರೆದುಕೊಂಡಿದ್ದು ಗರ್ಭಗುಡಿಯ ಒಳಗಡೆ ಶಿವಲಿಂಗವು ಕಂಡುಬಂದಿದೆ. ಗರ್ಭಗುಡಿಯು ಬಾಗಿಲವಾಡವನ್ನು ಹೊಂದಿದ್ದು, ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಒಳಗೊಂಡಿದೆ. ಗರ್ಭಗುಡಿಯ ಎದುರುಗಡೆ ನವರಂಗದಲ್ಲಿ ನಂದಿಶಿಲ್ಪವು ಎರಡು ಭಾಗವಾಗಿ ಭಗ್ನಗೊಂಡಿದೆ. ಯಾವುದೇ ಶಿಖರವು ಕಂಡುಬಂದಿಲ್ಲ. ದೇವಾಲಯದ ಎದುರುಗಡೆ ನಾಗಶಿಲ್ಪಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು ಅಲ್ಲಲ್ಲಿ ಬಿದ್ದಿವೆ. ದೇವಾಲಯದ ಎದುರುಗಡೆ ಒಂದು ಶಾಸನವಿರುವ ಕಲ್ಲು ಬಿದ್ದಿದೆ. ಒಟ್ಟಾರೆ ದೇವಾಲಯ ಸಂಪೂರ್ಣವಾಗಿ ನಾಶ ಹೊಂದಿದೆ. ದೇವಾಲಯಕ್ಕೆ ಬರುವ ಮಾರ್ಗದಲ್ಲಿ ಒಕ್ಕೈ ವೀರಗಲ್ಲುಗಳು ಬಿದ್ದಿವೆ.

ಊರು	:	ಕೆರೂಡಿ(ಕೆರವಡಿ)
ಸ್ಥಳ	:	ಕೆರೆದಂಡೆಯ ಸಮೀಪ
ಸ್ಮಾರಕ	:	ಕಲ್ಲೇಶ್ವರ ದೇವಾಲಯ
ಕಾಲ	:	ಕ್ರಿ.ಶ.ಸು.೧೯ನೇಯ ಶತಮಾನ
ಶೈಲಿ	:	ಆಧುನಿಕ
ಅಭಿಮುಖ	:	ಪೂರ್ವ
ಸ್ಥಿತಿ	:	ಮಧ್ಯಮ

ಈ ದೇವಲಯವು ಶೈವ ದೇವಾಲಯವಾಗಿದ್ದು, ಸಂಪೂರ್ಣವಾಗಿ ನವೀಕರಿಸಲಾಗಿದೆ. ಈ ದೇವಾಲಯವು ಗರ್ಭಗುಡಿ ಮತ್ತು ಅಂತರಾಳವನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಕಲ್ಯಾಣಚಾಲುಕ್ಯರ ಕಾಲದ ಲಿಂಗವಿದೆ. ಅಂತರಾಳದಲ್ಲಿ ನಂದಿಯ ಶಿಲ್ಪವಿದ್ದು, ಅಂತರಾಳದ ಬಾಗಿಲ ಇಕ್ಕೆಲೆಗಳಲ್ಲಿ ಜಾಲಂಧ್ರಗಳಿವೆ. ದೇವಾಲಯಕ್ಕೆ ಆಧುನಿಕವಾಗಿ ರಚಿಸಿದ ಶಿಖರವಿದೆ. ಈ ದೇವಾಲಯದ ಮುಂಭಾಗದಲ್ಲಿ ವೀರಗಲ್ಲು, ನಾಗಶಿಲ್ಪ, ಕಾರ್ತಿಕೇಯ ಮತ್ತು ನಂದಿಯ ಶಿಲ್ಪಗಳಿವೆ. ಏಕಶಿಲಾಸ್ತಂಭ, ಶಂಖ ಮತ್ತು ಚಕ್ರವಿರುವ ಎರಡು ಕಲ್ಲುಗಳನ್ನು ನೆಡಲಾಗಿದೆ.[೩೦] ದೇವಾಲಯದ ಪಕ್ಕದಲ್ಲಿ ಹೊಸದಾಗಿ ಮೂಕ ಬಸವೇಶ್ವರ ದೇವಾಲಯವನ್ನು ಕಟ್ಟಲಾಗಿದ್ದು, ಅದರ ಮುಂದೆ ನಾರಾಯಣ ದೇವಾಲಯವಿದೆ. ಈ ದೇವಾಲಯದ ಎದುರಗಡೆ ದೀಪಸ್ತಂಭ ಅದರ ಎಡಗಡೆ ಭಾಗದಲ್ಲಿ ಶಾಸನಕಲ್ಲು, ಸೂರ್ಯ, ಚಂದ್ರರನ್ನು ಒಳಗೊಂಡ ಶಿಲ್ಪಗಳು ಕಂಡುಬಂದಿದೆ.

ಊರು	:	ತಡಸ
ಸ್ಥಳ	:	ಹೊಸಗುಂಗರಕೊಪ್ಪ ಮಾರ್ಗದಲ್ಲಿ
ಸ್ಮಾರಕ	:	ಕಲ್ಲಪ ದೇವಾಲಯ
ಕಾಲ	:	ಕ್ರಿ.ಶ.ಸು.೧೨-೧೩ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಮಧ್ಯಮ

ಈ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲಗಟ್ಟದಲ್ಲಿ ನಿರ್ಮಿತವಾಗಿದ್ದು, ಶೈವ ದೇವಾಲಯವಾಗಿದೆ. ಇದು ಗರ್ಭಗೃಹ ಮತ್ತು ತೆರೆದ ಅರ್ಧಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿನ ಬಾಗಿಲುವಾಡವು ಸರಳವಾಗಿದ್ದು ಅದರಲ್ಲಿ ಲಿಂಗವಿದೆ. ಅರ್ಧಮಂಟಪದ ಭಾಗದಲ್ಲಿ ಸಿಮೆಂಟಿನಿಂದ ನವೀಕರಿಸಲಾಗಿದೆ. ಈ ದೇವಾಲಯಕ್ಕೆ ಅಧಿಷ್ಠಾನ ಮತ್ತು ಶಿಖರಗಳಿಲ್ಲ. ಗುಡಿಯ ಮುಂಭಾಗದಲ್ಲಿ ಶಿವ, ನಾಗಶಿಲ್ಪ ಮತ್ತು ಒಂದು ಶಾಸನವಿರುವ ವೀರಗಲ್ಲುಗಳಿವೆ.

ಈ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ ಕೋಟೆಯ ಕೊತ್ತಲ ಮತ್ತು ಕೆಲವು ವಾಸ್ತು ಅವಶೇಷಗಳು ಕಾಣಸಿಗುತ್ತವೆ.[೩೧]

ಊರು	:	ಕಾಸಂಬಿ
ಸ್ಥಳ	:	ಕಾಗಿನೆಲೆ ರಸ್ತೆಯ ಎಡಬದಿಗೆ
ಸ್ಮಾರಕ	:	ಬಸವಣ್ಣ ದೇವಾಲಯ
ಕಾಲ	:	ಕ್ರಿ.ಶ.ಸು.೧೨-೧೩ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಭಗ್ನ

ಈ ದೇವಾಲಯವು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಕ್ಕೆ ಒಳಪಟ್ಟಿದೆ. ಅತ್ಯಂತ ಶಿಥಿಲಾವಸ್ಥೆಯಲ್ಲಿರುವ ಈ ದೇವಾಲಯವು ಗರ್ಭಗೃಹ ಮಂಟಪವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಬಸವಣ್ಣನ ಮೂರ್ತಿಗಳು ಮತ್ತು ಪಕ್ಕದಲ್ಲಿ ನಂದಿಯ ಶಿಲ್ಪಗಳು ಕಂಡುಬಂದಿದೆ. ಮಂಟಪದಲ್ಲಿ ಯಾವುದೇ ರೀತಿಯ ಕಂಬಗಳಲ್ಲಿ ದೇವಾಲಯದ ಪ್ರವೇಶದ್ವಾರವು ಕಿರಿದಾಗಿದೆ.

ದೇವಾಲಯದ ಪ್ರವೇಶದ್ವಾರದ ಇಕ್ಕೆಲೆಗಳಲ್ಲಿ ಗಂಡು ಮತ್ತು ಹೆಣ್ಣಿನ ಶಿಲ್ಪಗಳಿವೆ. ದೇವಾಲಯದ ಮುಂಭಾಗದಲ್ಲಿ ಯಾವ ಶಿಲ್ಪಗಳು ಕಂಡುಬಂದಿಲ್ಲ. ಅಲ್ಲಿ ಯಾವುದೇ ಶಾಸನವು

ಕಂಡುಬಂದಿಲ್ಲ. ದೇವಾಲಯವು ಊರಿನಿಂದ ಸುಮಾರು ೨ ಕಿ.ಮೀ. ದೂರದ ಹೊಲದಲ್ಲಿ ಕಂಡುಬಂದಿದೆ.[೨]

ಊರು	:	ಅತ್ತಿಕಟ್ಟಿ
ಸ್ಥಳ	:	ಕೆರೆಯ ದಂಡೆಯ ಕೆಳಗೆ(ತಿಳುವಳಿಗೆ ಹೋಗುವ ರಸ್ತೆಯ ಬಲಬದಿಗೆ)
ಸ್ಮಾರಕ	:	ರಾಮಲಿಂಗೇಶ್ವರ ದೇವಾಲಯ
ಕಾಲ	:	ಕ್ರಿ.ಶ.ಸು.೧೧-೧೨ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಕನಿಷ್ಠ

ಈ ರಾಮಲಿಂಗೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ್ದು. ಈ ದೇವಾಲಯ ಗರ್ಭಗುಡಿ, ಅರ್ಧಮಂಟಪಗಳನ್ನು ಒಳಗೊಂಡಿದ್ದು, ಮುಂದಿನ ಸಭಾಮಂಟಪವು ಬಿದ್ದು ಹೋಗಿವೆ. ಈ ದೇವಾಲಯ ಸಂಪೂರ್ಣವಾಗಿ ಮಣ್ಣಿನಿಂದ ಆವೃತವಾಗಿದ್ದು, ಗರ್ಭಗುಡಿಯ ಒಳಗೆ ಶಿವಲಿಂಗವಿದೆ. ಅದರ ಮುಂಭಾಗದ ಅರ್ಧಮಂಟಪದಲ್ಲಿ ನಂದಿಯ ಶಿಲ್ಪವನ್ನು ಒಳಗೊಂಡಿದೆ. ಗರ್ಭಗುಡಿಯು ಬಾಗಿಲುವಾಡವನ್ನು ಹೊಂದಿದೆ. ಯಾವುದೇ ರೀತಿಯ ಕಂಬಗಳು ಕಂಡುಬರುವುದಿಲ್ಲ. ದೇವಾಲಯದ ಮುಂಭಾಗದಲ್ಲಿ ನಾಗಶಿಲ್ಪಗಳು ಕಂಡುಬಂದಿದೆ. ಅದರ ಮುಂಭಾಗದಲ್ಲಿ ಶಿಲಾಯುಗಕ್ಕೆ ಸಂಬಂಧಿಸಿದಂತಹ ಆಯುಧಗಳು ಕಂಡುಬಂದಿದ್ದು, ಅವುಗಳನ್ನು ಜನರು ಒಂದು ಕಡೆ ಎಲ್ಲವನ್ನು ಕೂಡಿ ಹಾಕಿ ಪೂಜಿಸುತ್ತಿರುವುದು ಕಂಡುಬಂದಿದೆ. ದೇವಾಲಯದ ಪಕ್ಕದಲ್ಲಿ ದೊಡ್ಡ ಹುಣಸೆ ಮರವಿದ್ದು ಪಕ್ಕದಲ್ಲಿ ಕೇರಿ ಇರುವುದನ್ನು ಕಾಣಬಹುದು.

ಊರು	:	ಕಾಗಿನೆಲೆ
ಸ್ಥಳ	:	ಊರ ಮಧ್ಯಭಾಗದಲ್ಲಿ
ಸ್ಮಾರಕ	:	ಲಕ್ಷ್ಮೀನರಸಿಂಹ ದೇವಾಲಯ
ಕಾಲ	:	ಕ್ರಿ.ಶ.ಸು.೧೨-೧೩ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಉತ್ತಮ

ಲಕ್ಷ್ಮೀನರಸಿಂಹ ದೇವಾಲಯವು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಕ್ಕೆ ಒಳಪಟ್ಟಿದ್ದು. ದೇವಾಲಯದ ಗರ್ಭಗುಡಿಯು ಸಂಪೂರ್ಣ ಜೀರ್ಣಗೊಂಡ ಕಾರಣ ಹೊಸದಾಗಿ

ನಿರ್ಮಿಸಲಾಗಿದೆ. ದೇವಾಲಯದ ಕಟ್ಟಡಕ್ಕೆ ಹಳೆಯ ಮಂದಿರದ ಕೆತ್ತನೆಯ ಕಲ್ಲುಗಳನ್ನು ಬಳಸಿದ್ದಾರೆ. ಇವುಗಳಲ್ಲಿ ಮಿಥುನಶಿಲ್ಪ ಪಟ್ಟಿಕೆಗಳೂ ಕೂಡ ಸೇರಿವೆ. ರಂಗಮಂಟಪಗಳ ಕಂಬಗಳು ಉತ್ತಮ ಸ್ಥಿತಿಯಲ್ಲಿದ್ದು ಅವುಗಳ ಸುತ್ತಲೂ ಹೊರಗೋಡೆ ನಿರ್ಮಿಸಲಾಗಿದೆ. ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದೆ. ನವರಂಗದಲ್ಲಿ ನಾಲ್ಕು ಕಂಬಗಳು ಭುವನೇಶ್ವರಿಯನ್ನು ಹೊತ್ತು ನಿಂತಿವೆ. ದೇವಾಲಯವು ಎರಡು ಕಡೆ ಬಾಗಿಲುಗಳನ್ನು ಹೊಂದಿದ್ದು, ಕದಂಬ ನಾಗರಶೈಲಿಯ ಗಾರೆಯ ಶಿಖರವನನು ಒಳಗೊಂಡಿದೆ. ದೇವಾಲಯದ ಎದುರುಗಡೆ ಧ್ವಜಸ್ತಂಭವಿದೆ. ಅದರ ಕೆಳಭಾಗದಲ್ಲಿ ಒಂದು ಗೂಡು ರಚಿಸಿ ಒಳಗೆ ಹನುಮಂತನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಶಿಖರ ಭಾಗದಲ್ಲಿ ಸುಖನಾಸಿಯಿದೆ. ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿರುವ ಕಾರಣ ಪ್ರಾಚೀನತೆಯ ಕೆಲವು ಅಂಶಗಳು ಈಗ ಕಂಡುಬರುವುದಿಲ್ಲ. ದೇವಾಲಯದ ಪ್ರವೇಶದ್ವಾರಕ್ಕೆ ಹೊಸದಾಗಿ ಗೋಪುರವನ್ನು ನಿರ್ಮಿಸಲಾಗಿದೆ. ದೇವಾಲಯದ ಆವರಣದಲ್ಲಿ ಆದಿಕೇಶವ, ಮಾರುತಿ ದೇವಾಲಯ, ಶ್ರೀರಾಜ ವಂದಿತ ತೀರ್ಥರು, ಭಂಡಾರಿ ಕೇರಿ ಮಠ ಉಡುಪಿ ಇವರ ಗುಡಿಯಿದೆ. ದೇವಾಲಯವು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ.

ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹನ ಮೂರ್ತಿಶಿಲ್ಪವಿದೆ. ಪಂಚಲೋಹದ ಉತ್ಸವ ಮೂರ್ತಿಯೂ ಕಂಡುಬಂದಿದೆ. ದೇವಾಲಯದ ಬಾಗಿಲವಾಡವು ಪಂಚಲೋಹದಿಂದ ಕೂಡಿರುವುದು ಕಂಡುಬಂದಿದೆ. ದೇವಾಲಯದ ಅಂತರಾಳದಲ್ಲಿ ಹನುಮಂತ ಮತ್ತು ಗರುಡನ ಉಬ್ಬುಶಿಲ್ಪಗಳು ಕಂಡುಬಂದಿವೆ. ನಾಗಶಿಲ್ಪವು ಕಂಡುಬಂದಿದೆ. ಆಸನ ಮತ್ತು ಉಯ್ಯಲೆಗಳಿವೆ. ಅವನ್ನು ಗುರುಪೀಠ ಎಂದು ಕರೆಯಲಾಗಿದೆ.

ಆದಿಕೇಶವ ದೇವಾಲಯ: ಲಕ್ಷ್ಮೀನರಸಿಂಹ ದೇವಾಲಯ ಗುಡಿಯ ಬಲಬದಿಗೆ ೧೦ ಅಡಿ ಅಂತರದಲ್ಲಿ ಕನಕದಾಸರ ಇಷ್ಟ ದೇವತೆಯಾದ ಆದಿಕೇಶವನ ಗುಡಿಯಿದೆ. ಕ್ರಿ.ಶ.೧೬ನೇಯ ಶತಮಾನದ ಆರಂಬದಲ್ಲಿ ಕನಕದಾಸರ ಹುಟ್ಟೂರಾದ ಬಾಡ ಗ್ರಾಮದಿಂದ ಆದಿಕೇಶವನನ್ನು ತಂದು ಲಕ್ಷ್ಮೀನರಸಿಂಹ ದೇವಾಲಯದ ಪಕ್ಕದಲ್ಲಿ ವ್ಯಾಸರಾಯರ ಮೂಲಕ ಪ್ರತಿಷ್ಠಾಪನೆ ಮಾಡಿಸಿದಾಗಿನಿಂದ ಆದಿಕೇಶವ ದೇವಾಲಯ ಅಸ್ತಿತ್ವಕ್ಕೆ ಬಂದಿತು. ಹೀಗೆ ಈ ಎರಡು ದೇವಾಲಯವನ್ನು ಒಟ್ಟಾರೆಯಾಗಿ ಲಕ್ಷ್ಮೀನರಸಿಂಹ, ಆದಿಕೇಶವ ದೇವಸ್ಥಾನ ಎಂದು ಕರೆಯುವುದು ವಾಡಿಕೆಯಾಗಿದೆ. ದೇವಾಲಯವು ಗರ್ಭಗೃಹವನ್ನು ಹೊಂದಿದ್ದು, ಗರ್ಭಗುಡಿಯಲ್ಲಿ ಆದಿಕೇಶವನ ಮೂರ್ತಿ ಮತ್ತು ಇತ್ತೀಚೆಗೆ ನಿರ್ಮಿಸಿದ ಕನಕದಾಸರ ಆಳೆತ್ತರದ ಮೂರ್ತಿಗಳು ಕಂಡುಬಂದಿವೆ.[೩೩]

ಊರು	:	ಕಾಗಿನೆಲೆ
ಸ್ಥಳ	:	ಕನಕ ಗುರುಪೀಠಕ್ಕೆ ಹೋಗುವ ಮಾರ್ಗದ ಬಲಬದಿಗೆ
ಸ್ಮಾರಕ	:	ವೀರಭದ್ರ ಗುಡಿ

ಕಾಲ : ಕ್ರಿ.ಶ.ಸು.೧೨ನೇಯ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪಶ್ಚಿಮ

ಸ್ಥಿತಿ : ಜೀರ್ಣೋದ್ಧಾರಗೊಂಡಿದೆ.

ಈ ದೇವಾಲಯವು ಸಂಪೂರ್ಣವಾಗಿ ನವೀಕರಣಗೊಂಡಿದ್ದು, ಕಲ್ಯಾಣಚಾಲುಕ್ಯರ ಆಳ್ವಿಕೆಯ ಕಾಲವಧಿಯಲ್ಲಿ ದೇವಾಲಯವು ನಿರ್ಮಿತಗೊಂಡಿದೆ. ದೇವಾಲಯವು ಗರ್ಭಗುಡಿ ಮತ್ತು ಮಂಟಪವನ್ನು ಒಳಗೊಂಡಿದೆ. ದೇವಾಲಯದ ಗರ್ಭಗುಡಿಯ ಬಾಗಿಲುವಾಡದಲ್ಲಿ ಜಾಲಂಧರಗಳು ಕಂಡುಬಂದಿವೆ. ದೇವಾಲಯದ ಸಭಾಮಂಟಪದಲ್ಲಿರುವ ಕಂಬಗಳು ಸುಂದರ ಕೆತ್ತನೆಗೆ ಒಳಪಟ್ಟಿವೆ.

ದೇವಾಲಯದ ಮೇಲುಗಡೆ ಕಮಾನಿನನ್ನು ಒಳಗೊಂಡಿದ್ದು ಅದರ ಎರಡು ಬದಿಯಲ್ಲಿ ಬಸವಣ್ಣನ ಮೂರ್ತಿಗಳು ಕಂಡುಬಂದಿವೆ. ದೇವಾಲಯದ ಬಲಬದಿಗೆ ದೀಪಸ್ತಂಭವಿದೆ. ಈ ದೇವಾಲಯದ ಎದುರುಗಡೆ ಗೋಡೆಯಲ್ಲಿ ಶಾಸನವು ಕಂಡುಬಂದಿದೆ. ಈ ಶಾಸನದಲ್ಲಿ ಬಾಸವೂರಿನ ಮನ್ನೆಯ ಕಲಿಯರಸನು ಕಾಳೇಶ್ವರ ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದನೆಂದು ತಿಳಿಸುತ್ತದೆ.[೩೪]

ದೇವಾಲಯದ ಗರ್ಭಗುಡಿಯಲ್ಲಿ ವೀರಭದ್ರನ ಮೂರ್ತಿಶಿಲ್ಪವಿದೆ. ದೇವಾಲಯದ ಎದುರಗಡೆ ದೀಪಸ್ತಂಭವಿದೆ. ಶಾಸನ ಸಹಿತ ವೀರಗಲ್ಲು ಗುಡಿಯ ಸಮೀಪದಲ್ಲಿದೆ. ದೀಪಸ್ತಂಭದ ಕೆಳಗಡೆ ನಾಗಶಿಲ್ಪಗಳು ಮುದ್ರಿಕೆಗಳು ಬಿದ್ದಿವೆ.

ಊರು : ಕಾಗಿನೆಲೆ

ಸ್ಥಳ : ಕನಕ ಗುರುಪೀಠಕ್ಕೆ ಹೋಗುವ ಮಾರ್ಗದ ಬಲಬದಿಗೆ

ಸ್ಮಾರಕ : ಕಾಳಹಸ್ತೇಶ್ವರ ದೇವಾಲಯ

ಕಾಲ : ಕ್ರಿ.ಶ.ಸು.೧೧-೧೨ನೇಯ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಸ್ಥಿತಿ : ಉತ್ತಮ

ಕಲ್ಯಾಣ ಚಾಲುಕ್ಯರ ಕಾಲಗಟ್ಟಕ್ಕೆ ಸಂಬಂಧಿಸಿದ ಈ ದೇವಾಲಯವು ವೀರಭದ್ರದೇವರ ಗುಡಿಯ ಎದುರಗಡೆ ಇದೆ. ದೇವಾಲಯವು ಸಂಪೂರ್ಣವಾಗಿ ಜೀರ್ಣೋದ್ಧಾರ ಕಾರ್ಯ ಕೈಗೊಂಡಿದ್ದು ಮುಗಿಯುವ ಹಂತದಲ್ಲಿದೆ. ದೇವಾಲಯವು ಗರ್ಭಗುಡಿ, ಅಂತರಾಳ ಮತ್ತು ನವರಂಗಗಳನ್ನು ಒಳಗೊಂಡಿದೆ. ನವರಂಗದ ೪ ಕಂಬಗಳು ಭುವನೇಶ್ವರಿಯನ್ನು ಹೊತ್ತು ನಿಂತಿವೆ. ದೇವಾಲಯವು ಶಿಖರ ಮತ್ತು ಕಲಶಗಳನ್ನು ಹೊಂದಿದೆ.

ದೇವಾಲಯದ ಗರ್ಭಗುಡಿಯ ಶಿವಲಿಂಗವನ್ನು ವೀರಭದ್ರ ದೇವಾಲಯದ ಕಟ್ಟೆಯ ಮೇಲೆ ಇರಿಸಲಾಗಿದೆ. ಏಕೆಂದರೆ ಗರ್ಭಗುಡಿಯ ಜೀರ್ಣೋದ್ದಾರ ಕೆಲಸ ನಡೆದಿರುವುದರಿಂದ ಶಿವಲಿಂಗವನ್ನು ಪಕ್ಕದ ಗುಡಿಯ ಕಟ್ಟೆಯ ಮೇಲೆ ಇರಿಸಲಾಗಿದೆ.[೩೫] ಈ ದೇವಾಲಯದ ಎದುರಗಡೆ ಇರುವ ಶಾಸನವನ್ನು ಕಾಗಿನೆಲೆಯ ಅಭಿವೃದ್ಧಿ ಪ್ರಾಧಿಕಾರದವರು ಒಯ್ದು ಪ್ರಾಧಿಕಾರದ ಗ್ರಂಥಾಲಯದ ಮುಂದುಗಡೆ ಶಾಸನವನ್ನು ಮತ್ತು ಕಾಳಹಸ್ತೇಶ್ವರ ದೇವಾಲಯದಲ್ಲಿರುವ ಸರಸ್ವತಿ ದೇವಿಯ ಮೂರ್ತಿಯನ್ನು(ಶಿಲ್ಪ) ಇಡಲಾಗಿದೆ.

ಊರು	:	ಕಾಗಿನೆಲೆ
ಸ್ಥಳ	:	ಕಾಶಂಬಿಗೆ ಹೋಗುವ ಮಾರ್ಗದ ಎಡಬದಿಗೆ
ಸ್ಮಾರಕ	:	ಕಲ್ಲೇಶ್ವರ(ಕಲ್ಲಪ್ಪನ ಗುಡಿ) ದೇವಾಲಯ
ಕಾಲ	:	ಕ್ರಿ.ಶ.ಸು.೧೨ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ
ಸ್ಥಿತಿ	:	ಭಗ್ನಸ್ಥಿತಿ

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿದ್ದ ಈ ದೇವಾಲಯದ ಮೇಲ್ಛಾವಣಿ ಸಂಪೂರ್ಣವಾಗಿ ಮಣ್ಣಿನಿಂದ ಆವೃತ್ತವಾಗಿದೆ. ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿನ ಬಾಗಿಲವಾಡವು ಸರಳವಾಗಿದ್ದು, ಗಜಲಕ್ಷ್ಮಿಯ ಶಿಲ್ಪವನ್ನು ಒಳಗೊಂಡಿದೆ. ನವರಂಗದ ಭಾಗವು ೪ ಕಂಬಗಳಿಂದ ಆವೃತ್ತವಾಗಿದ್ದು, ಭುವನೇಶ್ವರಿಯನ್ನು ಹೊತ್ತು ನಿಂತಿವೆ. ಅದು ಇತ್ತೀಚೆಗೆ ನಶಿಸಿ ಹೋಗುವ ಹಂತದಲ್ಲಿದೆ. ದೇವಾಲಯದ ಗೋಡೆಗಳು ಇಟ್ಟಿಗೆಯಿಂದ ನಿರ್ಮಿತವಾಗಿದೆ. ದೇವಾಲಯದ ಒಳಗಡೆ ಸಪ್ತಮಾತೃಕೇಯರ ಶಿಲ್ಪವಿದೆ. ದೇವಾಲಯದ ಎದುರುಗಡೆ ನಂದಿಶಿಲ್ಪವಿದೆ.[೩೬] ದೇವಾಲಯದ ಎಡಭಾಗದಲ್ಲಿ ಶಾಸನವಿದೆ.

ಗರ್ಭಗೃಹದಲ್ಲಿ ಲಿಂಗವಿದೆ. ದೇವಾಲಯದ ಪಕ್ಕದಲ್ಲಿರುವ ಶಾಸನವು ಕಾಳಿಸಟ್ಟಿಯು ಕಟ್ಟಿಸಿದ ಬ್ರಹ್ಮೇಶ್ವರ ದೇವಾಲಯಕ್ಕೆ ಮಹಾಪ್ರಭು ಕಾಳಗಾವುಂಡಾದಿಗಳು ಭೂದಾನ ಮಾಡಿದರೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿಸಿರುವ ಬ್ರಹ್ಮೇಶ್ವರ ದೇವಾಲಯವು ಆಗಿರಬಹುದೆಂದು ತಿಳಿಸಲಾಗಿದೆ.

ಊರು	:	ಕಾಗಿನೆಲೆ
ಸ್ಥಳ	:	ಈಶ್ವರ ಗುಡಿಗೆ ಹೋಗುವ ಮಾರ್ಗದ ಎಡಬದಿಗೆ
ಸ್ಮಾರಕ	:	ಸಂಗಮೇಶ್ವರ ದೇವಾಲಯ

ಕಾಲ :

ಶೈಲಿ :

ಅಭಿಮುಖ : ಪೂರ್ವ

ಸ್ಥಿತಿ : ಜೀರ್ಣೋದ್ಧಾರ ಕೈಗೊಳ್ಳಲಾಗಿದೆ.

ಈ ದೇವಾಲಯದ ಸುತ್ತಲು ಕಾಂಪೌಂಡನ್ನು ಹೊಂದಿದ್ದು, ದೇವಾಲಯವು ಗರ್ಭಗುಡಿಯಲ್ಲಿ ಸಂಗಮೇಶ್ವರನ ಸಮಾಧಿ(ಗದ್ದುಗೆ)ಯಿದೆ. ಗರ್ಭಗುಡಿಯ ಬಾಗಿಲುವಾಡವು ಚಿಕ್ಕದಾಗಿದ್ದು, ದೇವಾಲಯಕ್ಕೆ ಪ್ರವೇಶ ದ್ವಾರವಿದ್ದು, ಕಬ್ಬಿಣದ ಸಲಾಕೆಯಿಂದ ನಿರ್ಮಿಸಿದ್ದಾರೆ. ಅಂತರಾಳವನ್ನು ಹೊಂದಿದ್ದು ದೇವಲಾಯವು ಚಿಕ್ಕದಾಗಿದೆ. ಈ ದೇವಾಲಯ ಮುಸ್ಲಿಂ ದೇವಾಲಯದ ಶೈಲಿಯನ್ನು ಒಳಗೊಂಡಿದೆ. ದೇವಾಲಯದ ಮೇಲುಗಡೆ ಕಮಾನುಗಳನ್ನು ಹೊಂದಿದೆ ಮತ್ತು ಗುಂಬುಜವನ್ನು ಹೊಂದಿದೆ.

ಇವುಗಳನ್ನು ಗಮನಿಸಿದಾಗ ಹಿಂದೂ ಮುಸ್ಲಿಂ ಭಾವೈಕ್ಯತದ ಸಂಕೇತವನ್ನು ದೇವಾಲಯವು ಸೂಚಿಸುತ್ತದೆ. ದೇವಾಲಯದ ಮೇಲೆ ಪ್ರತಿಯೊಂಧು ಭಾಗವು ಮುಸ್ಲಿಂರ ಕಲಾಶೈಲಿಯನ್ನು ಹೊಂದಿದೆ.

ಗರ್ಭಗುಡಿಯಲ್ಲಿ ಸಂಗಪ್ಪಯ್ಯನ ಸಮಾಧಿ(ಗದ್ದುಗೆ)ಯಿದ್ದು ಇಲ್ಲಿ ಸಂಗಪ್ಪಯನು ಕೊಡೇಕಲ್ ಅಂದರೆ ಈಗಿನ ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕಿನ ಕೋಡೆಕಲ್ ಗ್ರಾಮದಲ್ಲಿ ತಂದೆ ಬಸವಣ್ಣ–ನೀಲಾಂಬಿಕೆಯ ದಂಪತಿಗಳಿಗೆ ಮೂರನೆಯ ಮಗನಾಗಿ ಜನಿಸಿದನು. ಒಂದು ದಿನ ಕನಕದಾಸರು ಕೂಡಕಲ್ಲಿಗೆ ಹೋದಂತಹ ಸಂದರ್ಭದಲ್ಲಿ ಕನಕದಾಸರು ವಾಪಸ್ಸು ಕಾಗಿನೆಲೆಗೆ ಬರಬೇಕಾದ ಸಂದರ್ಭದಲ್ಲಿ ಬರೀಗೈಯಲ್ಲಿ ಬರದೇ ಸಂಗಯ್ಯನೆಂಬ ಬಾಲಬ್ರಹ್ಮಚಾರಿಯನ್ನು ಕರೆದುಕೊಂಡು ಬಂದಿದ್ದು ಲೋಕಕಲ್ಯಾಣಕ್ಕಾಗಿ ಎಂಬುದು ತಿಳಿದುಬರುತ್ತದೆ. ಮುಂದೆ ಸಂಗಯ್ಯ ಇಲ್ಲಿ ನೆಲೆಸಿ ಮರಣ ಹೊಂದಿದನೆಂದು ಭಾವಿಸಬಹುದು.[೨೭] ಈ ರೀತಿಯಾಗಿ ಸಂಗಮೇಶ್ವರ ದೇವಾಲಯದ ಕುರಿತು ತಿಳಿಯಬಹುದಾಗಿದೆ.

ಊರು : ಚಿಕ್ಕಣಜಿ

ಸ್ಥಳ : ಜೋಡಿ ಬಸವಣ್ಣ ದೇವರ ಗುಡಿಯ ಹತ್ತಿರ

ಸ್ಮಾರಕ : ಚೌಡಮ್ಮ ದೇವಾಲಯ

ಕಾಲ : ಆಧುನಿಕ

ಶೈಲಿ : ಆಧುನಿಕ

ಅಭಿಮುಖ : ದಕ್ಷಿಣ

ಸ್ಥಿತಿ : ಉತ್ತಮ[೩೮]

ಈ ದೇವಾಲಯವು ಶಾಕ್ತ ದೇವಾಲಯವಾಗಿದ್ದು, ಇತ್ತೀಚಿನ ಕಾಲಕ್ಕೆ ಸಂಬಂಧಿಸಿದ್ದು ಆಗಿದೆ. ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ಗರ್ಭಗುಡಿಯನ್ನು ಮತ್ತು ಅರ್ಧಮಂಟಪವನ್ನು ಒಳಗೊಂಡಿದೆ. ದೇವಾಲಯದ ಬಲಭಾಗದಲ್ಲಿ ನಾಗಶಿಲ್ಪಗಳು ಕಂಡುಬಂದಿದೆ ಮತ್ತು ಅದರ ಪಕ್ಕದಲ್ಲಿ ಶಾಸನವನ್ನು ಒಳಗೊಂಡ ವೀರಗಲ್ಲು ಇರುವುದು ಕಂಡುಬಂದಿದೆ.

ದೇವಾಲಯದ ಗರ್ಭಗುಡಿಯ ಒಳಗಡೆ ಚೌಡಮ್ಮದೇವಿಯ ಮೂರ್ತಿಯಿದೆ. ದೇವಾಲಯವು ಪ್ರವೇಶದ್ವಾರವನ್ನು ಹೊಂದಿದೆ. ಈ ದೇವಾಲಯವು ಚಿಕ್ಕಣಿಜಿಯಿಂದ ೨ ಕಿ.ಮೀ. ದೂರದ ಹಳೇ ಊರಿನಲ್ಲಿ ಇದ್ದು, ದೇವಾಲಯದ ಎದುರುಗಡೆ ಜೋಡಿ ಬಸವಣ್ಣನ ದೇವಾಲಯವಿದ್ದು. ಈ ದೇವಾಲಯದ ಸುತ್ತಲು ಶಿಲ್ಪಗಳಿರುವುದನ್ನು ಕಾಣಬಹುದು. ಮತ್ತು ದೇವಾಲಯದ ಎದುರುಗಡೆ ನಂದಿ ಮತ್ತು ನಾಗಶಿಲ್ಪಗಳು ಕಂಡುಬಂದಿದೆ.

ಊರು : ಮತ್ತೂರು

ಸ್ಥಳ : ಲಿಂಗಾಪುರ ರಸ್ತೆಯ ಎಡಬದಿಗೆ

ಸ್ಮಾರಕ : ಕರಿಯಮ್ಮ ದೇವಾಲಯ

ಕಾಲ : ಆಧುನಿಕ

ಶೈಲಿ : ಆಧುನಿಕ

ಅಭಿಮುಖ : ಪೂರ್ವ

ಸ್ಥಿತಿ : ಉತ್ತಮ

ಈ ದೇವಾಲಯವು ಶಾಕ್ತ ದೇವಾಲಯವಾಗಿದ್ದು. ಮತ್ತೂರಿನ ದೊಡ್ಡಕೇರಿಯ ದಂಡೆಯ ಮೇಲೆ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಿತಗೊಂಡಿದೆ. ದೇವಾಲಯವು ಗರ್ಭಗುಡಿಯನ್ನು ಒಳಗೊಂಡಿದೆ. ಸಭಾಮಂಟಪವನ್ನು ಹೊಂದಿದೆ. ದೇವಾಲಯದ ಎದುರುಗಡೆ ಮುಂಭಾಗದಲ್ಲಿ ಪಾದಗಟ್ಟೆ, ನಾಗಶಿಲ್ಪ, ದ್ವೀಪಕಂಬಗಳಿರುವುದು ಕಂಡುಬಂದಿದೆ.

ಗರ್ಭಗುಡಿಯ ಒಳಗಡೆ ಕರಿಯಮ್ಮ ದೇವಿಯ ಮೂರ್ತಿಶಿಲ್ಪವಿದೆ. ಈ ದೇವಿಯ ಜಾತ್ರೆಯು ಪ್ರತಿ ೩ ವರ್ಷಕ್ಕೊಮ್ಮೆ ನಡೆಯುತ್ತದೆ. ಈ ದೇವಿಗೆ ಕೋಣವನ್ನು ಬಲಿಕೊಡುವುದು ವಿಶೇಷ. ದೇವಾಲಯದ ಬಲಗಡೆಯಿರುವ ರಸ್ತೆಯ ಪಕ್ಕದಲ್ಲಿ ತಿಪ್ಪೆಗುಂಡಿಯ ಹತ್ತಿರ ಮಾಸ್ತಿಗಲ್ಲು, ವೀರಗಲ್ಲುಗಳು ಕಂಡುಬಂದಿವೆ.[೩೯]

ಊರು : ಕಾಸಂಬಿ

ಸ್ಥಳ : ಕಾಗಿನೆಲೆಯ ರಸ್ತೆಯ ಎಡಬದಿಗೆ

ಸ್ಮಾರಕ : ದೇಸಿಕಟ್ಟಿ ದುರುಗಮ್ಮ ದೇವಾಲಯ
ಕಾಲ : ಪಾಂಡವರ ಕಾಲದ್ದು
ಶೈಲಿ :
ಅಭಿಮುಖ : ಪೂರ್ವ
ಸ್ಥಿತಿ : ಮಧ್ಯಮ

ಈ ದೇವಾಲಯವು ಶಾಕ್ತ ದೇವಾಲಯವಾಗಿದ್ದು, ದೇವಾಲಯವು ಕಾಸಂಬಿಯಿಂದ ಕಾಗಿನೆಲೆಗೆ ಹೋಗುವ ರಸ್ತೆಯ ಎಡಬದಿಗೆ ಕಂಡುಬಂದಿದೆ. ಈ ದೇವಾಲಯಕ್ಕೆ ದೇಸಿಕಟ್ಟಿ ದುರುಗಮ್ಮ ಎಂಬ ಹೆಸರು ಬರಲು ಕಾರಣವೆಂದರೆ, ಆ ಗುಡಿಯ ಪಕ್ಕದಲ್ಲಿಯೇ ದೇಸಾಯಿ ಕಟ್ಟಿ ಇರುವುದರಿಂದ ಈ ಗುಡಿಗೆ ದೇಸಿಕಟ್ಟಿ ದುರುಗಮ್ಮ ಎಂಬ ಹೆಸರು ಪ್ರಾಪ್ತವಾಯಿತು. ದೇವಾಲಯದ ಮೇಲ್ಛಾವಣಿ ಸಂಪೂರ್ಣವಾಗಿ ಮಣ್ಣಿನಿಂದ ಆವೃತವಾಗಿದ್ದು, ದೇವಾಲಯದ ಗರ್ಭಗುಡಿಯನ್ನು ಒಳಗೊಂಡಿದೆ. ದೇವಾಲಯದ ಒಳಗಡೆ ನಾಗಶಿಲ್ಪಗಳು, ಸಪ್ತಮಾತೃಕೆಯರ ಶಿಲ್ಪಗಳು ಕಂಡುಬಂದಿದೆ. ದೇವಾಲಯದ ಎದುರಗಡೆ ಪಾದಗಟ್ಟೆಯಿದ್ದು ಮುಂಭಾಗದಲ್ಲಿ ನಾಗಶಿಲ್ಪಗಳು ಕಂಡುಬಂದಿವೆ. ಈ ದೇವಾಲಯದ ಎದುರಗಡೆ ದೊಡ್ಡದಾದ ಮಾಸ್ತೆವ್ವನ ಹೊಂಡವಿದೆ. ದೇವಾಲಯದ ಎಡಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿರುವುದು ಕಂಡುಬಂದಿದೆ.[೪೦]

ಊರು : ಕಾಗಿನೆಲೆ
ಸ್ಥಳ : ಪೊಲೀಸ್ ಠಾಣೆ ಪಕ್ಕದಲ್ಲಿ
ಸ್ಮಾರಕ : ಅದಮಶಫಿ ದರ್ಗ
ಕಾಲ :
ಶೈಲಿ : ಆಧುನಿಕ
ಅಭಿಮುಖ : ಪೂರ್ವ
ಸ್ಥಿತಿ :

ಆದಮಶಫಿ ದರ್ಗವು ಹಿಂದೂ ಮುಸ್ಲಿಂರ ಭಾವ್ಯಕದ ಸಂಕೇತವಾಗಿರುವ ದೇವಾಲಯವಾಗಿದೆ. ಹಿಂದೂಗಳು ಸಂಗಮೇಶ್ವರ ದೇವಾಲಯವೆಂದರೇ ಮುಸ್ಲಿಂರು ಆದಮಶಫಿ ದರ್ಗಾ ಎಂದು ಕರೆಯುತ್ತಾರೆ. ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿಯ ಒಳಗಡೆ ಸಮಾಧಿ ಯಿದೆ. ಈ ದೇವಾಲಯದ ಮೇಲುಗಡೆ ಮುಸ್ಲಿಂ ಶೈಲಿಯ ಕಮಾನುಗಳನ್ನು ಮತ್ತು ಗುಂಬಜವನ್ನು ಹೊಂದಿದೆ. ಮುಸ್ಲಿಂರು ಅಂಜುಮನ್ ಸಮಾಜದ ವತಿಯಿಂದ ಉರುಸ್‌ನ್ನು ಮಾಡುವುದು ವಿಶೇಷ. ಆ ದಿನ ಊರಿನ ಎಲ್ಲ ಮುಸ್ಲಿಂರು ಮತ್ತು ಹಿಂದೂಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ದರ್ಶನವನ್ನು ಪಡೆಯುವರು. ದರ್ಗಾವನ್ನು ಸುತ್ತುವುದು, ದೀಪ ಹಚ್ಚುವುದು, ನವಿಲು ಗರಿಯಿಂದ ಭಕ್ತರಿಗೆ ಆಶೀರ್ವಾದ ಮಾಡಿ ತಲೆಗೆ ಬೆನ್ನಿಗೆ

ಹೊಡೆಯುವುದು ಕಂಡುಬರುತ್ತದೆ. ಕೆಂಪು ಲಾಡಿ, ನಿಂಬೆಹಣ್ಣು, ಬಾಳೆಹಣ್ಣು ದರ್ಗಾದಲ್ಲಿನ ಬೂದಿಯನ್ನು ಮಂತ್ರಿಸಿ ಕೊಡುವುದು ಕಂಡುಬಂದಿದೆ. ಇವೆಲ್ಲವುಗಳು ಮುಸ್ಲಿಂ ಮತ್ತು ಹಿಂದೂಗಳು ಆಚರಿಸುವ ಆಚರಣೆಗಳಾಗಿವೆ.

ಮೂರ್ತಿಶಿಲ್ಪಗಳು

ಒಂದು ಪ್ರದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ದೇವಾಲಯಗಳು ಎಷ್ಟು ಪ್ರಾಮುಖ್ಯತೆಯನ್ನು ಪಡೆದಿರುತ್ತವೆಯೋ ಅದೇ ರೀತಿ ಮೂರ್ತಿಶಿಲ್ಪಗಳು ಕೂಡ ಅಷ್ಟೇ ಪ್ರಮುಖವಾಗಿವೆ. ಇವು ದೇವಾಲಯದ ವಾಸ್ತುಶಿಲ್ಪದ ಅವಿಭಾಜ್ಯ ಅಂಗಗಳಾಗಿದ್ದು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿದೆ.[೪೧] ಜಗತ್ ಸೃಷ್ಟಿಯು ಯಾವಾಗ ಆಯಿತೋ ಆಗಲೇ ಶಿಲ್ಪವು ಪ್ರಾರಂಭವಾಯಿತು ಎಂದು ವೇದಗಳಿಂದ ತಿಳಿದುಬರುತ್ತದೆ. ಜಗತ್‌ಸೃಷ್ಟಿಯನ್ನು ಜಗತ್‌ಶಿಲ್ಪ ಎಂದೂ, ಜಗತ್ತಿನ ಸೃಷ್ಟಿಕರ್ತನನ್ನು ಜಗತ್‌ಶಿಲ್ಪಿ ಎಂದು ವರ್ಣಿಸಿರುವುದು ತಿಳಿಯುತ್ತದೆ. ಶಿಲ್ಪ ಎಂಬ ಪದವು ಶಿಲುಸಮುದ್ ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ಸಮಾಧಿ ಎಂಬ ಅರ್ಥವುಳ್ಳ 'ಶಿಲ್' ಎಂಬ ಧಾತುವು ಶಿಲ್ಪವನ್ನು ಸೂಚಿಸುತ್ತದೆ. ಕರಕುಶಲ ವಸ್ತುವೇ ಶಿಲ್ಪ ಎಂದು ಹೇಳಿರುವುದು ಕಂಡುಬಂದಿದೆ. ಶಿಲ್ಪ ಶಬ್ದದ ವ್ಯಾಪಕ ಅರ್ಥ ವಿಸ್ತಾರವನ್ನು ಈ ಹಂತದಲ್ಲಿ ಕಾಣಬಹುದು.[೪೨]

ಮೂರ್ತಿಶಿಲ್ಪವನ್ನುದ್ದೇಶಿಸಿ ಶಾಸ್ತ್ರೀಯವಾಗಿ ಹೇಳುವ ಶಿಲ್ಪಶಾಸ್ತ್ರ ಗ್ರಂಥಗಳನ್ನು ಕಾಣಬಹುದು. ಕಾಸ್ಯಪಶಿಲ್ಪ, ಮಾನಸಾರ, ಸಮಾರಾಂಗಣ, ಸೂತ್ರಾದಾರ, ಶಿಲ್ಪರತ್ನಂ, ಮಯಮತಲಿ, ಮಯ ವಾಸ್ತುಶಾಸ್ತ್ರ ಇನ್ನು ಮುಂತಾದವುಗಳು.

ಭಾರತದಲ್ಲಿ ದೇವತಾರಾಧನೆ ಹಾಗೂ ವ್ಯವಸ್ಥಿತ ದೇವಾಲಯಗಳ ನಿರ್ಮಾಣಕಾರ್ಯ ಪ್ರಾರಂಭವಾದಾಗಿನಿಂದ ದೇವತಾಮೂರ್ತಿಗಳೂ ಪ್ರತಿಷ್ಠಾಪನೆ ಹಾಗೂ ಅವುಗಳ ಆರಾಧನೆ ಆರಂಭವಾಯಿತು. ಪ್ರತಿಯೊಂದು ಪಂಥದ ದೇವಾಲಯದಲ್ಲಿ ಆಯಾ ಪಂಥದ ದೇವತಾ ಮೂರ್ತಿ ಇದ್ದೇ ಇರುತ್ತದೆ. ಇಂತಹ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ ಮೂರ್ತಿಶಿಲ್ಪ ಎನ್ನುತ್ತಾರೆ. ಸಾಮಾನ್ಯವಾಗಿ 'ಮೂರ್ತಿ' ಎಂಬ ಶಬ್ದಗಳನ್ನೊಳಗೊಂಡು ಅದಕ್ಕೆ ಪರ್ಯಾಯವಾಗಿ ಬಳಸಿದ ಶಬ್ದಗಳಲ್ಲಿ 'ಮೂರ್ತಿ' ಎಂಬುದೊಂದು ಭೌತಿಕವಸ್ತು ಎಂದು ಪರಿಗಣಿಸಲಾಗಿದೆ. ಏಕೆಂದರೆ ದೇವತಾಮೂರ್ತಿ ಎಂಬ ಶಬ್ದದಲ್ಲಿ ಮೂರ್ತಿಯ ದೇವತೆಯಲ್ಲಿ ಮೂರ್ತಿದೇವತೆಯರು ಈ ಕುರಿತು ಇರುವ ಪ್ರತಿ ಬಿಂಬ, ಪ್ರತಿಕೃತಿ, ವಿಗ್ರಹ ಮುಂತಾದ ಶಬ್ದಗಳು. ಇದನ್ನು ಇನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಇಲ್ಲಿ ಒಂದು ನಿರಾಕಾರ ಕಲ್ಪನೆಯನ್ನು ಯಥಾವತ್ತಾಗಿ ಅನುಕರಿಸಿ, ಸಾಕಾರವನ್ನು ಎಂಬ ಪರಿಕಲ್ಪನೆಯಿದೆ.[೪೩]

ದೇವಾಲಯಗಳು ನಿರ್ಮಾಣವಾದಂತೆ ಶಿಲ್ಪಗಳು ರೂಪಗೊಂಡು ವಸ್ತುವಿನ ನಿರೂಪಣೆಯನ್ನು ಎಚ್ಚಿಸಿದವು. ದೇವಾಲಯದ ವಾಸ್ತುಶಿಲ್ಪವು ಅಧಿಕ ವರ್ಷಗಳು ನಶಿಸದೆ ಉಳಿಯಬೇಕು. ಶ್ರೀಮಂತಿಕೆಯಿಂದ, ಆಕರ್ಷಣೆಯಿಂದ ಕೂಡಿರಬೇಕು. ಉತ್ತಮ ಗಂಭೀರತೆಯಿಂದ ಎಂಬ ಇತ್ಯಾದಿ ಭಾವನೆಗಳ ರೂಫದಲ್ಲಿ ಶಿಲ್ಪಗಳು ಹೆಚ್ಚಾಗಿ ದೇವಾಲಯಗಳ ವಸ್ತುವಿನೊಂದಿಗೆ ಶಿಲ್ಪಕ್ಕೆ ಹೆಚ್ಚು ಮೆರುಗನ್ನು ನಿಡಿ ಪೋಷಿಸಿ ಬೆಳೆಸಿದ್ದಾರೆನ್ನುವುದು ಶ್ರೇಷ್ಠವೆನಿಸಿದೆ. ಹೀಗಾಗಿ ಪ್ರಸ್ತುತ ಅಧ್ಯಯನದ ಕ್ಷೇತ್ರದಲ್ಲಿ ಹಲವಾರು ರಾಜ ಮನೆತನಗಳು ಆಳ್ವಿಕೆ ನಡೆಸಿ(ಕಾಗಿನೆಲೆ ಪರಿಸರದಲ್ಲಿ) ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರಕಾಲದ ದೇವಾಲಯಗಳು ಕಂಡುಬಂದರು ಪ್ರಮುಖವಾಗಿ ಕಾಗಿನೆಲೆ ಪರಿಸರದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳ ಶಿಲ್ಪಗಳು ಹೆಚ್ಚು ಕಂಡುಬಂದಿವೆ. ಈ ದೃಷ್ಟಿಯಿಂದ ಎಲ್ಲಾ ಕಾಲಘಟ್ಟಗಳಲ್ಲಿ ಶಿಲ್ಪದ ನವೀನ ಮಾದರಿಯ ಜೊತೆಗೆ ನವರಸಗಳ ಅಭಿವ್ಯಕ್ತಿಯನ್ನು ಕಾಣಬಹುದು. ಇದರಿಂದಾಗಿ ಕಾಗಿನೆಲೆ ಪರಿಸರದಲ್ಲಿ ವಿಷ್ಣೂ, ಶಿವನ ಭಂಗಿಯ ಮೂರ್ತಿಶಿಲ್ಪ, ಗಣಪತಿ, ಮಹಿಷಮರ್ಧಿನಿ ಶಿಲ್ಪಗಳು ಕಂಡುಬಂದಿದ್ದು ಅವುಗಳ ಸ್ಥೂಲ ಪರಿಚಯವನ್ನು ಕಾಣಬಹುದು.

ಗಣಪತಿ

ಪ್ರಾಚೀನ ಮತ, ಧರ್ಮ, ಪಂಥಗಳಲ್ಲಿ ಶೈವ ಪಂಥವು ಪ್ರಮುಖವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ನಾಗಪಂಥ ಕೌಮಾರ ಪಂಥಗಳನ್ನು ಸಮಕಾಲೀನವಲ್ಲದಿದ್ದರು ಇವೆರಡು ಅನೇಕ ಶತಮಾನಗಳಿಂದಲೂ ಆಚರಣೆಯಲ್ಲಿವೆ. ಪಂಚಾಯಿತ್‌ನ ಪೂಜೆ ಕ್ರಿ.ಶ.೮ನೇ ಶತಮಾನದಲ್ಲಿ ಹೆಚ್ಚು ಪ್ರಚಾರಕ್ಕೆ ಕಂಡುಬಂದರೂ ಗರ್ಭಗುಡಿಯ ಎಡಬದಿಗೆ ಮಹಿಷಮರ್ಧಿನಿಯನ್ನು ಬಲಬದಿಗೆ ಗಣೇಶನನ್ನು ಇಟ್ಟು ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ತದನಂತರದಲ್ಲಿ ಗಣಪತಿ ವಿವಿಧ ರೀತಿಯ ಆಕಾರ ಅವತಾರಗಳೊಂದಿಗೆ ಬಂದದ್ದು ಬಹುತೇಕ ಇತ್ತೀಚಿನ ದಿನಗಳಲ್ಲಿ. ಪ್ರತಿ ಹಳ್ಳಿಯಲ್ಲಿಯೂ ಒಂದು ಗಣಪತಿ ಗುಡಿ ಕಂಡುಬರುತ್ತದೆ. ಈ ಪರಿಸರಕ್ಕೆ ಸಂಬಂಧಪಟ್ಟಂತೆ ಕಾಗಿನೆಲೆ ಲಕ್ಷ್ಮೀನರಸಿಂಹ ದೇವಾಲಯ, ಆದಿಕೇಶವ ದೇವಾಲಯಗಳು ಈ ಎಲ್ಲ ಲಕ್ಷಣವನ್ನು ಹೊಂದಿರುವ ಪ್ರಮುಖ ದೇವಾಲಯವಾಗಿದೆ. ಸಾಮಾನ್ಯವಾಗಿ ಗಣಪತಿ ನಾಲ್ಕು ಪುಟ್ಟ ಕೈ, ಚಿಕ್ಕ ಕಾಲುಗಳನ್ನು ಹೊಂದಿರುತ್ತದೆ. ಅನೆಯಾಕಾರದ ಸೊಂಡಿಲುಳ್ಳ ಮುಖವು, ಕಿವಿಗಳು, ಯಜ್ಞೋಪವೀತ, ಉದರ ಬಂಧನವನ್ನು ಹೊಂದಿರುತ್ತದೆ.[೪೪] ಗಣೇಶನಿಗೆ ಪರ್ಯಾಯ ಪದ ವಾದ ವಿನಾಯಕ ಎಂಬ ಹೆಸರು ಅಥರ್ವಣ, ಉಪನಿಷತ್ತಿನಲ್ಲಿ ಕಂಡುಬರುತ್ತದೆ. ಇದರಿಂದಾಗಿ ಈ ಪರಿಸರದ ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಗಣಪತಿ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತದೆ.[೪೫]

ಕರ್ನಾಟಕದಲ್ಲಿ ಕಂಡುಬರುವ ಕೆಲವು ದೇವಾಲಯಗಳಲ್ಲಿ ವಿಶೇಷ ಲಕ್ಷಣಗಳನ್ನು ಗಣಪತಿಯು ಗುರುತಿಸಬಹುದು. ಬಲಮುರಿ ಗಣಪತಿ(ಬಲಕ್ಕೆ ಸೊಂಡಿಲೊಂದಿರುವ) ದ್ವಿಭುಜ ಗಣಪತಿ,

ಶಂಕವನ್ನು ಹಿಡಿದಿರುವ ಗಣೇಶ, ನಾಟ್ಯ ಗಣೇಶ, ಬಾಲಗಣಪತಿ, ಸಿದ್ಧಿವಿನಾಯಕ ಹೀಗೆ ವಿವಿಧ ಭಂಗಿಗಳನ್ನು ಹೊಂದಿರುವುದನ್ನು ಕಾಣಬಹುದು.

ಕೇಶವ

ವೈಷ್ಣವ ದೇವರಲ್ಲಿ ಪ್ರಮುಖನಾದರೂ ಕೇಶವನು. ಈತನು ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳಿರುತ್ತದೆ. ಈ ರೀತಿಯ ಶಿಲ್ಪವು ಕಾಗಿನೆಲೆಯ ಶ್ರೀ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಕಂಡುಬಂದಿದೆ. ಅನೇಕ ಶಿಲ್ಪಗಳಲ್ಲಿ ಕೇಶವನ ಮುಖಭಾವ ಅತ್ಯಂತ ಸುಂದರವಾಗಿ ಕೆತ್ತಿರುವುದರಿಂದ ಇವನ ಮುಖಭಾವ ಅತ್ಯಂತ ಸುಂದರಮಯವಾಗಿ ಇರುವುದರಿಂದ ಈತನನ್ನು ಸೌಮ್ಯಕೇಶವ, ಚನ್ನಕೇಶವ, ಪ್ರಸನ್ನ ಕೇಶವ ಎಂಬ ಹಲವಾರು ಹೆಸರುಗಳಿಂದ ಕರೆಯಲಾಗುತ್ತದೆ. ಇವನಿಗಾಗಿ ಪ್ರತ್ಯೇಕ ದೇವಾಲಯಗಳನ್ನು ನಿರ್ಮಿಸಲಾಗಿದೆ. ಕೇಶವನ ಶಿಲ್ಪವು ಸಾಮಾನ್ಯವಾಗಿ ಸುಂದರ ಪ್ರಭಾವಳಿಯನ್ನು ಹೊಂದಿರುವುದರ ಜೊತೆಗೆ ಕೆಲವು ಪ್ರಭಾವಳಿಗಳನ್ನು, ವಿಷ್ಣುವಿನ ದಶವತಾರಗಳನ್ನು ಕೆತ್ತಲಾಗಿದೆ. ಮತ್ಸ್ಯ, ಕೂರ್ಮ, ವರಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಮುಂತಾದವು. ಇವುಗಳಲ್ಲಿ ಬುದ್ಧ ಮತ್ತು ಕಲ್ಕಿ ಅವತಾರಗಳನ್ನು ಕೆಲವರು ಅವತಾರಗಳೆಂದು ಕರೆಯುವುದಿಲ್ಲ. ಬದಲಾಗಿ ಬಲರಾಮನನ್ನು ಸೇರಿಸುತ್ತಾರೆ. ಪುರಾಣಗಳಲ್ಲಿ ಈ ಅವತಾರಗಳ ಕಥೆಗಳು ವಿಶೇಷವಾಗಿ ಕಾಣಬರುತ್ತದೆ.

ಹನುಮಂತನ ಶಿಲ್ಪಗಳು

ವೈಷ್ಣವ ಶಿಲ್ಪಗಳಲ್ಲಿ ಹನುಮಂತನ ಶಿಲ್ಪಗಳು ತಮ್ಮದೇ ಆದ ವೈಶಿಷ್ಟತೆಯನ್ನು ಉಳಿಸಿಕೊಂಡಿವೆ. ಆಗಮಗಳಲ್ಲಿ ಹನುಮಂತನನ್ನು ರುದ್ರಾಂಶ ಸಂಭೂತನೆಂದೂ, ಸೂರ್ಯಪುತ್ರನೆಂದೂ, ವಾಯುಪುತ್ರನೆಂದೂ, ರಾಮನ ಭಕ್ತನೆಂದೂ, ಮುಖ್ಯ ಪ್ರಾಣನೆಂದೂ, ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಜಾನಪದರು ಹನುಮಂತ ದೇವಾಲಯಗಳ ನಿರ್ಮಾಣ ಮಾಡುವುದು ಪ್ರತಿ ಗ್ರಾಮದಲ್ಲಿ ಕಂಡುಬರುತ್ತದೆ. ಕಾಗಿನೆಲೆ ಹೋಬಳಿ ಪರಿಸರದಲ್ಲಿ ಲಕ್ಷ್ಮೀ ನರಸಿಂಹ ದೇವಾಲಯದ ಅಂತರಾಳದಲ್ಲಿ ಹನುಮಂತ ದೇವರ ಮೂರ್ತಿ ಶಿಲ್ಪ ಕಂಡುಬಂದಿದೆ. ಕಾಗಿನೆಲೆಯ ಶ್ರೀ ಲಕ್ಷ್ಮೀನರಸಿಂಹ ದೇವಾಲಯದ ಒಳಗಡೆ ಇರುವ ಹನುಮಂತ ಶಿಲ್ಪವು ಅಂತರಾಳದ ಬಲಭಾಗದಲ್ಲಿ ಗೋಡೆಗೆ ತಾಗಿಸಿ ನಿಲ್ಲಿಸಲಾಗಿದೆ. ಇದರ ಪಕ್ಕದಲ್ಲಿಯ ಗರುಡ ಮತ್ತು ನಾಗಶಿಲ್ಪಗಳು ಕಂಡುಬಂದಿವೆ. ಹನುಮಂತ ಶಿಲ್ಪವು ಚಿಕ್ಕದಾಗಿದ್ದು ಕುಳಿತ ಭಂಗಿಯಲ್ಲಿ ಇದ್ದು ಕಾಲುಕಡಗ ಕಂಡುಬಂದಿದೆ. ಕೊರಳಲ್ಲಿ ಸರವನ್ನು ಒಳಗೊಂಡಿದೆ. ಬಲಗೈಯಲ್ಲಿ ಗದೆಯನ್ನು ಹಿಡಿದಿರುವುದು ಕಂಡುಬಂದಿದೆ. ಈ ಶಿಲ್ಪವು ನೇರ ಮುಖಮಾಡಿರುವುದು ತಿಳಿದು ಬಂದಿದೆ. ಸೊಂಟ್ಟ ಪಟ್ಟಿ ಸಹ ಕಂಡುಬಂದಿದೆ.

ನರಸಿಂಹ

ನರಸಿಂಹನಿಗೆ ಪ್ರತ್ಯೇಕವಾದ ದೇವಾಲಯಗಳಿವೆ. ಇವನನ್ನು ವಿವಿಧ ರೂಪದಲ್ಲಿ ರಚಿಸಲಾಗಿದೆ. ಇವನ ಅವತಾರಗಳು ಒಂದೊಂದು ರೀತಿ ಇದೆ. ಮತ್ಸ್ಯ ಪುರಾಣದಲ್ಲಿ ಮತ್ತು ಅವತಾರಗಳಲ್ಲಿ ಅತ್ಯಂತ ಪ್ರಚಲಿತವಾದ ನರಸಿಂಹವಾಹನ, ಪರಶುರಾಮ, ರಾಮ, ಬುದ್ಧ ಮತ್ತು ಕಲ್ಕಿಯನ್ನು ಮಾತ್ರ ಹೇಳಿದೆ. ಆದರೆ ಭಗವತಾ ಪುರಾಣದಲ್ಲಿ ೨೨ ಅವತಾರಗಳನ್ನು ವರ್ಣಿಸಿದ್ದರೂ ಸಹ ಪರಶುರಾಮನ ಅವತಾರದ ಬಗ್ಗೆ ಉಲ್ಲೇಖವಿಲ್ಲ.[೪೭] ಮತ್ತೆ ಕೆಲವು ಗ್ರಂಥಗಳಲ್ಲಿ ೨೪ ಅವತಾರಗಳನ್ನು ಉಲ್ಲೇಖಿಸಿವೇ. ನರಸಿಂಹನು ಮುಖ್ಯ ದೈವನಾಗಿ ದೇವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಕ್ಷ್ಮೀನರಸಿಂಹ, ಉಗ್ರನರಸಿಂಹ ಮತ್ತು ಯೋಗನರಸಿಂಹನನ್ನು ಕಾಣುವುದು. ಈ ದೇವನ ವಿವಿಧ ರೂಪದಲ್ಲಿ ಗುಡಿಯಲ್ಲಿರುವ ಬಿಡಿಶಿಲ್ಪಗಳು ಹಾಗೂ ದೇವಾಲಯದ ಭಿತ್ತಿ ಶಿಲ್ಪಗಳಲ್ಲಿ ಕಾಣಬಹುದು. ಅಂದರೆ ಕಾಲನ್ನು ಮಡಚಿ ಯೋಗ ಮುದ್ರೆಯಲ್ಲಿ ಕುಳಿತಿದ್ದು, ಮಂಡಿಯ ಕೆಳಭಾಗದ ಸುತ್ತಲು ಯೋಗಪಟ್ಟಿಯು ಬಂದಿದ್ದರೆ ಅದು ಯೋಗನರಸಿಂಹನೆಂದು. ಲಕ್ಷ್ಮಿಯನ್ನು ಎಡ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿದ್ದರೆ ಅದು ಲಕ್ಷ್ಮೀನರಸಿಂಹ ಎಂದು ವಿಸ್ವರೂಪದಲ್ಲಿ ಹಿರಣ್ಯಕಶ್ಯಪುವಿನ ಸಂಹಾರ ಮಾಡುತ್ತಿರುವ ಮೂರ್ತಿಯನ್ನು ಉಗ್ರನರಸಿಂಹ. ಎಡ ಮತ್ತು ಬಲಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದರೆ ಭೋಗನರಸಿಂಹನೆಂದು, ಶಂಖ, ಚಕ್ರ, ಹಿಡಿದು ಸಮಭಂಗಿಯಲ್ಲಿ ನಿಂತಿರುವ ಮೂರ್ತಿಯನ್ನು ಸ್ಥಾನಿಕ ನರಸಿಂಹನೆಂದು ಕರೆಯುತ್ತಾರೆ.

ಕಾಗಿನೆಲೆಯ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹ ಮೂರ್ತಿ ಶಿಲ್ಪವಿದೆ. ಲಕ್ಷ್ಮಿನರಸಿಂಹನು ಕುಳಿತ ಭಂಗಿಯಲ್ಲಿದ್ದು ಬಲಗಾಲನ್ನು ಕೆಳಗೆ ಬಿಟ್ಟು ಎಡಗಾಲನ್ನು ಮಡಚಿಕೊಂಡು ಕುಳಿತರುವಂತೆ ರಚನೆ ಮಾಡಲಾಗಿದೆ. ಚತುರ್ಭುಜವನ್ನು ಹೊಂದಿರುವ ನರಸಿಂಹನು ಹಿಂಬದಿಯ ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹೊಂದಿದ್ದು, ಮುಂಬದಿಯ ಕೈಗಳಲ್ಲಿ ಅಭಯ ಮತ್ತು ವರದ ಹಸ್ತವನ್ನು ಹೊಂದಿರುತ್ತಾನೆ.

ಕಾರ್ತಿಕೇಯ

ಇವನನ್ನು ಕುಮಾರ, ಮುರುಗ, ಸ್ಕಂದ, ಷಣ್ಮುಖ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.[೪೮] ಹೆಚ್ಚಾಗಿ ಶೈವ ಪಂಥದ ದೇವಾಲಯಗಳಲ್ಲಿ ಈ ಕಾರ್ತಿಕೇಯನ ಬಿಡಿಶಿಲ್ಪಗಳನ್ನು ಕಾಣಬಹುದು. ಕಾರ್ತಿಕೇಯನು ಭುಜವನನು ಹೊಂದಿದ್ದು ವಾಹನವಾದ ನವಿಲಿನ ಮೇಲೆ ಕುಳಿತುಕೊಂಡಿರುತ್ತಾನೆ. ಇವನ ಕೈಗಳಲ್ಲಿ ಬಲಗೈಯಲ್ಲಿ ಭರ್ಚಿಯನ್ನು, ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿರುತ್ತಾನೆ. ಮುಂದಿನ ಬಲಗೈಯಲ್ಲಿ ಅಭಯ ಹಸ್ತವಿದ್ದು, ಎಡಗೈಯಲ್ಲಿ ಕಟಿ ಹಸ್ತದಲ್ಲಿರುತ್ತದೆ. ತಲೆಗೆ ಕಿರೀಟ, ಮಕರ ಕುಂಡಲಗಳು, ಸರಳ ಕಂಠೀಹಾರ, ಕೈಹಾರ, ಉದರಬಂಧ, ಕಟಿಬಂಧ ಮತ್ತು ಬಿಗಿಯಾಗಿ ಧರಿಸಿದ ವಸ್ತ್ರದ ಅಲಂಕಾರವಿರುತ್ತದೆ. ಈ

ರೀತಿಯಾದ ಕಾರ್ತಿಕೇಯ ಶಿಲ್ಪವು ಕಾಗಿನೆಲೆ ಪರಿಸರದ ಹಿರೇಹಳ್ಳಿಯ ರಾಮಲಿಂಗೇಶ್ವರ ದೇವಾಲಯದಲ್ಲಿ ಕಂಡುಬಂದಿದೆ.

ಸಪ್ತ ಮಾತೃಕೇಯರು

ಸಪ್ತಮಾತೃಕೇಯರ ಉಲ್ಲೇಖವು ಪುರಾಣಗಳು ಮತ್ತು ಇತರ ಗ್ರಂಥಗಳಲ್ಲಿ ಬಂದಿದೆ. ಇದರ ಉಲ್ಲೇಖಗಳು ಮತ್ತು ವರ್ಣನೆಯ ಕುರಿತು ತಿಳಿಯಪಡಿಸುತ್ತವೆ. ಇವು ಮೂಲತಃ ಶೈವ ಫಂಥದ ದೇವತೆಗಳು. ಬ್ರಾಹ್ಮೀ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ ಇವರೇ ಸಪ್ತಮಾತೃಕೇಯರು. ಸಾಮಾನ್ಯವಾಗಿ ಸ್ತ್ರೀ ದೇವತೆಗಳೆಂದು ಇವುಗಳನ್ನು ಕರೆಯುತ್ತಾರೆ. ಇವರು ಒಂದೊಂದು ದೈವದ ಶಕ್ತಿಯೆಂದು ಹೇಳುತ್ತಾರೆ. ಇವರನ್ನು ಕ್ರಮವಾಗಿ ಬ್ರಹ್ಮ, ಮಹೇಶ್ವರ, ಕುಮಾರ, ವಿಷ್ಣು, ವರಾಹ, ಇಂದ್ರ, ಯಮ... ಹೀಗೆ ಹಲವಾರು ದೇವರುಗಳ ಶಕ್ತಿ ದೇವತೆಗಳೆಂದು ಹೇಳುವುದುಂಟು. ಸಪ್ತಮಾತೃಕೇಯರ ಶಿಲ್ಪವನ್ನು ದೇವಾಲಯಗಳ ನವರಂಗದ ಒಂದು ಭಾಗದ ಪಟ್ಟಿಕೆಗಳಲ್ಲಿ ಕೆತ್ತಲಾಗಿರುತ್ತದೆ. ಇವುಗಳು ಒಂದೊಂದು ಪೀಠದಲ್ಲಿ ಪದ್ಮಾಸನದಲ್ಲಿ ಕುಳಿತಂತೆ ಕಂಡುಬಂದರೂ ಅವರವರ ಲಾಂಛನ ಸಹಿತವಾಗಿ ಶಿಲ್ಪಸಾಗಿರುತ್ತದೆ. ಕೆಲವೊಮ್ಮೆ ಇವರ ವಾಸ್ತುವಿದ್ಯಾ ಗ್ರಂಥದಲ್ಲಿ ಸೂರ್ಯ ಮತ್ತು ಶಕ್ತಿ ದೇವತೆಗಳಿಗೆ ಈ ದೇವಿಯರು ಕ್ರಿಯೆಯೊಡೆನೆ ನಾಲ್ಕು ದಿಕ್ಕುಗಳ ಬಾಗಿಲು ಕಾಯುವವರಾಗಿದ್ದಾರೆ. ಇದರಲ್ಲಿ ಬ್ರಾಹ್ಮಿ ಮತ್ತು ಮಹೇಶ್ವರಿಯರು ಪಶ್ಚಿಮ ಬಾಗಿಲಿನಲ್ಲಿ ಕೌಮಾರಿ ಮತ್ತು ವೈಷ್ಣವಿಯರು ಉತ್ತರದ ಬಾಗಿಲಲ್ಲಿ ವರಾಹಿ ಮತ್ತು ಇಂದ್ರಾಣಿಯರು ಪೂರ್ವದ ಬಾಗಿಲಿನಲ್ಲಿ ಚಾಮುಂಡಿ ಮತ್ತು ಶ್ರೀಯರು ದಕ್ಷಿಣದ ಬಾಗಿಲಿನಲ್ಲಿ ಇರಬೇಕೆಂದು ತಿಳಿಸಿದೆ.[೪೯] ಹಾಗೆಯೇ ಇವರುಗಳು ಶಕ್ತಿದೇವತೆ ಗಳಾದುದರಿಂದ ನೀರಿನ ಸೆರೆಯಲ್ಲಿಟ್ಟು ಪೂಜಿಸುವ ಪದ್ಧತಿಯಿದೆ. ಆದುದರಿಂದ ಕೆಲವು ಕಡೆ ಬಾವಿಗಳ ಹಾಗೂ ಕೆರೆಗಳ ದಡದಲ್ಲಿಟ್ಟು ಪೂಜಿಸುವುದುಂಟು. ಈ ರೀತಿಯಾಗಿ ಕಾಗಿನೆಲೆ ಪರಿಸರಕ್ಕೆ ಸಂಬಂಧಿಸಿದ ಗಳಪೂಜೆಯ ರಾಮಲಿಂಗೇಶ್ವರ ದೇವಾಲಯದ ಆವರಣದಲ್ಲಿ ಬಿದಿದರುವ ಸಪ್ತಮಾತೃಕೆಯನ್ನು ನೋಡಬಹುದು. ಏಕೆಂದರೆ ದೇವಾಲಯವನ್ನು ಸಂಪೂರ್ಣವಾಗಿ ನೆಲಸಮಗೊಳಿಸಿದ್ದಾರೆ. ಹೊಸದಾಗಿ ನಿರ್ಮಿಸಲು ಕ್ರಮ ಕೈಗೊಂಡಿದ್ದಾರೆ ಎಂದು ಹೇಳಬಹುದು.

ಸರಸ್ವತಿ

ಸರಸ್ವತಿ ವಿದ್ಯಾದೇವತೆ, ಬ್ರಹ್ಮನ ಶಕ್ತಿ, ಶ್ವೇತ ಪದ್ಮಾಸನೆ, ಶುಭವಸ್ತುನ್ವಿತ, ಧವಳವರ್ಣೆ. ಇವಳ ಸುತ್ತಲು ಋಷಿಗಳು ಇರುತ್ತಾರೆ. ಎಲ್ಲಾ ಧರ್ಮಗಳಲ್ಲೂ ಸರಸ್ವತಿಯು ಪೂಜ್ಯನೀಯಳು. ಅಕ್ಷರ ಮಾಲೆ, ಪುಸ್ತಕವೀಣೆ, ಪಾಶ, ಅಂಕುಶ ಮುಂತಾದವು ಅವಳ ಕೈಯಲ್ಲಿರುತ್ತದೆ. ಸಾಮಾನ್ಯವಾಗಿ ಕೆಳಭಾಗದ ಎಡಗೈಯಲ್ಲಿ ವ್ಯಾಖ್ಯಾನ ಮುದ್ರೆಯನ್ನು ಹೊಂದಿದ್ದಾಳೆ. ಇವಳು ವಿಷ್ಣುವಿನ ಶಕ್ತಿ ಎಂದು ಬಿಂಬಿಸಲಾಗುತ್ತದೆ. ಶೃಂಗೇರಿಯಲ್ಲಿ ಶಾರದೆ, ಶಾಕ್ತಶರದೆ ಅವರ

ಮೂರ್ತಿ ಮೂಲಕ ಲಕ್ಷಣವನ್ನು ಕಾಣಬಹುದಾಗಿದೆ. ಇಂತಹ ಸರಸ್ವತಿ ಮೂರ್ತಿ ಕಾಗಿನೆಲೆ ಪರಿಸರಕ್ಕೆ ಸಂಬಂಧಪಟ್ಟಂತೆ ಅಥವಾ ವ್ಯಾಪ್ತಿಗೆ ಒಳಪಟ್ಟು ಹಳೇ ಕುಮ್ಮೂರಿನ ರಾಮಲಿಂಗೇಶ್ವರ ದೇವಾಲಯ ದೇವಕೋಷ್ಟಕದಲ್ಲಿ ಸರಸ್ವತಿಯ ಮೂರ್ತಿ ಶಿಲ್ಪವಿರುವುದು ಕಂಡುಬರುತ್ತದೆ.

ನಂದಿಶಿಲ್ಪಗಳು

ಕಾಗಿನೆಲೆಯ ಪರಿಸರದ ವ್ಯಾಪ್ತಿಯಲ್ಲಿ ನಂದಿಯ ಶಿಲ್ಪಗಳು ಅತಿ ಹೆಚ್ಚು ದೇವಾಲಯಗಳಲ್ಲಿ ಕಂಡುಬಂದಿದ್ದು, ದೇವಾಲಯದ ಒಳಗಡೆ ಮತ್ತು ದೇವಾಲಯದ ಹೊರಗಡೆ ನಂದಿಯ ಶಿಲ್ಪಗಳನ್ನು ಕಾಣಬಹುದು. ಇಂತಹ ನಂದಿಯ ಶಿಲ್ಪಗಳು ಸರಳ ಕೆತ್ತನೆಯಿಂದ, ಹೆಚ್ಚು ಅಲಂಕೃತವಾಗಿ ಕೆತ್ತಲ್ಪಟ್ಟಿರುವ ನಂದಿಯ ಶಿಲ್ಪಗಳು ಕಂಡುಬರುತ್ತದೆ. ನಂದಿಯು ಶಿವನ ವಾಹನವಾಗಿದ್ದು, ಪುರಾಣಗಳಲ್ಲಿಯೂ ಶಿವನ ವಾಹನವಾದ ನಂದಿಯ ಉಲ್ಲೇಖ ಅಥವಾ ಪ್ರಸ್ತಪವಿರುವುದನ್ನು ಕಾಣುತ್ತೇವೆ. ಪ್ರಸ್ತುತ ಅಧ್ಯಯನದ ಪ್ರದೇಶಗಳಲ್ಲಿ ನಂದಿ ಶಿಲ್ಪಗಳು ಶಿವ ದೇವಾಲಯಗಳ ಅಂತರಾಳ ಮತ್ತು ನವರಂಗಗಳಲ್ಲಿ ಕಂಡುಬರುತ್ತದೆ. ಈ ಶಿಲ್ಪಗಳನ್ನು ಬೆಣಚು ಕಲ್ಲಿನಿಂದ ಹಾಗೂ ಕಪ್ಪುಶಿಲೆಯಿಂದ ಕೆತ್ತಲಾಗಿದೆ.

ನಂದಿಯನ್ನು ಬಸವಣ್ಣ, ವೃಷಭ ಎಂದು ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಕಾಗಿನೆಲೆಯ ಕಲ್ಮೇಶ್ವರ ದೇವಾಲಯ, ಹಿರಹಳ್ಳಿಯ ರಾಮಲಿಂಗೇಶ್ವರ, ಗಾಳಪೂಜೆಯ ರಾಮಲಿಂಗೇಶ್ವರ, ಬಡಮಲ್ಲಿಯ ರಾಮಲಿಂಗೇಶ್ವರ, ಹಳೇಕಾಮೂರಿನ ರಾಮಲಿಂಗೇಶ್ವರ ಸೂಡಂಬಿಯ ವಿಷಪರಿಹಾರೇಶ್ವರ ಅಥವಾ ರಾಮಲಿಂಗ, ಕರೂಡಿಯ ಕಲ್ಲೇಶ್ವರ ಗುಡಿ ಹೀಗೆ ಇನ್ನು ಮುಂತಾದ ದೇವಾಲಯಗಳಲ್ಲಿ ಶಿವಲಿಂಗುವಿನ ಎದುರಿಗೆ ಮುಖ ಮಾಡಿರುವ ನಂದಿಯ ಶಿಲ್ಪಗಳು ಕಂಡುಬರುತ್ತದೆ. ಹಿರೇಹಳ್ಳಿಯ ರಾಮಲಿಂಗೇಶ್ವರ ದೇವಾಲಯದಲ್ಲಿ ನವರಂಗ ಮಂಟಪದಲ್ಲಿ ಎರಡು ನಂದಿಯ ಶಿಲ್ಪಗಳು(ಒಂದು ದೊಡ್ಡದು, ಒಂದು ಚಿಕ್ಕದು) ಕಂಡುಬಂದಿವೆ.

ನಂದಿಯ ಶಿಲ್ಪಕ್ಕೆ ವಿವಿಧ ರೀತಿಯ ಅಲಂಕಾರವನ್ನು ಮಾಡಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ನಂದಿಯ ಶಿಲ್ಪದ ಹಣೆಯಲ್ಲಿ ಪಟ್ಟಿಯಲ್ಲಿ ಕೆತ್ತಲಾಗಿರುತ್ತದೆ. ಅದರ ಕೊರಳಲ್ಲಿ ಹೂವಿನ ಹಾರದ ಕೆತ್ತನೆಯನ್ನು ಮತ್ತು ಕುತ್ತಿಗೆಯ ಭಾಗದಲ್ಲಿ ಘಂಟೆಯ ಸರವನ್ನು ಹಾಕಿರುವಂತೆ ಸುಂದರವಾಗಿ ಭಾಸವಾಗುತ್ತದೆ.

ವೀರಭದ್ರ ಶಿಲ್ಪ

ಕಾಗಿನೆಲೆಯ ಪರಿಸರದಲ್ಲಿ ಕಂಡುಬರುವ ಮತ್ತೊಂದು ಮೂರ್ತಿಶಿಲ್ಪವೆಂದರೆ ವೀರಭದ್ರ ಮೂರ್ತಿಶಿಲ್ಪ. ಶೈವ ಶಿಲ್ಪವಾಗಿದ್ದು, ಪ್ರಸ್ತುತ ಕಾಗಿನೆಲೆ ಪರಿಸರದಲ್ಲಿ ಹಲವಾರು ಕಡೆ ಈ ಮೂರ್ತಿಶಿಲ್ಪವನ್ನು ನಾವು ಕಾಣಬಹುದು. ವೈದಿಕ ಸಾಹಿತ್ಯ, ಸ್ಕಂದ, ಶಿವ, ಮತ್ಸ, ವಿಷ್ಣು, ವಾಯು, ಬ್ರಹ್ಮಾಂಡ, ಭಾಗವತ ಪುರಾಣಗಳಲ್ಲಿ ವೀರಭದ್ರನ ಸ್ಪಷ್ಟ ಉಲ್ಲೇಖವು ಕಂಡುಬರುತ್ತದೆ.

ಕಾಗಿನೆಲೆಯ ವೀರಭದ್ರಗುಡಿಯಲ್ಲಿ ನಿಂತಿರುವ ಭಂಗಿಯಲ್ಲಿ ವೀರಭದ್ರನ ವಿಗ್ರಹವಿದೆ. ಒಂದು ಅಡಿ ಪೀಠದ ಮೇಲೆ ನಿಲ್ಲಿಸಲಾಗಿದೆ. ಚಿಕ್ಕಬಾಸೂರು ಸಿದ್ದೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ವೀರಭದ್ರನ ಮೂರ್ತಿಶಿಲ್ಪವಿದೆ. ವೀರಭದ್ರನು ಚತುರ್ಭುಜವನ್ನು ಹೊಂದುರುವನು. ಈತನ ಕೈಯಲ್ಲಿ ಬಿಲ್ಲು, ಬಾಣ, ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿರುತ್ತಾನೆ. ಕೆಲವು ಶಿಲ್ಪಗಳಲ್ಲಿ ವಸ್ತ್ರಧಾರಿಯಾಗಿದ್ದು ಕಂಡುಬರುತ್ತದೆ. ಕೊರಳಿಗೆ ರುದ್ರಾಕ್ಷಿ ಮಾಲೆಯಧಾರಣೆ ಇರುತ್ತದೆ. ಸುಂದರವಾದ ಕಿರೀಟವನ್ನು ಧರಿಸಿರುತ್ತಾನೆ.

ಮಹಿಷಮರ್ದಿನಿ

ಶಕ್ತಿ ದೇವತೆಗಳಲ್ಲಿ ಮಹಿಷಮರ್ಧಿನಿಯು ಒಬ್ಬಳೂ. ಇವಳು ಯಾವಾಗಲೂ ಉಗ್ರರೂಪವನ್ನು ಹೊಂದುವಳು. ರೌದ್ರರೂಪಿಣಿ ಸ್ತ್ರೀಯಾಗಿದ್ದು, ಒಂದು ಮುಖ ಹಲವಾರು ಕೈಗಳನ್ನು ಹೊಂದಿರುತ್ತಾಳೆಂದು ಶಾಸ್ತ್ರಗ್ರಂಥಗಳಲ್ಲಿ ವರ್ಣಿಸಿದೆ.[೫೦] ಶಿಲ್ಪಗಳಲ್ಲಿಯು ಇದೇ ಭಾವವಿರುವಂತೆ ಶಿಲ್ಪಿಸಲಾಗಿದೆ. ಶಿವನ ಪ್ರಭೆಯಿಂದ ಯಮನ ಮಹಿಷಮರ್ಧಿನಿಯ ಪ್ರಭೆಯಿಂದ ಕೂಡಲು ವಿಷ್ಣುವಿನ ಪ್ರಭೆಯಿಂದ ಕೈಗಳು, ಚಂದ್ರನ ಪ್ರಭೆಯಿಂದ ಸ್ತನಗಳು, ಇಂದ್ರನ ನಡುವು ಹೀಗೆ ಒಂದೊಂದು ಪ್ರಭೆಯಿಂದ ರೂಪಿತವಾಗಿರುತ್ತದೆ.[೫೧]

ಮಹಿಷನು ಕೋಣದ ರೂಪವನ್ನು ಧರಿಸಿ ಬಂದಾಗ ಮಹಿಷ ಮರ್ಧಿನಿಯು ಕೋಣದ ತಲೆಯನ್ನು ಕತ್ತರಿಸಿ ಕಾಲಿನಿಂದ ಮೆಟ್ಟಿ ತುಳಿದಾಗ ಅಸುರನು ಅದರ ಕತ್ತಿನಿಂದ ಹೊರಬರುತ್ತಾನೆ. ಆಗ ಅವನ ಮೇಲೆ ಯುದ್ಧ ಮಾಡಿ ಸಂಹರಿಸುತ್ತಾಳೆ. ಪಂಚಾಯಿತನ ಪೂಜೆ ಹೆಚ್ಚು ಪ್ರಚಾರಗಳಲ್ಲಿ ಬಂದಂತೆ ಗರ್ಭಗುಡಿಯ ಎಡಬದಿಗೆ ಮಹಿಷಮರ್ದಿನಿಯನ್ನು ಇಟ್ಟು ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ಈ ರೀತಿಯ ಶಿಲ್ಪಗಳು ಶೈವ ದೇವಾಲಯಗಳಲ್ಲಿ ಅಂದರೆ ಕಾಗಿನೆಲೆ ಪರಿಸರದ ವ್ಯಾಪ್ತಿಗೆ ಒಳಪಡುವ ಚಿಕ್ಕಬಾಸೂರಿನ ಗವಿಸಿದ್ದೇಶ್ವರ ದೇವಾಲಯದಲ್ಲಿ ಕಂಡುಬಂದಿದೆ.

ಅಡಿಟಿಪ್ಪಣಿಗಳು

೧. ಗೊರೂರು ಅನಂತರಾಜು, **ಹಾಸನ ಜಿಲ್ಲೆಯ ದೇವಾಲಯಗಳ ದರ್ಶನ,** ಪು.೨

೨. ಅಪರ್ಣಾ ಕೂ.ಸ. **ದೇವಾಲಯ ವಸ್ತುಶಿಲ್ಪ ಪರಿಚಯ,** ಪು.೧

೩. ರಾಜಾರಾಂ ಹೆಗಡೆ, **ಭಾರತೀಯ ಮೂರ್ತಿಶಾಸ್ತ್ರ ಧರ್ಮ, ದೇವತಾರನೆ ಹಾಗೂ ಸಾಂಸ್ಕೃತಿಕ ರಾಜಕೀಯ ಐತಿಹಾಸಿಕ ವಿಶ್ಲೇಷಣೆ,** ಪು.೩೫–೩೬

೪. ಅಪರ್ಣಾ ಕೂ.ಸ., **ಪೂರ್ವೋಕ್ತ,** ಪು.೧

೫. ಗೋಪಾಲ್ ಬಾ.ರಾ., **ವಾಸ್ತು ವಿದ್ಯಾ ಶಿಲ್ಪಶಾಸ್ತ್ರ,** ಪು.೧

೬. ಪ್ರಭಾಕರ್ ಎಸ್.ಎಸ್., **ದೇವಾಲಯ ವಾಸ್ತು**, ಪು.೧೨

೭. ರಾಮಚಂದ್ರರಾವ್ ಎಸ್.ಕೆ., **ಭಾರತೀಯ ದೇವಾಲಯಗಳು ನೆಲೆ–ಹಿನ್ನೆಲೆ**, ಪು.೧

೮. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕದ ಸಂಸ್ಕೃತಿ ಸಮೀಕ್ಷೆ**, ಪು.೫೨೩

೯. ಸುರೇಶ್ ಬಿ., ಚಿತ್ರದುರ್ಗ, **ದಾವಣಗೆರೆ ಜಿಲ್ಲೆಗಳ ದೇವಾಲಯಗಳು**, ಪು.

೧೦. ತಿಪ್ಪೇರುದ್ರಸ್ವಾಮಿ ಎಚ್., **ಪೂರ್ವೋಕ್ತ**, ಪು.೫೨೮–೫೩೧

೧೧. ಅದೇ, ಪು.೫೩೭–೫೪೧

೧೨. ಅದೇ, ಪು.೫೭೭

೧೩. ಸುರೇಶ ಕೆ.ಎಂ., ವಾಸುದೇವ ಬಡಿಗೇರ್, ಸೋಮಶೇಖರ ಎಸ್.ವೈ., ಮೂಡಲಗೆರೆ ಕೊಟ್ರೇಶ್, **ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ** ಪು.

೧೪. ಜ್ಞಾನಾನಂದ ಜಿ., **ಶಿಲ್ಪದರ್ಶ, ಸಂ.೨**, ಪು.೧೯೭–೯೮

೧೫. ಮಹಾದೇವ ಸಿ., ರಮೇಶ ನಾಯಕ, **ಹಾವೇರಿ ಜಿಲ್ಲೆ ದೇವಾಲಯಕೋಶ**, ಪು.೨೪

೧೬. ಅದೇ, ಪು.೨೪

೧೭. ಅದೇ, ಪು.೧೫

೧೮. ಅದೇ, ಪು.೧೫

೧೯. ಅದೇ, ಪು.೨೦

೨೦. ಅದೇ, ಪು.೨೬

೨೧. ಅದೇ, ಪು.೧೩

೨೨. ಅದೇ, ಪು.೧೨

೨೩. ಅದೇ, ಪು.೧೨

೨೪. ಅದೇ, ಪು.೧೨

೨೫. ಅದೇ, ಪು.೧೩

೨೬. ಅದೇ, ಪು.೨೫

೨೭. ಅದೇ, ಪು.೨೫–೨೬

೨೮. ಅದೇ, ಪು.೧೮-೧೯

೨೯. ಅದೇ, ಪು.೧೨

೩೦. ಅದೇ, ಪು.೧೧

೩೧. ಅದೇ, ಪು.೧೪

೩೨. ಅದೇ, ಪು.೧೦

೩೩. ಅದೇ, ಪು.೯

೩೪. ಅದೇ, ಪು.೭

೩೫. ಅದೇ, ಪು.೭-೮

೩೬.ಅದೇ, ಪು.೮

೩೭. ಸಂಗನಬಸಯ್ಯ ಎಸ್.ಕೊಡೇಕಲ್ಲುಮಠ, **ಕಾಗಿನೆಲೆ ಶ್ರೀ ಸಂಗಮೇಶ್ವರ ದೇವರ ಕಿರುಪರಿಚಯ**, ಪು.

೩೮. ಕ್ಷೇತ್ರಕಾರ್ಯ ಮಾಲತೇಶ(ಎಂ.ಜಿ.ವರದ)

೩೯. ಕ್ಷೇತ್ರಕಾರ್ಯ ವರದಿ

೪೦. ಕ್ಷೇತ್ರಕಾರ್ಯ ವರದಿ

೪೧. ತಿಪ್ಪೇರುದ್ರ ಸ್ವಾಮಿ ಹೆಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪು.೨೨

೪೨. ನಾಗರಾಜಪ್ಪ ಎಸ್., **ಚಿತ್ರದುರ್ಗ ಪರಿಸರದ ದೇವಾಲಯಗಳು**, ಅಪ್ರಕಟಿತ ಎಂಫಿಲ್ ಪ್ರಬಂಧ, ಪು.

೪೩. ಗೋಪಾಲ ಬಾ.ರಾ., **ವಾಸ್ತುವಿದ್ಯಾ ಶಿಲ್ಪಶಾಸ್ತ್ರ**, ಪು.೧

೪೪. ಜ್ಞಾನಾನಂದ ಜಿ., ೨೦೦೬, **ಶ್ರೀ ಕಶ್ಯಪ ಶಿಲ್ಪಶಾಸ್ತ್ರ(ಉತ್ತರಾರ್ಧ)**, ಪು.೪೫-೪೬

೪೫. ಆಲ್ಸೈ ಏಹಿನ್ ಡ್ಯಾನಿಯಲ್, **ಹಿಂದೂ ಪಾರಿಧಿ ಇಮೇಜ್**, ಪು.೨೯೬

೪೬. ಮುಜುಮದರ್ ಆರ್.ಸಿ.(ಸಂ), ೧೯೫೭, **ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ**, ಸಂ.೪, ಪು.೧೩೩

೪೭. ಲಕ್ಷ್ಮಣ ತೆಲಗಾವಿ(ಸಂ), **ಸಂಶೋಧನ**, ಪು.೭೮೫

೪೮. ಆಲ್ಸೈ ಏಹಿನ್ ಡ್ಯಾನಿಯಲ್, **ಪೂರ್ವೋಕ್ತ,** ಪು.೨೯೮-೩೦೦

೪೯. ಗೋಪಿನಾಥರಾವ್ ಟಿ.ಎ., ೧೯೮೫, **ಎಲಿಮೆಂಟ್ಸ್ ಆಫ್ ಹಿಂದೂ ಐಕನಾಗ್ರಫಿ,** ಸಂ.೧, ಪು.೩೮೦-೮೧

೫೦. ರಾಮಚಂದ್ರರಾವ್ ಎಸ್.ಕೆ., ೧೯೭೫, ಮೂರ್ತಿ ಶಿಲ್ಪ ನೆಲೆ-ಹಿನ್ನೆಲೆ, ಬೆಂಗಳೂರು, ಪು.೧೮೧

೫೧. ಆಲ್ಸೈ ಏಹಿನ್ ಡ್ಯಾನಿಯಲ್, ಪೂರ್ವೋಕ್ತ, ಪು.೨೯೮-೩೦೦

ಅಧ್ಯಾಯ ಐದು

ಆಚರಣೆ ಮತ್ತು ನಂಬಿಕೆ

ಅಧ್ಯಾಯ ಐದು

ಆಚರಣೆ ಮತ್ತು ನಂಬಿಕೆ

ಒಂದು ಸಮಾಜದ ವ್ಯಕ್ತಿಗಳು ಪರಂಪರಾಗತವಗಿ ನಡೆಸಿಕೊಂಡು ಬರುವ ದೀರ್ಘವಾದ ನೀತಿ ನಡತೆಗಳಿಗೆ ಆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಬದ್ಧನಾಗಿ ನಡೆದುಕೊಳ್ಳಬೇಕು. ಈ ನಡವಳಿಕೆ ಹೆಚ್ಚು ಕಾಲ ರೂಢಿಗೆ ಬಂದಾಗ ಆಚಾರ ಎನಿಸಿಕೊಳ್ಳುತ್ತದೆ.[೧] ಸಮಾಜವು ವ್ಯವಸ್ಥಿತವಾಗಿ ನಡೆಯಲು ಜನಪದರು ಕೆಲವೊಂದು ಆಚಾರಗಳನ್ನು ರೂಢಿಗೆ ತಂದರು. ಅಂತಹ ಆಚಾರಗಳಲ್ಲಿ ನಂಬಿಕೆಗಳು ಗಣನೀಯವಾದ ಪಾತ್ರ ವಹಿಸುತ್ತವೆ. ನಂಬಿಕೆಗಳಿಗೆ, ಸಂಪ್ರದಾಯಗಳಿಗೆ ಮೂಲ, ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ನಂಬಿಕೆಯು ಇತನ ಜೀವನ ವಿಧಾನ ವಿವಿಧ ನಡವಳಿಕೆಗಳನ್ನು ಪ್ರತಿಬಿಂಬಿಸುತ್ತದೆ. ಇವುಗಳ ವ್ಯಾಪ್ತಿ ಗ್ರಾಮೀಣ ಜನರಿಗೆ ಮಾತ್ರ ಸೀಮಿತವಾಗಿದೆ. ಹೀಗಾಗಿ ನಂಬಿಕೆಗಳ ಹರವು ಮಾನವ ಸಂಸ್ಕೃತಿಯಲ್ಲಿ ಮಾತ್ರವಲ್ಲದೆ ಮಾನವನ ನಾಗರೀಕತೆಯಲ್ಲೂ ಕಂಡುಬರುತ್ತದೆ.

ಭಾರತೀಯ ಜೀವನದಲ್ಲಿ ಧಾರ್ಮಿಕ ನಂಬಿಕೆಗಳು ಪ್ರಬಲವಾಗಿ ಕೆಲಸ ಮಾಡುತ್ತವೆ. ಇದು ಮಾನವನ ಸಾಮೂಹಿಕ ಬದುಕಿನ ಸಂದರ್ಭದಲ್ಲಿ ಹುಟ್ಟಿರಬೇಕು. ಇವುಗಳ ಹುಟ್ಟಿನ ಹಿಂದೆ ಜೀವನಾನುಭವವಿದೆ. ಪ್ರಕೃತಿಯಲ್ಲಿ ನಡೆಯುವ ಅನೇಕ ಘಟನೆಗಳ ಕುರಿತಾದ ಅಪೂರ್ವ ಕಲ್ಪನೆ ಅತಿಮಾನುಷ ಶಕ್ತಿಯ ಭಯ ಇತ್ಯಾದಿಗಳು ನಂಬಿಕೆಗಳ ಹುಟ್ಟಿಗೆ ಕಾರಣವಾಗಿರುವುದು.[೨] ಗ್ರಾಮೀಣ ಪ್ರದೇಶಗಳಲ್ಲಿ ದೇವರಿಗೆ ಹರಕೆ ಮಾಡಿಕೊಳ್ಳುವ(ಹೊರುವ) ಪದ್ಧತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದುದು ಕಾಣಬರುತ್ತದೆ. ರೋಗ ರುಜಿನಗಳನ್ನು(ಕಾಯಿಲೆಗಳನ್ನು) ವಾಸಿ ಮಾಡುತ್ತಾನೆ ಎಂಬುದು ಅವರ ನಂಬಿಕೆ. ಇದರಿಂದ ಅವರು ಹಲವಾರು ರೀತಿಯ ಆಚರಣೆಗಳನ್ನು ಆಚರಿಸುತ್ತ ಬಂದಿದ್ದು ತಿಳಿದುಬರುತ್ತದೆ. ಹರಕೆ ಕಟ್ಟಿಕೊಂಡರೆ ದೇವರು ರಕ್ಷಿಸುವ ಎಂಬ ನಂಬಿಕೆಯೇ ಅವರ ನೆಮ್ಮದಿಗೆ ಕಾರಣವಾಗಿ ರೋಗ ನಿವಾರಣೆಯಲ್ಲಿ ಮಹತ್ತರವಾದ ಪಾತ್ರವಹಿಸಿದ್ದು ಕಂಡುಬರುತ್ತದೆ. ನಂಬಿಕೆಗಳು ಹಳ್ಳಿಗಳಲ್ಲಿ ಆಚಾರ ವಿಚಾರ ಮತ್ತು ಪದ್ಧತಿಗಳಲ್ಲಿ ಪ್ರಚಲಿತವಾಗಿದೆ. ಐತಿಹಾಸಿಕವಾಗಿ ಇವುಗಳಣ್ನು ಗಮನಿಸಿದರೆ, ಬಹುತೇಕ

ನಂಬಿಕೆಗಳೂ ಪ್ರಕೃತಿ ಮೂಲವಾಗಿ ಹುಟ್ಟಿಕೊಂಡವುಗಳೇ ಆಗಿವೆ. ಈ ನಂಬಿಕೆಗಳು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿ ಬೆಳೆದು ಉಳಿದುಕೊಂಡು ಬಂದಿವೆ.[೨]

ಸಂಸ್ಕೃತಿಯ ಪುನರುತ್ಥಾನವೇ ಹಬ್ಬ ಎಂದು ಕರೆಯುತ್ತೇವೆ. ಅದು ತನ್ನದೇ ಆದಂತಹ ನಂಬಿಕೆ ಮತ್ತು ಆಚರಣೆಗಳ ಮೇಲೆ ನಿಂತು ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತದೆ. ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು. ಆಚರಣೆ ಇಲ್ಲದೆ ಯಾವ ದೈವದ ಅಸ್ತಿತ್ವವೂ ಸಾಧ್ಯವಿಲ್ಲ. ಜನಪದ ಧರ್ಮ ಎಂಬುದು ಇಂದು ಆಚರಣೆಯ ಧರ್ಮವಾಗಿ ಮಾರ್ಪಾಡುಗೊಳ್ಳುತ್ತದೆ. ಇದರಿಂದ ದೇವತೆಗೂ ಸಮಾಜಕ್ಕೂ ಸಂಬಂಧದಲ್ಲಿ ಅಭಿನಯಗೊಳ್ಳುವ ಕ್ರಮದ ಆಚರಣೆಗಳನ್ನು ಹಾಗೂ ಅದರ ಸ್ವರೂಪವನ್ನು ತಿಳಿಸುವಲ್ಲಿ ಅದು ಸಹಾಯಕವಾಗಿದೆ. ಸಂಪ್ರದಾಯ ಅಂಗೀಕರಿಸಿದ ಧಾರ್ಮಿಕ ಮತ್ತು ಯಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ. ನಂಬಿಕೆ ಆಚರಣೆಯ ಬೆನ್ನೆಲುಬು. ನಂಬಿಕೆಯು ಸಿದ್ಧಾಂತದ ಆಚರಣೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ.[೪] ಹಬ್ಬದ ಸಂದರ್ಭದಲ್ಲಿ ಆಚರಿಸುವ ಆಚರಣೆಗಳು ಆ ಗ್ರಾಮದ ಹಾಗೂ ಅಲ್ಲಿಯ ದೇವತೆಯ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಜನರು ಭಯ–ಭಕ್ತಿಯಿಂದ ಆಚರಣೆಗಳನ್ನು ಆಚರಿಸಿ ಪ್ರತಿಯೊಂದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ಕಾಣುತ್ತೇವೆ. ಪ್ರಸ್ತುತವಾಗಿ ಗ್ರಾಮಗಳಲ್ಲಿ ಆಚರಣೆಗಳು ರೂಢಿಯಲ್ಲಿರುವುದು ಕಂಡುಬಂದಿವೆ.

ಸಂಸ್ಕೃತಿಯ ಒಂದು ಭಾಗವಾದ ನಂಬಿಕೆ, ಆಚರಣೆಯು ಪರಿಸ್ಥಿತಿಯಲ್ಲಿ ಜಾತ್ರೆ, ಉತ್ಸವ, ಹಬ್ಬ ಹರಿದಿನಗಳು ಮುಂತಾದವುಗಳಲ್ಲಿ ಸಮಾವೇಶಗೊಂಡಿರುತ್ತವೆ. ಒಂದು ಗ್ರಾಮ ಅಥವಾ ಸಮುದಾಯದ ಸಂಸ್ಕೃತಿಯನ್ನು ತಿಳಿದುಕೊಳ್ಳುವಲ್ಲಿ ಎಲ್ಲ ಕ್ಷೇತ್ರಗಳು, ನಿರ್ಧರಿತ ಅಂಶಗಳಾಗಿವೆ. ಸಂಸ್ಕೃತಿ ಎಂಬುದು ಅದು ನಿಂತ ನೀರಲ್ಲ, ಅದು ಹರಿಯುವ ನೀರಾಗಿವೆ. "ಗ್ರಾಮದಿಂದ ಗ್ರಾಮಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆಯಾಗಿ ಬೆಳೆಯುತ್ತಿರುವುದು ವಿಶೇಷವಾಗಿದೆ. ಮನುಷ್ಯ ಅಕ್ಷರ ಬಲ್ಲವನಾಗುತ್ತಿದ್ದಂತೆಯೇ ಪರಂಪರಾಗತವಾಗಿ ಉಳಿದುಬಂದ, ಕಲೆ, ನಂಬಿಕೆ, ಆಚರಣೆ ಉತ್ಸವ ಮುಂತಾದ ಚಟುವಟಿಕೆಗಳು ದೂರಾಗುವ ಅಪಾಯದ ಸನ್ನಿವೇಶ ನಿರ್ಮಾಣವಾಗಿದೆ.

ಈ ಹಿನ್ನೆಲೆಯಲ್ಲಿ ಅವುಗಳ ಕುರಿತು ಅಧ್ಯಯನಕ್ಕೆ ಹೆಚ್ಚಿನ ಮಹತ್ವ ನೀಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಹೀಗಾಗಿ ಕಾಗಿನೆಲೆ ಪರಿಸರಕ್ಕೆ ಸಂಬಂಧಿಸಿದಂತೆ ಹಲವಾರು ನಂಬಿಕೆ, ಆಚರಣೆಗಳು ಕಂಡುಬಂದಿದ್ದು, ಅವುಗಳಲ್ಲಿ ಹಬ್ಬ ಹರಿದಿನಗಳ ಆಚರಣೆ, ಜಾತ್ರೆ ಉತ್ಸವಗಳ ಆಚರಣೆಗಳು ಕಂಡುಬಂದಿವೆ. ಅವುಗಳನ್ನು ಈ ಕೆಳಗಿನಂತೆ ಕಾಣಸಿಗಬಹುದಾಗಿದೆ.

ಹಬ್ಬಗಳು

ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾರೂಪಗಳೇ ಈ ಹಬ್ಬಗಳು. ಅವುಗಳು ಬೇರು ಮಟ್ಟದಲ್ಲಿ ಅವತರಿಸಿ, ನಿಸರ್ಗಾರಾಧನೆಯಲ್ಲಿ ಪಸರಿಸಿವೆ. ಅವುಗಳು ಕೃಷಿ ಸಂಸ್ಕೃತಿಯಲ್ಲಿ ಸ್ಪಷ್ಟ ರೂಪವನ್ನು ಪಡೆದು ಕಾಲಾನಂತರದಲ್ಲಿ ವಿಕಾಸಗೊಳ್ಳುತ್ತಾ ಜಟಿಲವಾದದ್ದುಂಟು. ಪ್ರತಿಯೊಂದು ಯುಗದ ಜನರೂ ಆಯಾ ಕಾಲದ ಅಭಿರುಚಿ, ಮನೋಧರ್ಮಗಳಿಗನುಗುಣವಾಗಿ ತಂತಮ್ಮ ಕಲ್ಪನೆಗಳಿಗನುಸಾರವಾಗಿ ಅವುಗಳ ರೂಪ ಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡಿದ್ದು ಹೊಸ ಹೊಸ ವಿಧಿ ನಿಷೇಧಗಳನ್ನು, ಉಪಾಸನಾ ವಿಧಾನಗಳನ್ನು ಸೇರಿಸಿದ್ದುಂಟು. ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದವು. ಹೀಗಾಗಿ ಹಲವು ಸಂಪ್ರದಾಯಗಳ ಮೊತ್ತ ಹಬ್ಬವಾಗುತ್ತದೆ.[೫]

ನಾವು ವಾಸಿಸುವ ಈ ಪ್ರಪಂಚ ಧರ್ಮಕ್ಷೇತ್ರವೂ ಹೌದು, ಕರ್ಮಕ್ಷೇತ್ರವೂ ಹೌದು. ಇಲ್ಲಿ ವಾಸಿಸುವ ನಾವು ನಮ್ಮ ಒಳಿತಿಗಾಗಿ, ಸುಖ-ಸಂತೋಷಕ್ಕಾಗಿ, ಬಾಳಿನಲ್ಲಿ ಬದಲಾವಣೆಗಾಗಿ, ಸಾಧನೆಯಿಂದ ಸಿದ್ಧಿಯತ್ತ ಸಾಗುವುದಕ್ಕಾಗಿ, ಸಮಾಜ ಸಂಘಟನೆಗಾಗಿ, ಆತ್ಮೀಯರೊಂದಿಗೆ ಬೆರೆಯುವುದಕ್ಕಾಗಿ ಹಲವು ಹಬ್ಬ-ಹರಿದಿನಗಳನ್ನು ಆಚರಿಸುತ್ತಾ ಬಂದಿದ್ದೇವೆ. ವ್ರತ ನಿಯಮಗಳನ್ನು ಎಲ್ಲಾ ದಿನಗಳಂದು ಆಚರಿಸಲು ಸಾಧ್ಯವಿಲ್ಲ. ಕೊನೆಪಕ್ಷ ಇಂತ ದಿನಗಳಲ್ಲಾದರೂ ಸ್ವಲ್ಪ ದೇಹ ದಂಡನೆ, ಆತ್ಮ ಚಿಂತನೆ ಮಾಡಿದಾಗ, ಅಲ್ಲೂ ಇಲ್ಲೂ ಸಲ್ಲುವವರಾಗಿ ಮಾನವ ಮಾಧವನಾದನು.[೬]

ಹಿಂದೂ ಸಂಪ್ರದಾಯದಲ್ಲಿ ಹಬ್ಬ ಹರಿದಿನಗಳಿಗೆ ವಿಶೇಷ ಪ್ರಾಶಸ್ತ್ಯ ಇದೆ. ಹಬ್ಬಗಳ ಸಂಖ್ಯೆಯು ಕೂಡ ಉಳಿದೆಲ್ಲ ಧರ್ಮಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿವೆ. ಹಬ್ಬಗಳು ಆಚರಣೆ ಮೂಲಭೂತವಾಗಿ ಮನುಷ್ಯನ ಉಲ್ಲಾಸ ಹುಮ್ಮಸ್ಸನ್ನು ಬಹಿರಂಗವಾಗಿ ಅಭಿವ್ಯಕ್ತಿಸುವ ಒಂದು ಸಾಧನ. ಆ ಉಲ್ಲಾಸ ಹುಮ್ಮಸ್ಸಿಗೆ ದೈವಿಶಕ್ತಿ ಕಾರಣವಾಗಿದೆಯೆಂಬ ಭಾವನೆ.[೭] ಹಬ್ಬದೊಂದಿಗೆ ದೇವರ ಸಮ್ಮಿಳನವಾಗಿರಲು ಕಾರಣ ಆದರೂ ಇಲ್ಲಿ ದೇವರ ಅಸ್ತಿತ್ವ ಕೇವಲ ಒಂದು ನಿಮಿತ್ತ ಅಷ್ಟೇ. ಸಂತೋಷವನ್ನು ವ್ಯಕ್ತಪಡಿಸುವುದಷ್ಟೆ ಮುಖ್ಯವಾದುದು.

ಹಿಂದೂ ಸಂಪ್ರದಾಯದಲ್ಲಿ ಅಸಂಖ್ಯವಾದ ಹಬ್ಬಗಳಿರಲು ಮೂಲ ಕಾರಣ ಅಲ್ಲಿನ ಜಾತಿ ವ್ಯವಸ್ಥೆ. ಅಲ್ಲಿರುವ ಜಾತಿಗಳಿಗನುಗುಣವಾಗಿ ಬೇರೆ ಬೇರೆ ಹಬ್ಬಗಳ ಆಚರಣೆ ಜಾರಿಗೆ ಬಂದಿದೆ. ಒಂದು ಜಾತಿಗೆ ಒಂದೋ, ಎರಡೋ ಕೆಲವೋ ಹಲವೋ ಹಬ್ಬಗಳು. ಇವುಗಳ ಜೊತೆಗೆ ಎಲ್ಲರೂ ಆಚರಿಸುವ ಹಬ್ಬಗಳು. ಹೀಗೆ ಬಗೆಬಗೆಯ ಹಬ್ಬಗಳು ಹಿಂದೂ ಸಂಪ್ರದಾಯದಲ್ಲಿ ಆಚರಣೆಗೆ ಬಂದಿರಲು ಕಾರಣವಾಗಿದೆ.

ಕಾಗಿನೆಲೆಯಲ್ಲಿಯ ಹಿಂದೂ ಧರ್ಮೀಯರು ಈ ಎರಡು ಬಗೆಯ ಹಬ್ಬಗಳನ್ನು ಆಚರಿಸುತ್ತಾರೆ. ಅಂತಹ ಕೆಲವೊಂದು ಹಬ್ಬಗಳನ್ನು ಈ ಕೆಳಗಿನಂತೆ ಸ್ಥೂಲವಾಗಿ ಪರಿಚಯವನ್ನು ಮಾಡಿಕೊಳ್ಳಬಹುದು.[೮]

ಯುಗಾದಿ

ಯುಗಾದಿ ಹಬ್ಬವನ್ನು ಕುರಿತು ಕವಿ ಬೇಂದ್ರೆಯವರು ತಮ್ಮದೇ ಆದ ರೀತಿಯಲ್ಲಿ ಹಾಡನ್ನು ಹೇಳಿರುವುದನ್ನು ನಾವು ಕಾಣಬಹುದು. ಯುಗಯುಗಾದಿ ಕಳೆದರೂ, ಯುಗಾದಿ ಮರಳಿ ಬರುತ್ತಿದೆ, ಹೊಸ ವರಷಕ್ಕೆ ಹೊಸ ಹರುಷವ ಹೊಸತು ಹೊಸತು ತರುತ್ತಿದೆ ಎಂಬ ವಾಣಿಯಂತೆ ಹೊಸ ವರ್ಷವು ಹರ್ಷದಾಯಕವಾಗಲೆಂದು ಒಳ್ಳೆಯ ಇಚ್ಛೆಯಿಂದ ಎಲ್ಲರೂ ಸೇರಿ ಆಚರಿಸುವ ಹಬ್ಬವೇ ಯುಗಾದಿಯಾಗಿದೆ. 'ಯುಗ' ಅಂದರೆ 'ನೂತನ ವರ್ಷ' ಆದಿ ಎಂದರೆ ಆರಂಭ ಎಂದರ್ಥ.[೯] ನನ್ನ ಅಧ್ಯಯನ ಕ್ಷೇತ್ರದಲ್ಲಿ ಈ ಹಬ್ಬವನ್ನೇ ಪ್ರಮುಖವಾಗಿ ೩ ದಿನಗಳವರೆಗೆ ಆಚರಿಸುತ್ತಾರೆ. ಮೊದಲನೆಯ ದಿನ ಊರದೇವರ ಗುಡಿಗಳನ್ನು, ಮನೆಗಳನ್ನು ತಳಿರು ತೋರಣಗಳಿಂದ ಸಿಂಗರಿಸಿ, ಹಬ್ಬದ ದಿನ ಬೆಳಗಿನ ಹೊತ್ತಿಗೆಲ್ಲ ಅಭ್ಯಂಗ ಸ್ನಾನ ಮಾಡಿ, ಹೊಸಬಟ್ಟೆ ಉಟ್ಟುಕೊಂಡು ದೇವರ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಕಡ್ಲೆಹಿಟ್ಟು, ಬೆನ್ನಿ, ಗೋಡಂಬಿ, ಗೇರುಬೀಜ, ಶೇಂಗಾಬೀಜ ಮತ್ತು ಬೇವಿನ ಹೂ ಕೂಡಿಸಿ ಬೇವು ಬೆಲ್ಲ ತಯಾರಿಸಿ ಅದನ್ನು ಸೇವಿಸುವುದರ ಮೂಲಕ ಎಲ್ಲರು ಹೊಸ ವರ್ಷವನ್ನು ಸ್ವಾಗತಿಸುತ್ತಾರೆ. ಬಸಿದ ಶ್ಯಾವಿಗೆ ಆ ದಿನದ ವಿಶೇಷ ತಿಂಡಿ. ಅದರಲ್ಲಿ ಬೇವು ಕೂಡಿಸಿ, ಸಕ್ಕರೆ ಹಾಕಿ ಊಟವನ್ನು[೧೦] ಮಾಡುವುದು.

ಅದೇ ದಿನ ಮಧ್ಯಾಹ್ನ ಹುಡುಗರು ಲಗೋರಿ ಚಂಡಿನಾಟ ಆಡುವುದು ಕಂಡುಬಂದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅವುಗಳು ನಶಿಸಿ ಹೋಗಿವೆ. ದೊಡ್ಡವರು ಕಲ್ಲುಗಳನ್ನು ಎತ್ತುವುದು ಸಾಹಸ ಆಟಗಳನ್ನು ಆಡುವುದು ಮಾಡುತ್ತಾರೆ. ಅದೇ ದಿನ ಸಂಜೆ, ಆದಿಕೇಶವನ ದೇವಸ್ಥಾನದಲ್ಲಿ ಪಂಚಾಂಗ ಶ್ರವಣ ಮಾಡುವುದು ಇಂದಿಗೂ ಉಳಿದುಕೊಂಡು ಬಂದಿದೆ. ಬ್ರಾಹ್ಮಣರಿಗೆ ದಕ್ಷಿಣೆ ಸಂದಾಯ ಮತ್ತು ಪ್ರಸಾದ ವಿನಿಯೋಗದ ನಂತರ ಯುಗಾದಿ ಹಬ್ಬದ ಮೊದಲನೆ ದಿನ ಮುಗಿಯುತ್ತದೆ.

ಎರಡನೇಯ ದಿನ ಊಟದ ವಿಶೇಷ ಬಿಟ್ಟರೆ ಬೇರೇನೂ ಇಲ್ಲ. ಆ ದಿನ ಹೋಳಿಗೆ ಮತ್ತು ಕರಿಗಡಬು, ಕಡ್ಲೆಕಾಳು ಪಲ್ಲೆಗಳನ್ನು ಮಾಡಿ ಊಟವನ್ನು ಮಾಡಿ ಮುಗಿಸುತ್ತಾರೆ. ಮೂರನೇಯ ದಿನವು ವರ್ಷದ ಒಡಕು ಎಂದು ಆಚರಿಸುತ್ತಾರೆ.

ಪಂಚಮಿ(ನಾಗರ ಪಂಚಮಿ)

ಪಂಚಮಿ(ನಾಗರಪಂಚಮಿ) ಹಬ್ಬವು ನಾಡಿಗೆ ದೊಡ್ಡದು. ಪಂಚಮಿ ಹಬ್ಬ ಉಳದೈತೆ ದಿನಾಯಾಕ ಅಣ್ಣ ಬರಲಿಲ್ಲ ಯಾಕ ಕರಿಯಾಕ' ಎಂಬ ಗೀತೆಗಳು ಪಂಚಮಿ ಹಬ್ಬದ ಪ್ರಾಮುಖ್ಯವನ್ನು ಸೂಚಿಸುತ್ತವೆ.

ಇದು ಮುಖ್ಯವಾಗಿ ಹೆಣ್ಣು ಮಕ್ಕಳ ಹಬ್ಬ. ಈ ಹಬ್ಬಕ್ಕೆ ಲಗ್ನವಾಗಿ ಹೋಗಿರುವ ಹೆಣ್ಣು ಮಕ್ಕಳೆಲ್ಲ ತೌರಿಗೆ ಬರುತ್ತಾರೆ. ಆ ದಿನ ಹೆಣ್ಣು ಮಕ್ಕಳು ಗಂಡು ಮಕ್ಕಳು ಎರಕೊಂಡು, ಹೊಸ ಬಟ್ಟೆ ಧರಿಸಿರುತ್ತಾರೆ. ಆ ದಿನ ವಿಶೇಷವಾಗಿ ತಯಾರಿಸಲಾದ ಶೇಂಗಾ ಉಂಡಿ, ಎಳ್ಳುಂಡಿ, ಕಾರದ ಉಂಡಿ, ಕಡ್ಲಿಹಿಟ್ಟಿನ ಉಂಡೆ,[೧೧] ಬೆಸನ್ ಉಂಡಿ, ರವಾ ಉಂಡಿ, ಜೋಳದ ಉಂಡೆ ಹೀಗೆ ಇನ್ನು ಬೇರೆ ಬೇರೆ ತರದ ಉಂಡಿಗಳನ್ನು ತೆಗೆದುಕೊಂಡು ಹೆಣ್ಣು ಮಕ್ಕಳು ಹುತ್ತಕ್ಕೆ(ನಾಗಪ್ಪನಿಗೆ) ನೈವೇದ್ಯ ಮತ್ತು ಹಾಲು ಎರೆಯಲು ಹೋಗುತ್ತಾರೆ. ಆ ದಿನ ಮಧ್ಯಾಹ್ನ ಅಕ್ಕಿಹುಗಿ ಮತ್ತು ಉಂಡಿ ಊಟವನ್ನು ಮಾಡುತ್ತಾರೆ.

ಊಟವಾದ ನಂತರ ಜೋಕಾಲಿ ಆಡುವುದು, ಜೋಕಾಲಿಗಳನ್ನು ಮರಗಳಿಗೆ ಕಟ್ಟಿ ತೂಗಿಹಾಕಿ, ಅದರ ಮೇಲೆ ವಿಶೇಷವಾಗಿ ಹೆಣ್ಣುಮಕ್ಕಳು ಆಟವನ್ನು ಆಡುವುದು ಕಂಡುಬರುತ್ತದೆ. ಗಂಡು ಮಕ್ಕಳು ನಿಂಬೆಹಣ್ಣು ಒಡೆಯುವ ಆಟ, ಕಣ್ಣು ಕಟ್ಟಿ ಮುಟ್ಟುವ ಆಟವನ್ನು ಆಡುವುದು ವಿಶೇಷ.

ಮರುದಿನ ಅದೇ ನಾಗಪ್ಪನ ಹುತ್ತಕ್ಕೆ ಹೆಣ್ಣು ಮಕ್ಕಳು ಬೆಲ್ಲದ ಹಾಲು ಹುಯ್ಯುವುದು ವಿಶೇಷ. ಆ ದಿನ ಪಾಯಸದ ಊಟ ಮಾಡುತ್ತಾರೆ.

ಗಣೇಶ ಚೌತಿ

ಗಣೇಶ ಚೌತಿಯನ್ನು ಎಲ್ಲ ಹಿಂದೂ ಧರ್ಮೀಯರು ಸಡಗರದಿಂದ ಆಚರಿಸುತ್ತಾರೆ. ಈ ಪ್ರದೇಶದಲ್ಲಿ ಇದೊಂದು ದೊಡ್ಡ ಹಬ್ಬವಾಗಿದೆ.[೧೨] ಏಕೆಂದರೆ ಗೌರಿ ಗಣೇಶ ಹಬ್ಬವು ಭಾದ್ರಪದ ಶುದ್ಧ ಚತುರ್ಥಿಯ ದಿನವೇ ಈ ಹಬ್ಬದ ಆಚರಣೆಯನ್ನು ಮಾಡುತ್ತಾರೆ. ಈ ಹಬ್ಬವನ್ನು ಎಲ್ಲ ಜನಾಂಗದವರು ಮಾಡುತ್ತಾರೆ. ಈ ಹಬ್ಬವು ೩ ದಿನ, ೫ ದಿನ, ೯ ದಿನಗಳವರೆಗೆ ಮತ್ತು ೧೧ ದಿನಗಳವರೆಗೆ ನಡೆಯುತ್ತದೆ. ಕೆಲವರು ಒಂದು ತಿಂಗಳು, ೩ ತಿಂಗಳ ಕಾಲದವರೆಗೆ ಮನೆಯಲ್ಲಿ ಇಟ್ಟು ಪೂಜೆಯನ್ನು ಮಾಡುವುದು ಕಂಡುಬರುತ್ತದೆ. ಮೊದಲ ದಿನ ಗಣೇಶನನ್ನು ತಂದ ದಿನ ಒಂದು ಬಟ್ಟಲಿನಲ್ಲಿ ಅಕ್ಕಿಯನ್ನು ತಂದು ಅದರ ಮೇಲೆ ಗೌರಿಯ ಮೂರ್ತಿಯನ್ನು ಇಟ್ಟು, ಗಣೇಶನ ಪಕ್ಕದಲ್ಲಿ ಇಟ್ಟು ಪೂಜೆಯನ್ನು ಮಾಡುತ್ತಾರೆ. ಹೀಗೆ ಗಣೇಶನನ್ನು ಕೆಲವರು ೩ ದಿನ, ಇನ್ನು ಕೆಲವರು ೯ ದಿನ, ೫ ದಿನಗಳವರೆಗೆ ಪೂಜೆಯನ್ನು ಮಾಡುತ್ತಾ ಪ್ರತಿ ದಿನ ಒಂದು ರೀತಿಯ ನೈವೇದ್ಯವನ್ನು ಅರ್ಪಿಸುವರು. ಇದಾದ ಮೇಲೆ ಗಣೇಶನನ್ನು ಹೊಳೆಗೆ ಕೆರೆಗೆ, ಬಾವಿಗೆ ಕಳುಸುವ ದಿನದಂದು ಗಣೇಶನನ್ನು ಪುನಃ ಶೃಂಗಾರ ಮಾಡದೆ ಆತನನ್ನು ಬರಿಮೈಲೆ ನದಿಗೆ, ಕೆರೆಗೆ, ಬಾವಿಗೆ ಕಳುಹಿಸುವುದು ಮತ್ತು ದಡಾಕ್ಷಿಯನ್ನು ಸುಡುವುದು ಈ ರೀತಿಯ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಊರ ವತಿಯಿಂದ ಒಂದು ಗಣೇಶನನ್ನು ಕೂಡ್ರಿಸಿ ಅದನ್ನು ೫ ದಿನಕ್ಕೆ ಕಳುಹಿಸುತ್ತಾರೆ. ಗಣೇಶನ ಪಕ್ಕದಲ್ಲಿ ಇಲಿ ಮೂರ್ತಿ ಕಂಡುಬರುತ್ತವೆ.

ಸೀಗೆ ಹುಣ್ಣಿಮೆ

ಸೀಗೆ ಹುಣ್ಣಿಮೆಯು ಇದು ಹಟ್ಟಿ ಹಬ್ಬಕ್ಕಿಂತಲೂ ಮುಂಚೆ ಜನರು ಈ ಹಬ್ಬವನ್ನು ಆಚರಿಸುತ್ತಾರೆ.[೧೩] ಈ ಹಬ್ಬವನ್ನು ರೈತರು ತಮ್ಮ ಹೊಲಗಳಲ್ಲಿ ಬೆಳೆಗಳನ್ನು ಬೆಳೆದಿರುವಂತಹ ಸದರ್ಭದಲ್ಲಿ ಹೊಲಕ್ಕೆ ಹೋಗಿ ತಮಗೆ ಬದುಕನ್ನು ನೀಡಿರುವ ಭೂಮಿ ತಾಯಿಗೆ ಪೂಜೆಯನ್ನು ಮಾಡಿ, ಕೃತಜ್ಞತೆಯನ್ನು ಅರ್ಪಿಸುವುದು ಈ ಆಚರಣೆಯ ಮೂಲ ಉದ್ದೇಶವಾಗಿದೆ.

ರೈತರು ಹಬ್ಬದ ದಿನ ಮನೆಯಲ್ಲಿ ಜೋಳದ ರೊಟ್ಟಿ, ಪಲ್ಯ, ಚಪಾತಿ, ಬುತ್ತಿ ಕರಿಗಡಬು, ಪಾಯಸಗಳನ್ನು ಮತ್ತು ಇನ್ನಿತರ ತಿಂಡಿ ತಿನಿಸುಗಳನ್ನು ಮಾಡಿಕೊಂಡು, ತಮ್ಮ ಹೊಲಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಮತ್ತು ಹೊಲದಲ್ಲಿ ಕರಿಯ ಕಲ್ಲಿನಿಂದ(ಬೆಗಕಪ್ಪ) ಪಂಚಪಾಂಡವರನ್ನು ಮಾಡಿ(೫ ಕಲ್ಲು) ಸಾಲಾಗಿ ಇಟ್ಟು, ಅವುಗಳಿಗೆ ವಿಭೂತಿ, ಕುಂಕುಮ, ಭಂಡಾರ, ಇವುಗಳನ್ನು ಹಚ್ಚಿ, ತಂದಿರುವ ಅಡುಗೆಯನ್ನು ಪಾಂಡವರಿಗೆ ಮತ್ತು ಭೂಮಿಗೆ ಎಡೆಯನ್ನು(ನೈವೇದ್ಯ) ಅರ್ಪಿಸಿ ಭೂಮಿಯಲ್ಲಿ ಹುಗಿಯುತ್ತಾರೆ. ಹೀಗೆ ಎಡೆಯನ್ನು ಹೂಳುವುದರ ಮೂಲಕ ರೈತರು ಭೂಮಿಗೆ ಕೃತಜ್ಞತೆ ಅರ್ಪಿಸುತ್ತಾರೆ. ಅನಂತರ ಮನೆಮಂದಿಯೆಲ್ಲ ಕೂಡಿಕೊಂಡು ಹೊಲದಲ್ಲಿ ಊಟ ಮಾಡಿ, ಸ್ವಲ್ಪ ಹೊತ್ತು ಅಲ್ಲೇ ಕಾಲ ಕಳೆದು ಸಂಜೆಯ ಹೊತ್ತಿಗೆ ಊರಿಗೆ ಹೋಗುತ್ತಾರೆ.

ಈ ಹಬ್ಬವನ್ನು ಊರಿನ ಎಲ್ಲಾ ಸಮುದಾಯದವರು ಆಚರಿಸುತ್ತಾರೆ. ಮುಸ್ಲಿಂರ ಆಚರಣೆಯಲ್ಲಿ ಕೊಂಚ ವ್ಯತ್ಯಾಸವಿದೆ. ಅದೆಂದರೆ ಅವರು ಪಂಚ ಪಾಂಡವರನ್ನು ಪೂಜಿಸುವುದಿಲ್ಲ ಮತ್ತು ಎಡೆಯನ್ನು ಕೂಡಾ ಹಾಕುವುದಿಲ್ಲ. ಇವರು ಭೂಮಿಯನ್ನಷ್ಟೆ ಪೂಜಿಸಿ, ಎಡೆ ಹಾಕುತ್ತಾರೆ. ಕಾರಣ ಇಷ್ಟೇ ಪಂಚ ಪಾಂಡವರು ಹಿಂದೂ ಧರ್ಮೀಯರೇ ಆಗಿರುವುದು. ಈ ಹಬ್ಬ ಹಿಂದೂ-ಮುಸ್ಲಿಂ ಸಮುದಾಯಗಳಲ್ಲಿರುವ ಸಮಾನ ಮನೋಧರ್ಮವನ್ನು ವ್ಯಕ್ತಪಡಿಸುತ್ತದೆ.

ವಿಜಯದಶಮಿ(ನವರಾತ್ರಿ)

ವಿಜಯದಶಮಿ ಹಬ್ಬವು ಕೂಡ ಕಾಗಿನೆಲೆ ಪರಿಸರದಲ್ಲಿ ಕಂಡುಬರುತ್ತದೆ. ಇಲ್ಲಿ ೯ ದಿನಗಳ ಕಾಲ ಘಟಸ್ಥಾಪನೆ ಮಾಡುತ್ತಾರೆ. ಎಲ್ಲ ವರ್ಗದ ಜನರು ಇಲ್ಲಿ ದೀಪಗಳನ್ನು ಹಚ್ಚುವುದರ ಮೂಲಕ ದೇವರಗಳಿಗೆ ಬನ್ನಿಮಡಿಯುವುದು. ಊರ ಹಿರಿಯರಿಗೆ ಬ್ರಾಹ್ಮಣ ವರ್ಗದವರಿಗೆ ಬನ್ನಿಯನ್ನು ಕೊಟ್ಟು ಅವರ ಕಾಲಿಗೆ ನಮಸ್ಕರಿಸುವಂತಹ ಪದ್ಧತಿ ಕಂಡುಬಂದಿದೆ.[೧೪] ಮೊದಲು ದೇವರ ಪಲ್ಕಕ್ಕಿ ಹೊತ್ತುಕೊಂಡು ಬನ್ನಿಮರಕ್ಕೆ ಹೋಗಿ ಅಲ್ಲಿ ಪೂಜೆಯನ್ನು ಮಾಡಿ ಪುನಹ ಬನ್ನಿಯನ್ನು ತೆಗೆದುಕೊಂಡು ಊರ ಎಲ್ಲ ದೇವಾಸ್ಥಾನಗಳಿಗೆ ಬನ್ನಿಮುಡಿದು ಪಾಲ್ಕಿಯನ್ನು ದೇವಸ್ಥಾನದಲ್ಲಿ ಇಡುವರು. ತದ ನಂತರ ಊರ ಜನರು ಮನೆ ಮಂದಿಗೆಲ್ಲ ಊರ ಹಿರಿಯರಿಗೆ, ಬನ್ನಿ ಮಡಿಯುವಂತಹ ಪದ್ಧತಿಯಾಗಿದೆ.

ಹಟ್ಟಿಹಬ್ಬ(ದೀಪಾವಳಿ)

ಈ ಹಬ್ಬದ ಆಚರಣೆಯಲ್ಲಿ ಪ್ರಾದೇಶಿಕ ವೈವಿಧ್ಯ ಎದ್ದು ಕಾಣುತ್ತದೆ. ಅಂದರೇ ಮಳೆಗಾಲದ ಆರ್ಭಟವೆಲ್ಲ ಮುಗಿದು ಭೂಮಿ ಇನ್ನು ಹಸಿರು ಸೀರೆಯನ್ನುಟ್ಟು ನಳನಳಿಸುತ್ತಿರುವಾಗ ಬೆಳಕಿನ ಹಬ್ಬವನ್ನು(ದೀಪವಳಿಯನ್ನು) ಜನರು ಸಂಭ್ರಮವೋತ್ಸಹಗಳಿಂದ ಎಲ್ಲೆಡೆ ಆಚರಿಸುತ್ತಾರೆ. ಇದು ೩ ದಿನಗಳ ಕಾಲ ನಡೆಯುವಂತಹ ಹಬ್ಬವಾಗಿದೆ.

ಮೊದಲನೆಯ ದಿನ ನೀರು ಹಾಕಿಕೊಳ್ಳುವ (ನರಕ ಚತುರ್ಥಿ) ಬುರೆ ಎರೆದುಕೊಳ್ಳುವುದು ಆಗಿದೆ. ಎಲ್ಲರು ಆ ದಿನ ತಲೆಗೆ ಎಣ್ಣೆ ಸ್ನಾನವನ್ನು ಮಾಡಿಕೊಳ್ಳುವುದು ಕಂಡುಬರುತ್ತದೆ. ಅಮಾವಾಸ್ಯೆಯೆಂದು ರೈತಾಪಿ ಜನರು ಎತ್ತುಗಳ ಮೈತೊಳೆದು, ಬೆಳಿಗ್ಗೆ ಅವುಗಳಿಗೆ ಕಬ್ಬಿಣದ ಠಿಂಗೆ ಬೆಂಕಿಯಲ್ಲಿ ಕಾಯಿಸಿ ಅವುಗಳಿಗೆ ಗುಲ್ಲಾ ಕೊಡುತ್ತಾರೆ. ಆದಾದ ಮೂರನೆ ದಿನಕ್ಕೆ ಎತ್ತುಗಳನ್ನು ಮೈತೊಳೆದು ಅವುಗಳಿಗೆ ಹೂ, ರಿಬ್ಬನ್ ಕೊಬ್ಬರಿಯನ್ನು ಕಟ್ಟಿ ಅವುಗಳನ್ನು ಬಿಡಿಸುವುದು ೨ನೇ ದಿನವಾಗಿದೆ. ಇಲ್ಲಿ ಇದೊಂದು ಮೋಜಿನ ಆಟ. ಗಂಡಸರ ಆಟ ಎತ್ತುಗಳಿಗೆ ಕೊಬ್ಬರಿಯನ್ನು ಕಟ್ಟಿ ಓಣಿಯಲ್ಲಿ ಒಂದೊಂದಾಗಿ ಓಡಿಸುವರು. ಆಗ ಬಿಡುವ ಎತ್ತುಗಳನ್ನು ಪೈಲಾವನರು ಹೋರಿಗಳನ್ನು ಹಿಡಿಯಲಿಕ್ಕೆ ಪರ್ಸಿಯಲ್ಲಿ(ಓಣಿ) ನಿಂತು ಎತ್ತುಗಳು ಓಡಿ ಬಂದಂತಹ ಸಂದರ್ಭದಲ್ಲಿ ಅವುಗಳ ಕೊಂಬಿಗೆ ಕೈ ಹಾಕಿ ಎತ್ತುಗಳನ್ನು ತಡೆಹಿಡಿದು ಕೊಬ್ಬರಿ ಹರಿಯುವುದು ವಿಶೇಷ. ಅದರೆ ಈ ಆಟದಲ್ಲಿ ಕೆಲವೊಂದು ಹೋರಿಗಳು ಕೈಗೆ ಸಿಗುತ್ತವೆ. ಇನ್ನು ಕೆಲವು ಹೋರಿಗಳು[೧೫] ಸಿಗುವುದಿಲ್ಲ. ಆದರೆ ಬೆಳಿಗ್ಗೆಯಿಂದ ಸಂಜೆಯವರೆಗೂ ಈ ಆಟ ಜರುಗುತ್ತದೆ. ಮೂರನೇಯ ದಿನ ಬಲಿಪಾಡ್ಯ. ಆ ದಿನ ಹೆಚ್ಚು ಹೆಣ್ಣು ಮಕ್ಕಳು ಗಂಡುಮಕ್ಕಳು ಕೂಡಿ ಹಬ್ಬವನ್ನು ಆಚರಿಸುತ್ತಾರೆ.[೧] ಮನೆಯಲ್ಲಿ ಸಗಣಿಯ ಗುರ್ಜಿಯನ್ನು ಕ್ಟಿ ನಂತರ ೪ ಮೂಲೆಗಳಿಗೂ ಆ ಗುರ್ಜಿಗಳನ್ನು ಇಟ್ಟು ಕೋಲಿನ ದಂಡುಗಳನ್ನು ನಿಲ್ಲಿಸಿ, ಆಕಳನ್ನು ತಂದು ಪೂಜಿಸುವಂತಹ ಪದ್ಧತಿಯು ಇಲ್ಲಿ ಕಂಡುಬಂದಿದೆ. ಈ ರೀತಿಯಾಗಿ ಹಬ್ಬ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಕಾಗಿನೆಲೆ ಪರಿಸರದಲ್ಲಿ ಆಚರಣೆ ಮಾಡುತ್ತಾರೆ.

ಗೌರಿ ಹುಣ್ಣಿಮೆ

ಈ ಹಬ್ಬವು ದೀಪಾವಳಿ ಆದ ೧೫ ಮತ್ತು ೨೦ ದಿನಗಳ ನಂತರದಲ್ಲಿ ಬರುತ್ತದೆ. ಇಲ್ಲಿ ತುಳಸಿ ಪೂಜೆ, ತುಳಸಿ ಲಗ್ನ, ಇವು ಹಬ್ಬದ ವಿಶಿಷ್ಟ ಆಚರಣೆಗಳು ಈ ಗೌರಿ ಹುಣ್ಣಿಮೆಯ ದಿನ ಮಕ್ಕಳೆಲ್ಲಾ ಸಕ್ಕರೆ ಗೊಂಬೆಗಳನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಕೊಂಡು ಬಂದು ಮನೆ ಮನೆಗೆ ಆರತಿಯನ್ನು ಬೆಳಗುವಂತಹ ಒಂದು ವಿಶಿಷ್ಟ ಸಂಪ್ರದಾಯ ಆ ಪ್ರದೇಶದಲ್ಲಿ ಕಂಡುಬಂದಿದೆ.[೧೭]

ಸಂಕ್ರಾಂತಿ

ಈ ಹಬ್ಬವನ್ನು ದೇಶದ ಬಹುಭಾಗದಲ್ಲಿ ಆಚರಿಸುವುದಾದರೂ ಇಲ್ಲಿ ಪ್ರಾದೇಶಿಕವಾಗಿ ಮೆರುಗನ್ನು ಪಡೆದುಕೊಂಡಿದೆ. ಅಂದರೆ ಆ ದಿನ ಊರಿನ ಜನರೆಲ್ಲರೂ ಎಳ್ಳುಬೆಲ್ಲವನ್ನು ಸೇವಿಸುವುದರ ಮೂಲಕ ಸಂತೋಷವಾಗಿರೋಣ ಎಂದು ಹರಸುತ್ತಾರೆ. ಎಳ್ಳನ್ನು ಪರಸ್ಪರ ಒಬ್ಬರಿಗೊಬ್ಬರು ಹಂಚಿಕೊಳ್ಳುವುದರ ಮೂಲಕ ಕೆಟ್ಟದನ್ನು ಬಿಟ್ಟು ಒಳ್ಳೆಯದನ್ನು ಕಲಿಯೋಣ ಎಂಬ ಆಶಯನುಡಿಗಳೊಂದಿಗೆ ವ್ಯಕ್ತಪಡಿಸುತ್ತಾರೆ.

ಅಷ್ಟೇ ಅಲ್ಲದೇ ಆ ದಿನ ಜನರು ನದಿ, ಹೊಳೆಗೆ ಹೋಗುವುದು ವಿಶೇಷವಾಗಿರುತ್ತದೆ. ಅಲ್ಲಿ ಜನರು ಸ್ನಾನವನ್ನು ಮುಗಿಸಿಕೊಂಡು, ತಾವು ತಂದಿದ್ದ ಬುತ್ತಿಗಂಟನ್ನು ಬಿಚ್ಚಿಕೊಂಡು ಹೊಳೆಗೆ ಅಥವಾ ನದಿಗೆ ಪೂಜೆ ಮಾಡಿ ಊಟ ಮಾಡುವುದು ವಿಶೇಷ. ಮತ್ತು ಪವಿತ್ರ ಕ್ಷೇತ್ರಗಳಿಗೆ ಭೇಟಿ ನೀಡಿ ದೇವರ ದರ್ಶನ ಪಡೆಯುವುದು ವಿಶೇಷವಾಗಿದೆ(ಕನಕಮಂದಿರ) ಹೀಗೆ ಇನ್ನು ಮುಂತಾದ ಆಚರಣೆಗಳು ಕಂಡುಬರುತ್ತದೆ.

ಮಹಾಶಿವರಾತ್ರಿ

ಮಾಘ ಬಹಳ ಚತುರ್ದಶಿ ಶಿವರಾತ್ರಿ ಅಂದು ಪ್ರಪಂಚಕ್ಕೆ ತಂದೆಯೆನಿಸಿದ ಶಿವನ ಆರಾಧನೆಗೆ ಪ್ರಶಸ್ತ ಮುಹೂರ್ತ. ಮಹಾಶಿವರಾತ್ರಿಯಂದು ನಡುರಾತ್ರಿ ಕೋಟಿ ಸೂರ್ಯಪ್ರಕಾಶನಾದ ಪರಶಿವನು ಶಿವಲಿಂಗದಿಂದ ಸ್ವಯಂಭುವಾಗಿ ಉದ್ಭವಿಸಿದನೆಂದು ತಿಳಿದುಬರುತ್ತದೆ. ಆ ದಿನ ಅರುಣೋದಯಕ್ಕೆ ಮುಂಚೆ ಎದ್ದು ಮುಂಜಾನೆಯಿಂದ ಹಿಡಿದು ರಾತ್ರಿಪೂರ್ತಿ ಭಕ್ತರು ನಿದ್ರೆ ಮಾಡದೇ ಜಾಗರಣೆ ಮಾಡುತ್ತಾರೆ. ಕೆಲವರು ನೀರನ್ನು ಬಿಟ್ಟು, ಬೇಯಿಸಿದ ಆಹಾರವನ್ನು ತಿನ್ನುವುದಿಲ್ಲ. ಅಂದು ಶಿವನ ದೇವಾಲಯಗಳಲ್ಲಿ ಅಭಿಷೇಕದೊಂದಿಗೆ ಶಿವನನ್ನು ನೆನೆಯುತ್ತಾರೆ. ಇಂತಹ ಆಚರಣೆಗಳಿಂದ ಆಯಸ್ಸು, ಆರೋಗ್ಯ, ಸುಖ, ಸಂಪತ್ತುಗಳು ಲಭಿಸುತ್ತವೆ. ಶಿವರಾತ್ರಿಯಂದು ಅವನ ದರ್ಶನ ಮಾಡಿದರೆ ಪುಣ್ಯಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಅವರಲ್ಲಿದೆ. ಪ್ರಸ್ತುತ ಅಧ್ಯಯನ ಕೈಗೊಂಡಿರುವ ಪ್ರದೇಶದಲ್ಲಿ ಎಲ್ಲರೂ ಈ ಹಬ್ಬವನ್ನು ಆಚರಿಸುತ್ತಾರೆ. ಮತ್ತು ಸಾಮಾನ್ಯವಾಗಿ ಬಿಲ್ಪಪತ್ರೆ ಮರವನ್ನು ಹುಡುಕಿ ಬನ್ನಿ ಮರಕ್ಕೆ ಪೂಜೆಯನ್ನು ಮಾಡುತ್ತಾರೆ.[೧೮]

ಹೋಳಿ ಹುಣ್ಣಿಮೆ

ಹೋಳಿ ಹುಣ್ಣಿಮೆ ಈ ಹಬ್ಬವನ್ನು ಕಾಗಿನೆಲೆ ಪರಿಸರದಲ್ಲಿ ಆಚರಿಸುವುದು ಕಂಡುಬರುತ್ತದೆ. ಇದೊಂದು ಗಂಡುಮಕ್ಕಳು ಆಚರಿಸುವ ಒಂದು ಸರಳ ಮನೋರಂಜಕವಾದ ಹಬ್ಬವಾಗಿದೆ.[೧೯] ಈ ಹಬ್ಬದಲ್ಲಿ ಕಾಮಣ್ಣನಿಗೆ ಒಂದು ಹಂದರ(ಚಪ್ಪರ)ವನ್ನು ಹಾಕಿ ಅಲ್ಲಿ ಕಾಮಣ್ಣನ ಪ್ರತೀಕವಾದಂತಹ ಮೂರ್ತಿಯನ್ನು ಅಲ್ಲಿ ಸ್ಥಾಪನೆ ಮಾಡಿ ೩ ದಿನಗಳ ನಂತರ ಅಂದರೆ

ಹುಣ್ಣಿಮೆಯ ದಿನ ಆ ಮೂರ್ತಿಯನ್ನು ಸುಟ್ಟು ಹಾಕಿ, ಕಾಮನನ್ನು ಕುರಿತು ಹಾಡುವುದು. ಬಣ್ಣ ಹಾಕುವುದು ಮುಂತಾದ ಕಾರ್ಯಗಳಲ್ಲಿ ತೊಡಗುತ್ತಾರೆ. ಹೀಗೆ ಹಬ್ಬವನ್ನು ಆಚರಿಸುತ್ತಾರೆ.

ಸುಗ್ಗಿಯ ಹಬ್ಬ

ಸುಗ್ಗಿಯ ಹಬ್ಬ ಈ ಪ್ರದೇಶದಲ್ಲಿ ಕಂಡುಬರುವ ಪ್ರಮುಖ ಹಬ್ಬವಾಗಿದ್ದು, ಇಲ್ಲಿ ಜನರು ತಾವು ವರ್ಷವಿಡೀ ಬೆಳೆದಿರುವ ಬೆಳೆಗಳನ್ನು ತಂದು ಕಣದಲ್ಲಿ ರಾಶಿಯನ್ನು ಮಾಡಿ(ಜೋಳದ ಒಕಲಾಟ) ಕಣದಲ್ಲಿ ರಾಶಿಯ ಪೂಜೆಯನ್ನು ಮಾಡುವುದು, ಎಡೆ ಇಡುವುದು. ನಂತರ ಪೂಜೆಯಾದ ಮೇಲೆ ಊಟವನ್ನು ಮಾಡುವುದು[೨೦] ಇತ್ಯಾದಿಗಳು ಕಂಡುಬರುತ್ತದೆ.

ಈ ರೀತಿಯಾಗಿ ಮೇಲೆ ತಿಳಿಸಿರುವಂತೆ ಮುಂತಾದ ಹಬ್ಬಗಳನ್ನು ಆಚರಣೆ ಮಾಡುವುದು ಕಂಡುಬಂದಿದೆ. ಈ ಎಲ್ಲಾ ಹಬ್ಬಗಳ ಆಚರಣೆಯ ವೈಭವ ಈಗ ಮೊದಲಿನ ಹಾಗೆ ಇಲ್ಲ. ಬದಲಾಗುತ್ತಿರುವ ಜನರೊಂದಿಗೆ ಅವುಗಳು ಬದಲಾವಣೆ ಹೊಂದುತ್ತಾ ಸಾಗುತ್ತಿವೆ ಎಂದು ಹೇಳಬಹುದು.

ಜಾತ್ರೆಗಳು ಮತ್ತು ಉತ್ಸವಗಳು

ಜಾತ್ರೆಗಳು ಜಾನಪದ ಜೀವನದ ಅವಿಭಾಜ್ಯ ಅಂಗವಾಗಿರುವಂತೆಯೇ ಜಾನಪದ ಸಂಸ್ಕೃತಿಯ ವಿಕಾಸಕ್ಕೆ ಚೈತನ್ಯದಾಯಕಗಳಾಗಿವೆ. ಅವುಗಳ ತಾಯಿಬೇರು ಭೂತಕಾಲದ ಗರ್ಭದಲ್ಲಿ ಹೂತುಕೊಂಡಿದ್ದು, ಅವು ಆದಿ ಮಾನವ ಕಾಲದಿಂದಲೇ ಧಾರ್ಮಿಕಾಚರಣೆಗಳ ಒಂದು ಪ್ರಮುಖ ಭಾಗವಾಗಿ ರೂಢಿಯಲ್ಲಿದ್ದಿರಬೇಕೆಂದು ಕಂಡುಬರುತ್ತದೆ. ಸಾಮಾನ್ಯವಾಗಿ ಆದಿ ಮಾನವನ ಕಾಲದ ದೇವತಾರಾಧನೆಯ ಮೊದಲಾದ ಧಾರ್ಮಿಕಾಚರಣೆಗಳು ಸಾಮೂಹಿಕವಾಗಿಯೇ ನಡೆಯುತ್ತಿರಬೇಕು. ಅವನು ನಿರಂತರವಾಗಿ ಅಲೆಮಾರಿತನದಿಂದ ಪಾರಾಗಿ ತಾತ್ಕಾಲಿಕವಾಗಿಯಾದರೂ ನೀರು, ನೆರಳು, ಹುಲುಸಾದ ನೆಲ ಕಂಡ ಕಡೆ ನೆಲೆಯೂರಿದ. ನಂತರ ಅಲೆಮಾರಿ ಜನಬುಡಕಟ್ಟಿನ ಜನರಾಗಿ ಪರಿವರ್ತನೆಗೊಂಡ ಸಂದರ್ಭದಲ್ಲಿ ಜಾತ್ರೆಗಳು ಸರಳ ಮೂಲಾವಸ್ಥೆಯಲ್ಲಿ ಕಾಣಿಸಿ ಕೊಂಡಿರಬೇಕು. ಮೊದಮೊದಲು ಕುಣಿತ, ಹಾಡು, ಬಲಿ, ಮಂತ್ರ, ಮಾಟಗಳೇ ಪೂಜಾ ವಿಧಿಗಳಾಗಿದ್ದಿರಬೇಕು. ಕಾಲಕ್ರಮೇಣ ಸಮಾಜದ ರೀತಿ-ನೀತಿಗಳು ಬದಲಾವಣೆ ಗೊಂಡಂತೆ ದೇವರ ಕಲ್ಪನೆಯಲ್ಲಿ ವ್ಯತ್ಯಾಸಗೊಂಡಂತೆ, ಮತಿಯ ತತ್ವಗಳು ವಿಕಾಸಗೊಂಡಂತೆ, ಧಾರ್ಮಿಕಾಚರಣೆ ಗಳು ಸಂಕೀರ್ಣವಾಗುತ್ತವೆ. ಜನಜೀವನ ಮಾರ್ಪಾಟಿನಂತೆ ಜಾತ್ರೆಗಳು ಪ್ರಾಚೀನ ಕಲ್ಪನೆಗೂ ಎಟುಕದ ಹೊಸ ಹೊಸ ಸಂಗತಿಗಳನ್ನು ಗರ್ಭೀಕರಿಸಿಕೊಂಡು ಅಳತೆಯಿಲ್ಲದೆ ಬೆಳೆಯುತ್ತಿವೆ.

ಜಗತ್ತಿನ ಎಲ್ಲ ಜನಾಂಗಗಳಲ್ಲಿಯೂ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಪ್ರಯೋಜನಗಳಿಗೆ ಕಾರಣವಾದ ಜಾತ್ರೆಗಳ ಪ್ರಾಬಲ್ಯವನ್ನು ಮತ್ತೊಂದೆಂದು ಹೇಳುವಂತಿಲ್ಲ. ಏಕಕಾಲದಲ್ಲಿಯೇ ಬೇರೆ ಬೇರೆ ಕಾಲಗಳಲ್ಲಿಯೂ ಅವು ಸ್ವತಂತ್ರವಾಗಿಯೇ ತಲೆಯೆತ್ತಿದ್ದರೂ,

ಕೆಲವೊಮ್ಮೆ ಅನುಕರಣದ ಮೂಲಕ ಸಾದೃಶ್ಯಗಳು ಹೆಣೆದುಕೊಂಡಿರಬಹುದು. ಮನುಷ್ಯನ ಮನಸ್ಸು ಒಂದೇ ತೆರನಾಗಿ ಕೆಲಸ ಮಾಡುವುದರಿಂದಲೂ ಜಾತ್ರೆಗಳ ರೂಪ, ಸ್ವರೂಪ, ರೀತಿ, ವಿಧಾನಗಳಲ್ಲಿ ಸಾಮ್ಯತೆಗಳು ಕಾಣಿಸಿಕೊಂಡರೆ ಅಚ್ಚರಿಗೊಳ್ಳದ ಪರಿಸರ, ಸನ್ನಿವೇಶ ಮತಿಯ ಶಕ್ತಿ, ಜನಾಭಿರುಚಿ ಮತ್ತು ಯುಗ ಧರ್ಮಗಳಿಗನುಗುಣವಾಗಿ ಅವುಗಳಲ್ಲಿ ವೈವಿಧ್ಯಗಳು ವಿಶೇಷವಾಗಿ ಗೋಚರವಾಗುವುದು.[೨೧]

ಕನ್ನಡ ನಾಡಿನಲ್ಲಿ ಜಾತ್ರೆಗಳು ಎಂದು ಆರಂಭವಾದುದೆಂದು ಸಾಧಾರಣವಾಗಿ ಹೇಳಲಾಗದು. ಮೊಟ್ಟಮೊದಲಿಗೆ ಬ್ರಹ್ಮ, ಶಿವನ ಸಮಯಪರೀಕ್ಷೆ ಮತ್ತು ಜನ್ನನ ಯಶೋಧರ ಚರಿತ್ರೆಗಳಲ್ಲಿ ಜಾತ್ರೆಗಳ ವಿವರಣೆ ಬರುತ್ತದೆ. 'ತೇರು' ಎನ್ನುವ ಪದ ಪ್ರಥಮವಾಗಿ ಪಂಪನಲ್ಲಿ ದೊರೆಯುತ್ತದೆ. ಯಾತ್ರಾ ಎಂಬ ಶಬ್ದವೇ ಕನ್ನಡ 'ಜಾತ್ರೆ'ಯಾಗಿದೆ. ಯಾತ್ರಾ ಎಂಬುದಕ್ಕೆ ಅನೇಕ ಅರ್ಥಗಳೀವೆ. ಚಲನೆ, ಪ್ರಯಾಣ, ತೀರ್ಥಯಾತ್ರೆ, ಹಬ್ಬ, ಸಂತೆ, ಮೆರವಣಿಗೆ, ಮನರಂಜನೆ. ಕನ್ನಡದಲ್ಲಿ ಯಾತ್ರೆ ಮತ್ತು ಜಾತ್ರೆ ಎಂಬೆರಡು ಶಬ್ದಗಳೂ ರೂಢಿಯಲ್ಲಿದ್ದು, 'ಯಾತ್ರಾ' ಪದದ ಮೂಲಾರ್ಥಗಳೆಲ್ಲ ಅವೆರೆಡು ಹಂಚಿಕೊಂಡಿವೆ. ದೇವರ ರಥೋತ್ಸವದ ಜಾತ್ರೆಯಲ್ಲಿ ಅಡಕಗೊಳ್ಳುತ್ತದೆ.[೨೨] ಕಾಗಿನೆಲೆ ಪರಿಸರಕ್ಕೆ ಸಂಬಂಧಿಸಿದಂತೆ ಹಲವಾರು ಜಾತ್ರೆ, ಉತ್ಸವಗಳು ಕಂಡುಬಂಧಿವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಕಾಗಿನೆಲೆಯ ಕನಕಾಧಿಕೇಶವ ರಥೋತ್ಸವ

ಇಲ್ಲಿನ ಕಾಗಿನೆಲೆ ಗ್ರಾಮದಲ್ಲಿ ನೆಲೆಯಾಗಿರುವ ಕನಕ ಮತ್ತು ಆದಿಕೇಶವನ ರಥೋತ್ಸವವು ಅಥವಾ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಪ್ರತಿವರ್ಷ ಯುಗಾದಿ ಆಗಿ ೯ ದಿನಗಳ ನಂತರ ಅಥವಾ ರಾಮನವಮಿಯ ದಿನದಂದು ಕನಕಾಧಿಕೇಶವನ ರಥೋತ್ಸವವು ೩ ದಿನಗಳ ಕಾಲ ನಡೆಯುತ್ತದೆ. ಈ ರಥೋತ್ಸವವು ನಡೆಯುವ ಹಿಂದಿನ ದಿನ ತೇರನ್ನು ಸಂಪೂರ್ಣವಾಗಿ ಎಲ್ಲ ರೀತಿಯಿಂದಲೂ ಸಿದ್ಧಗೊಳಿಸಿ ಶೃಂಗಾರಗೊಳಿಸಿ ರಾಮನವಮಿಯ ದಿನದಂದು ತೇರನ್ನು ಎಳೆಯಲು ಪ್ರಾರಂಭಿಸುತ್ತಾರೆ. ಆ ದಿನ ಬೆಳಿಗ್ಗೆಯಿಂದ ಕನಕ ಗುರುಪೀಠದ ಆಶ್ರಯದಲ್ಲಿ ನಡೆಯುವಂತಹ ಈ ರಥೋತ್ಸವ ಕಾರ್ಯಕ್ರಮದಲ್ಲಿ ಸಾಮೂಹಿಕ ವಿವಾಹಗಳು ಜರುಗುತ್ತವೆ. ಆ ದಿನ ಸಾಯಂಕಾಲ ೬ ಗಂಟೆ ೩೦ ನಿಮಿಷಕ್ಕೆ ಕನಕಾಧಿಕೇಶವರ ರಥೋತ್ಸವವು ಕನಕಗುರು ಪೀಠದಿಂದ ರಥದಲ್ಲಿ ಕನಕದಾಸರ ಮತ್ತು ಆದಿಕೇಶವರ ಮೂರ್ತಿಗಳನ್ನು ಇಟ್ಟು ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾರೆ. ಅದೇ ದಿನ ಊರಿನ ಜನರು(ಮುತ್ತೈದೆಯರು) ಮತ್ತು ಸುತ್ತಮುತ್ತಲಿನ ಹಳ್ಳಿಗಳಿಂದ ಬಂದಂತಹ ಜನರು ಆರತಿಯನ್ನು, ಕುಂಭಗಳನ್ನು ಹೊತ್ತುಕೊಂಡು ಬಂದು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಭಕ್ತಾಧಿಗಳೆಲ್ಲರು ಕನಕಾಧಿಕೇಶವರ ಆಶೀರ್ವಾದವನ್ನು ಪಡೆದುಕೊಳ್ಳುವರು. ಆ ದಿನ ಎಲ್ಲರಿಗೂ ಪ್ರಸಾದ ವ್ಯವಸ್ಥೆಯಿರುತ್ತದೆ.

ಎಲ್ಲರು ಪ್ರಸಾದವನ್ನು ಸ್ವೀಕರಿಸಿ, ಆ ದಿನ ಎಲ್ಲರಿಗೂ ಪ್ರಸಾದ ವ್ಯವಸ್ಥೆಯಿರುತ್ತದೆ. ಎಲ್ಲರೂ ಪ್ರಸಾದವನ್ನು ಸ್ವೀಕರಿಸುವರು. ಹೀಗೆ ೩ ದಿನಗಳವರೆಗೆ ನಡೆಯುವ ಈ ಜಾತ್ರೆಯು ಮೊದಲನೆಯ ದಿನ ರಥೋತ್ಸವವನ್ನು ಎಳೆಯುವುದು, ಮರುದಿನ ಕುಸ್ತಿ ಡೊಳ್ಳಸ್ಪರ್ಧೆ, ಟಗರಿನ ಕಾಳಗವನ್ನು ನಡೆಸುವರು. ೩ನೇ ದಿನ ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವುವು. ಈ ರೀತಿಯಾಗಿ ೩ ದಿನಗಳು ಅತ್ಯಂತ ವಿಜೃಂಭಣೆಯಿಂದ ಕನಕದಾಸರ ಉತ್ಸವವು ಕನಕ ಗುರುಪೀಠದ ಆಶ್ರಯದಲ್ಲಿ ನಡೆಯುತ್ತದೆ.[೨೩]

ಈ ಜಾತ್ರೆಯಲ್ಲಿ ಎಲ್ಲ ವರ್ಗದವರು, ಅಂದರೆ ಹಿಂದೂ, ಮುಸ್ಲಿಂ ಎಂಬ ಭೇದ ಭಾವವಿಲ್ಲದೆ ಎಲ್ಲರೂ ಸಮಾನ ರೀತಿಯಲ್ಲಿ ಜಾತ್ರೆ ಅಥವಾ ಉತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವರು.

ಸಂಗಮೇಶ್ವರ ದೇವರ ಪಲ್ಲಕ್ಕಿ ಉತ್ಸವ

ಕಾಗಿನೆಲೆಯಲ್ಲಿರುವ ಸಂಗಮೇಶ್ವರ ಪಲ್ಲಕ್ಕಿ ಉತ್ಸವವು ಪ್ರತಿವರ್ಷವು ಶಿವರಾತ್ರಿಯ ಮರುದಿನ ನಡೆಯುತ್ತದೆ. ಸಂಗಯ್ಯನವರ ಜಾತ್ರೆಯು ಶಿವರಾತ್ರಿ ಬರುವುದರೊಳಗಾಗಿ ಒಂದು ತಿಂಗಳ ಮುಂಚೆಯೇ ಕೋಡೇಕಲ್ಲ ಸದ್ಭಕ್ತರು ಎಲ್ಲ ರೀತಿಯಿಂದಲೂ ತಯಾರಿ ನಡೆಸುತ್ತಾರೆ. ಈ ಜಾತ್ರೆಗೆ ಬೇರೆ ಬೇರೆ ಸ್ಥಳಗಳಿಂದ ಭಕ್ತಸಮೂಹವೇ ಹರಿದುಬರುತ್ತದೆ. ಸಂಗಯ್ಯನ ಜಾತ್ರೆಗೆ ಜನರು ಗುಂಪುಗುಂಪಾಗಿ ಪಾದಯಾತ್ರೆಯ ಮೂಲಕ ಗುಲ್ಬರ್ಗ ಜಿಲ್ಲೆಯ ಕೊಡೇಕಲ್‌ನಿಂದ ಆಗಮಿಸುವರು. ಹೀಗೆ ಆಗಮಿಸಿದ ಭಕ್ತರೆಲ್ಲರಿಗೆ ಮಾರ್ಗಮಧ್ಯದಲ್ಲಿ ಸಂಗಯ್ಯನ ಭಕ್ತರು ಇವರಿಗೆ ಊಟದ ವ್ಯವಸ್ಥೆ, ನೀರಿನ ವ್ಯವಸ್ಥೆಯನ್ನು ಮಾಡುವುದರ ಮೂಲಕ ಭಕ್ತರು ತಮ್ಮ ಅಳಿಲು ಸೇವೆಯನ್ನು ಮಾಡುವರು. ಕೊಡೇಕಲ್ಲಿನ ಸುತ್ತಮುತ್ತಲಿನ ಗ್ರಾಮಗಳಾದ ಅಮ್ಯಪುರ,ತಕ್ಕಾಪುರ, ರಂಗನ ಪೀಠ, ರಜನಕೊಳಲು, ಬೂದಿಹಾಳ, ಬರದೇವನಾಳ, ಬಪ್ಪರಗಿ, ಹೊರಟ್ಟಿ, ಕಾಮನಟಗಿ, ಕಕ್ಕರಿ, ಬಿಜಾಪುರ ಜಿಲ್ಲೆಯ ಹೊಕ್ರಾಣಿ, ಜಲಪುರ, ಜಮ್ಮಲದಿನ್ನಿ, ನಂದ್ಯಾಳ, ಬ.ಬಾಗೇವಾಡಿ ಮತ್ತು ರಾಯಚೂರು, ಬೆಂಗಳೂರು, ಮೈಸೂರು, ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶದಿಂದಲೂ ಜನರು ಸಂಗಪಯ್ಯನ ದರ್ಶನಕ್ಕೆ ಬರುವುದನ್ನು ಕಾಣಬಹುದು.[೨೪]

ಜಾತ್ರೆಗೆ ಬರುವ ಪ್ರತಿಯೊಬ್ಬರು ಮನೆಯನ್ನು ಮಡಿಯನ್ನಾಗಿಸಿ ಸ್ವಚ್ಛಮಾಡುವರು. ಇದು ಸಂಗಮನಾಥನ ಶಕ್ತಿಗೆ ಹಾಗೂ ಬ್ರಹ್ಮಚರ್ಯಕ್ಕೆ ತೋರುವ ಕಟ್ಟುಬದ್ದ ಪರಿಪಾಲನೆಯಾಗಿದೆ. ಸಂಸಾರಿಕ ಜೀವನದ ಜಂಜಾಟದಲ್ಲಿ ಮಿಂದೆದ್ದು, ವರ್ಷಪೂರ್ಣ ತಮ್ಮ ಕುಟುಂಬದ ದೋಣಿಯನ್ನು ಮುನ್ನಡೆಸುತ್ತಿರುವ ಭಾರವಾದ ಮನಸ್ಸನ್ನು ಮುದಗೊಳಿಸಲು ಕಾಗಿನೆಲೆ ಸಂಗಯ್ಯನವರ ಸ್ವ ಆದೇಶವನ್ನು ಒಪ್ಪಿ ಮನದ ಮೈಲಿಗೆ ತೊಳೆದು ಹೊರಡುವ ಭಕ್ತರ ಪರಿ ಹೇಗಿರುತ್ತದೆಂದರೆ,

ಮನವೆ ಮಲ್ಲಿಗೆ ಅರಳಾಗಿ
ಘನ ನೆನಹು ಶಂವಂತಿಗೆಯಾಗಿ
ವಿನಯವೇ ಪಡ್ಯಾಳ ಪುಷ್ಪವಾಗಿ
ಇರುವಂತಿಗೆ ವಿಖ್ಯಾತವಾಗಿ
ಸನ್ಮಾನ ಸಂಪಿಗೆಯು ಸತ್ಕರುಣಿ
ಕಣಗಿಲ ಅರಳಾಗಿ ಘನ
ಮಹಾಲಿಂಗದೆಡೆಗೆ ಅರ್ಪಿಸಿ
ಹರಿಹರ ಎಂದರೆ ಓ..... ಎನ್ನಲಾರನೆ ಸಂಗಮನಾಥ

ಹೀಗೆ ಭಕ್ತರೆಲ್ಲರು ಹಾವೇರಿಯಿಂದ ಮತ್ತು ಸುತ್ತಮುತ್ತಲಿನ ಊರುಗಳಿಂದ ಪಾದಯಾತ್ರೆಯ ಮೂಲಕ ಇಲ್ಲವೆ ವಾಹನಗಳ ಮೂಲಕ ಬರುತ್ತಾರೆ. ಎಲ್ಲ ಸದ್ಭಕ್ತರು ಸಾಯಂಕಾಲದೊಳಗಾಗಿಯೇ ಸಂಗಮನಾಥನ ಸನ್ನಿಧಿಗೆ ಸೇರುವರು. ಭಕ್ತರೆಲ್ಲರು ದೇವಸ್ಥಾನದ ಒಳಗೆ ಪ್ರವೇಶ ಮಾಡುವ ಒದಲು ದೋಳಗಾಯಿ(೨ ತೆಂಗಿನಕಾಯಿಯನ್ನು) ದ್ವಾರ ಬಾಗಿಲಿಗೆ ಒಡೆದು ಒಳಗೆ ಹೋಗುವರು.

ಹೀಗೆ ಹರಿದು ಬಂದ ಭಕ್ತಸಾಗರವು ಸಂಭ್ರಮದಲ್ಲಿ ತೊಡಗಿ ರಾತ್ರಿ ೮ ಗಂಟೆಗೆ ನಡೆಯುವ ಮೊದಲ ಪೂಜಾ ಪ್ರಾರ್ಥನೆ, ಸಂಗಮನಾಥನ ಪಲ್ಲಕ್ಕಿಯನ್ನು ತುಂಬುವುದು. ಅಂದರೆ ದೇವಸ್ಥಾನದಲ್ಲಿರುವ ಪಲ್ಲಕ್ಕಿಯನ್ನು ಮಡಿನೀರಿನಿಂಗ ತೊಳೆದು ಗರ್ಭಗುಡಿಯ ಬಲಭಾಗದಲ್ಲಿ(ಒಳಗಡೆಯಿಂದ) ಮಂಚದ ಮೇಲಿಟ್ಟು ಪಲ್ಲಕ್ಕಿಗೆ ಗಲ್ಲಿಪಗಳನ್ನು ಸಮರ್ಪಿಸುವರು. ಕಾಗಿನೆಲೆಯ ಭಕ್ತರಾದ ಶ್ರೀ ಕಡಗಿಶೆಟ್ಟರ ಮನೆಯಿಂದ ಭಜನೆಯೊಂದಿಗೆ ಸಂಗಮನಾಥನ ಪೂಜಾ ಸಲಕರಣೆ ಹಾಗೂ ಪಲ್ಲಕ್ಕಿ ಸಾಮಗ್ರಿಗಳಾದ ಕಳಶ, ಮೂರ್ತಿ, ಪಾದಕ, ಲಿಂಗು, ಚೌರ ಮುಂತಾದವುಗಳನ್ನು ಮಡಿಯಿಂದ ಹೊತ್ತು ದೇವಸ್ಥಾನಕ್ಕೆ ತಂದು ಪಲ್ಲಕ್ಕಿ ಸೇವೆಯನ್ನು ನೆರವೇರಿಸುವರು. ತದನಂತರ ಪೂಜಾಕಾರ್ಯವನ್ನು ಕೈಗೊಂಡು, ಪಲ್ಲಕ್ಕಿಯನ್ನು ೨ ಸುತ್ತು ಪ್ರದಕ್ಷಿಣೆ ಹಾಕುವರು. ಊರಿನ ಶೆಟ್ಟರ ಮನೆಯ ಪರಿವಾರ ಹಾಗೂ ಊರ ಹಿರಿಯರು, ಕಿರಿಯರೆಲ್ಲರು ಮತ್ತು ಭಕ್ತಾದಿಗಳು ಆಗಮಿಸಿ ಪಲ್ಲಕ್ಕಿ ತಯಾರಿ ಮತ್ತು ಭಕ್ತರ ಸೇವೆ ವಿದಾರ್ಚನೆ ಪ್ರಾರಂಭಗೊಂಡು

ನೀನೆ ದೈವ ಬಸವಲಿಂಗ ನೀನೇ ದೈವ
ದೈವ ದಾನದ ಮಾನವ ಮನುಮುಗಿ
ನತ ಪದ್ಮನೀನೆ ದೈವ... ಎನ್ನುತ್ತ
ಸೊಡ್ಡು ಸೊಡ್ಡು ಸೊಗಸದವರ
ಮಂಡಿಯ ಮೇಲೆ ಶರಣರ

ಸಾಧ್ಯಗೊಳದೇ ಸಾಯುವ ನರರ
ನರರ ಮಂಡಿಯ ಮೇಲೆ ಸುಡು ಸುಡು

ಎಂದು ತಮ್ಮ ಅಂತರಾತ್ಮದಲ್ಲಿ ಅಡಗಿದ ಭಾವನೆಗಳಿಗೆ ಸವಾಲೊಡ್ಡುವಾಗ ದೇವ–ಸೈರಣೆಯ ಧರ್ಮವನ್ನು ಎದೆಗುಂದದೆ ಹೇಳುತ್ತಾ ಸಂಗಮನಾಥನ ಉತ್ಸವದಲ್ಲಿ ಪಾಲ್ಗೊಳ್ಳುವರು.[೨೬]

ಸಂಗಮನಾಥನ ನೈವೇಧ್ಯಕ್ಕೆ ಸಜ್ಜಕದ ಹೋಳಿಗೆಯನ್ನು ಮಾಡುವರು. ಅದರ ಜೊತೆಗೆ ಭಕ್ತರೇ ಮಾಡಿರುವ ಪ್ರಸಾದ ವ್ಯವಸ್ಥೆಯು ಇರುತ್ತದೆ. ಪ್ರಸಾದವನ್ನು ಎಲ್ಲರು ತೆಗೆದುಕೊಂಡ ಮೇಲೆ ಆ ದಿನ ರಾತ್ರಿಯಿಡಿ ಭಜನೆಯೊಂದಿಗೆ ನಾಮಸ್ಮರಣೆಯನ್ನು ಮಾಡಿ ಮೊದಲ ದಿನ ಕಾರ್ಯಕ್ರಮ ಮುಗಿಸಿ, ೨ನೇ ದಿನ ಬೆಳಿಗ್ಗೆ ಎಲ್ಲರು ಸ್ನಾನವನ್ನು ಮುಗಿಸಿ, ದೀಡ್ ನಮಸ್ಕಾರ ಹಾಕುವರು. ತಮ್ಮ ಮನದ ಇಷ್ಟಾರ್ಥ(ಇಚ್ಛೆ) ನೆರವೇರಿಸುವಂತೆ ದೇವರಲ್ಲಿ(ಸಂಗಪ್ಪ) ಬೇಡಿಕೊಳ್ಳುವರು. ನಂತರ ಸರಿಯಾಗಿ ಎಲ್ಲಾ ಸದ್ಭಕ್ತರು ಸೇರಿ ಪೂಜ್ಯ ಸ್ವಾಮಿಜಿಯನ್ನು ಹಾಗೂ ಕನಕಗುರು ಪೀಠದ ಅಧಿಪತಿಗಳನ್ನು ಬರಮಾಡಿಕೊಂಡು, ೯ ಗಂಟೆ ಸುಮಾರಿಗೆ ಭಜನೆಗಳೊಂದಿಗೆ ಪಲ್ಲಕ್ಕಿಯನ್ನು[೨೭] ಎತ್ತಿ ಹೆಗಲ ಮೇಲೆ ಇಟ್ಟುಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಸಂಗಮೇಶ್ವರ ಮಹಾರಾಜರೇ ಜೈ, ಬಸವೇಶ್ವರ ಮಹಾರಾಜರೇ ಜೈ ಎಂದು ಜೈಕಾರವಾಕುತ್ತ ಬೀದಿಯಲ್ಲಿ ಹೋಗುತ್ತಿರುವಾಗ ಊರಿನ ಭಕ್ತರೆಲ್ಲರು ಪಲ್ಲಕ್ಕಿಯನ್ನು ನಿಲ್ಲಿಸಿ ಕಾಯಿ, ಹಣ್ಣು, ಕರ್ಪೂರ, ಧೂಪದೊಂದಿಗೆ ನೈವೇದ್ಯ ಅರ್ಪಿಸುವರು. ಪ್ರತಿಯೊಬ್ಬರು ಸ್ತುತಿಯಲ್ಲಿ ಕೇಳಿಸುವ ನೀನಾದ ವಿಶಿಷ್ಟವಾಗಿರುತ್ತದೆ.[೨೮]

ಸುಡುಬಿಸಿಲು ಎನ್ನದೇ ಎಲ್ಲರೂ ಪಲ್ಲಕ್ಕಿ ಉತ್ಸವದಲ್ಲಿ ದೊಡ್ಡವರು, ಸಣ್ಣವರು ಎನ್ನದೇ ಸಾಲುಸಾಲಾಗಿ ದೀಡ್ ನಮಸ್ಕಾರ ಹಾಕುವುದು ವಿಶಿಷ್ಟವಾಗಿದೆ. ಈ ರೀತಿಯಾಗಿ ಅತ್ಯಂತ ವಿಜೃಂಭಣೆಯಿಂದ ಸಂಗಮೇಶ್ವರನ ಪಲ್ಲಕ್ಕಿ ಉತ್ಸವವು ಕಾಗಿನೆಲೆಯಲ್ಲಿ ಪ್ರತಿ ವರ್ಷವು ಶಿವರಾತ್ರಿಯ ದಿನದಂದು ೨ ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ.

ಆದಿಕೇಶವನ ಪಲ್ಲಕ್ಕಿ ಉತ್ಸವ

ಕಾಗಿನೆಲೆಯ ಆದಿಕೇಶವನ ಪಲ್ಲಕ್ಕಿ ಉತ್ಸವ ಮಹಾನವಮಿಯ ದಿನದಂದು (ದಸರಾದಿನದಂದು) ಊರಿನ ಎಲ್ಲಾ ವರ್ಗದ ಜನರು ಒಟ್ಟುಗೂಡಿ ಪಲ್ಲಕ್ಕಿಯ ಉತ್ಸವವನ್ನು ಆಚರಿಸುತ್ತಾರೆ. ಮಹಾನವಮಿಯ ಹಿಂದಿನ ದಿನ ಪಲ್ಲಕ್ಕಿಯನ್ನು ಮಡಿ ನೀರಿನಿಂದ ಸ್ವಚ್ಛಗೊಳಿಸಿ ಮುಂದಿನ ಊರಿನ ಜನರೆಲ್ಲರು ಸಾಯಂಕಾಲ ೫ ಗಂಟೆಯ ಸುಮಾರಿಗೆ ಎಲ್ಲ ರೀತಿಯ ಪೂಜೆ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಪಲ್ಲಕ್ಕಿ ಹೆಗಲ ಮೇಲೆ ಹೊತ್ತುಕೊಂಡು ೫ ಗಂಟೆ ಸುಮಾರಿಗೆ ಗುಡಿಯಲ್ಲಿ ಬಿಟ್ಟು ಊರಿನ ಪಕ್ಕದಲ್ಲಿರುವ ದಾಸನಕೊಪ್ಪ ಗ್ರಾಮ್ಮಕೆ ಕಾಲು ನಡಿಯಲ್ಲಿ ಹೋಗಿ ಅಲ್ಲಿ ಹನಮಪ್ಪದೇವರ ಗುಡಿಗೆ ಹೋಗಿ ಬನ್ನಿಮುಡಿವ ಕಾರ್ಯವನ್ನು

ಪೂರ್ಣಗೊಳಿಸಿ, ಮುಂದೆ ಕುಮ್ಮೂರ ಗ್ರಾಮಕ್ಕೆ ನಡೆದುಕೊಂಡು ಹೋಗಿ, ರಾತ್ರಿ ೧ ಗಂಟೆ ಸುಮಾರಿಗೆ ತಿಮ್ಮಕೇಶವನ ಗುಡಿಗೆ ಬಂದು, ಅಲ್ಲಿಯು ಬನ್ನಿಮುಡಿಯುವ ಕಾರ್ಯಕ್ರಮವನ್ನು ಪೂರ್ಣಗೊಳಿಸಿ ಬೆಳಗಿನ ಜಾವ ೪ ಗಂಟೆಯ ಸುಮಾರಿಗೆ ಇಂಗಳಗೊಂದಿಗೆ ಕಡೆಗೆ ಪಯಣ ಬೆಳೆಸುವರು. ಹೀಗೆ ಇಂಗಳಗೊಂದಿಯ ಚನ್ನಕೇಶವ ಗುಡಿಗೆ ಬಂದು ಚನ್ನಕೇಶವನ ದೇವರಿಗೆ ಬನ್ನಿಯನ್ನು ಮುಡಿದು ಹಣ್ಣುಕಾಯಿಯನ್ನು ಅರ್ಪಿಸಿ, ಅಲ್ಲಿಯ ಹನುಮಪ್ಪನ ಗುಡಿಗೆ ಬಂಧು ಬನ್ನಿಮುಡಿದು ಬೆಳಿಗ್ಗೆ ೬.೩೦ರ ಸುಮಾರಿಗೆ ಕಾಗಿನೆಲೆಯ ದೊಡ್ಡ ಕೆರೆಯ ಹಿಂಬದಿಯ ಬನ್ನಿಮರಕ್ಕೆ ಬಂದು ಬನ್ನಿಯನ್ನು ಮುಡಿದು ನಂತರ ೧೧ ಗಂಟೆಯ ಸುಮಾರಿಗೆ ತನ್ನ ಗರ್ಭಗುಡಿಗೆ ಪ್ರವೇಶಿಸುವನು. ಹೀಗೆ ಆದಿಕೇಶವನು ದೇವಸ್ಥಾನಕ್ಕೆ ಬಂದು ನೆಲೆಸಿದ ಮೇಲೆ ಊರಲ್ಲಿಯ ಬ್ರಾಹ್ಮಣ ಜನಾಂಗದವರು(ಮೇಲ್ವರ್ಗದವರು) ಆದಿಕೇಶವ ದೇವರಿಗೆ ಬನ್ನಿ ಮುಡಿದ ನಂತರ ಊರಿನಲ್ಲಿರುವ ಇತರ ಜನರು ಬನ್ನಿಯನ್ನು ಕೊಡಲಿಕ್ಕೆ ಪ್ರಾರಂಭಿಸುವರು. ಈ ರೀತಿಯಾಗಿ ಆದಿಕೇಶವನ ಪಲ್ಲಕ್ಕಿಯ ಉತ್ಸವವು ಮಹಾನವಮಿಯ ದಿನದಂದು ನಡೆಯುತ್ತದೆ.

ಅದೇ ರೀತಿಯಾಗಿ ಬಸವಣ್ಣ ದೇವರ ಪಲ್ಲಕ್ಕಿ ಉತ್ಸವವ ಅದೇ ದಿನ ನಡೆಯುತ್ತದೆ. ೬–೩೦ರ ಸುಮಾರಿಗೆ ಊರಿನ ದೊಡ್ಡಕೇರಿಯ ಹತ್ತಿರವಿರುವ ಬನ್ನಿಮರಕ್ಕೆ ಹೋಗಿ ಬನ್ನಿ ಮುಡಿದ ನಂತರ ಕರೆಯ ಪಕ್ಕದಲ್ಲಿರುವ ಕನಕದಾಸರ ಗದ್ದುಗೆಗೆ ನಮಸ್ಕರಿಸಿ, ಹಣ್ಣುಕಾಯಿ ಮಾಡಿಸಿ, ನಂತರ ವೀರಭದ್ರಗುಡಿ ಮತ್ತು ಸಂಗಮೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿಯು ಬನ್ನಿಮುಡಿದು ಪೂಜೆ ಮಾಡಿದ ನಂತರ ಊರೊಳಗೆ ಮೆರವಣಿಗೆ ಹೋಗಿ ತನ್ನ ದೇವಸ್ಥಾನ್ಕಕೆ ೧೦ ಗಂಟೆಗೆ ಹೋಗುತ್ತದೆ.[೨೯]

ಕಳಗೊಂಡದಲ್ಲಿ ನಡೆಸುವ ಕುಂಬಾಭಿಷೇಕ ಕುರಿತ ನಂಬಿಕೆ ಮತ್ತು ಆಚರಣೆ

ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಕಳಗೊಂಡ ಗ್ರಾಮದಲ್ಲಿ ಬಸವ ಜಯಂತಿಯ ದಿನದಂದು ಬಸವೇಶ್ವರ ದೇವರ ಜಾತ್ರೆಯು ನಡೆಯುತ್ತದೆ. ಆ ದಿನ ಕುಂಭ ಹೊರುವ ಕಾರ್ಯಕ್ರಮವು ಸಹ ಜರುಗುತ್ತದೆ. ಅದೇ ದಿನ ಮಹಾವೀರನ ಪೂಜೆಯ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಂಡಿರುತ್ತಾರೆ. ಪ್ರತಿವರ್ಷ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಬಸವೇಶ್ವರ ಜಾತ್ರೆಯು ಅತ್ಯಂತ ವಿಜೃಂಭಣೆಯಿಂಧ ಊರಿನ ಸಕಲ ಸದ್ಭಕ್ತರೆಲ್ಲರು ಕೂಡಿಕೊಂಡು ಆ ದಿನ ಬಸವಣ್ಣನಲ್ಲಿರುವ ದೇವರ ರಥೋತ್ಸವವನ್ನು ಎಳೆಯುವುದು ವಿಶೇಷ. ಜಾತ್ರೆಯ ಹಿಂದಿನ ದಿನ ರಥವನ್ನು ಎಲ್ಲ ರೀತಿಯಿಂದ ಸಿದ್ಧಗೊಳಿಸಿ ತೇರಲ್ಲಿ ಬಸವಣ್ಣನವರ ಮೂರ್ತಿಯನ್ನು ಇಟ್ಟು, ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಅಲ್ಲಿ ದೇವತೆಗಳಿಗೆ ಪೂಜೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವರು. ಅದೇ ದಿನ ಊರಿನಲ್ಲಿಯ ಸುಮಂಗಲಿಯರು ಕುಂಭಗಳನ್ನು ಹೊತ್ತುಕೊಂಡು ಬಸವೇಶ್ವರರ ದೇವಸ್ಥಾನಕ್ಕೆ ಬರುತ್ತಾರೆ. ನಂತರ ಊರಿನ ಹಿರಿಯರು ಮತ್ತು ಸ್ವಾಮಿಗಳು

ಬಸವೇಶ್ವರರಿಗೆ ನಾಲ್ಕರಿಂದ ಐದು ಕುಂಭಗಳನ್ನು ತೆಗೆದುಕೊಂಡು ಬಸವೇಶ್ವರರಿಗ ಎರೆಯುವುದು. ನಂತರ ಉಳಿದ ಕುಂಭಗಳನ್ನು ಸ್ವಾಮಿಜಿಯವರ ಪಾದಗಳಿಗೆ ಎರೆಯುವುದರ ಮೂಲಕ ದೇವಸ್ಥಾನದಲ್ಲಿ ತಮ್ಮ ಬೇಡಿಕೆಗಳನ್ನು(ಇಷ್ಟಾರ್ಥಗಳನ್ನು) ಮನಸ್ಸಿನಲ್ಲಿ ಕೇಳಿಕೊಳ್ಳುತ್ತಾರೆ.

ಮತ್ತು ಅದೇ ದಿನ ಊರಿನ ಎಲ್ಲಾ ದೇವತೆಗಳಿಗೆ ಹೊಸ ಸೀರೆಯನ್ನು ಉಡಿಸಿ, ಉಡಿ ತುಂಬುವ ಕಾರ್ಯಕ್ರಮವು ಜರುಗುತ್ತದೆ. ಹೀಗೆ ಈ ಒಂದು ಜಾತ್ರೆಯು ನಡೆಯಬೇಕಾದರೆ ಊರಿನಲ್ಲಿ ಯಾರೊಬ್ಬರು ಕುಟ್ಟುವುದಿಲ್ಲ, ಬೀಸುವುದಿಲ್ಲ ಮತ್ತು ಹೊಲಗಳಲ್ಲಿ ಎತ್ತುಗಳನ್ನು ಹೂಡುವುದಿಲ್ಲ. ಈ ರೀತಿಯಾಗಿ ಎಲ್ಲಾ ಕಾರ್ಯಕ್ರಮಗಳು ಜರುಗುವುವು ಎಂದು ರುದ್ರಯ್ಯ ಹಿರೇಮಠರವರು ತಿಳಿಯಪಡಿಸುತ್ತಾರೆ.[೩೦]

ಶ್ರವಣಮಾಸದಲ್ಲಿ ಪ್ರತಿ ವರ್ಷ ಒಂದು ತಿಂಗಳ ಕಾಲ ಅಭಿಷೇಕ ಮಾಡುವ ಕಾರ್ಯಕ್ರಮವನನು ಹಮ್ಮಿಕೊಳ್ಳುತ್ತಾರೆ.

ಚಿಕ್ಕಬಾಸೂರು ಸಿದ್ದರಾಮೇಶ್ವರ ಜಾತ್ರೆ ಮತ್ತು ಉತ್ಸವ

ಪ್ರಸ್ತುತ ಚಿಕ್ಕ ಬಾಸೂರ ಎಂಬ ಗ್ರಾಮವು ಕಾಗಿನೆಲೆಯ ಹೋಬಳಿಯ ವ್ಯಾಪ್ತಿಯಲ್ಲಿ ಅಥವಾ ಪರಿಸರದಲ್ಲಿ ಕಂಡುಬಂದಿದ್ದು, ಈ ಊರು ಕಾಗಿನೆಲೆ ಹೋಬಳಿಯಲ್ಲಿಯ ಅತ್ಯಂತ ದೊಡ್ಡ ಗ್ರಾಮವಾಗಿದ್ದು, ಇಲ್ಲಿ ಸಿದ್ಧರಾಮೇಶ್ವರ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ಪ್ರತಿ ವರ್ಷವು ನಡೆಯುತ್ತದೆ. ಯುಗಾದಿ ಆಗಿ ೧೫ ದಿನ ಅಥವಾ ೬ ದಿನಗಳು ಆದ ನಂತರ ಈ ಒಂದು ಜಾತ್ರೆಯು ಜರುಗುತ್ತದೆ. ನಾಲ್ಕು ದಿನಗಳ ಕಾಲ ನಡೆಯುವ ಜಾತ್ರೆಯ ದಿವಸ ವೀರಭದ್ರೇಶ್ವರನ ಗುಗ್ಗಳವು ಸಹ ಅದೇ ದಿನ ನಡೆಯುತ್ತದೆ.

ಜಾತ್ರೆಯು ನಡೆಯುವ ಪೂರ್ವದಲ್ಲಿ ಊರಿನ ಹಿರಿಯರು ಎಲ್ಲರೂ ಒಟ್ಟುಗೂಡಿ ಜಾತ್ರೆಯನ್ನು ಯಾವ ದಿನ ನಡೆಸಬೇಕು, ಯಾವ ದಿನ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ಎಷ್ಟು ದಿನ ಕಾರ್ಯಕ್ರಮವನ್ನು ನೆರವೇರಿಸಬೇಕು, ಅದಕ್ಕೆ ಬೇಕಾದ ಎಲ್ಲಾ ರೀತಿಯ ಪೂರ್ವತಯಾರಿಯನ್ನು ಊರಿನ ಹಿರಿಯರು ಒಂದು ಸಭೆ ಕರೆದು ಚರ್ಚಿಸುತ್ತಾರೆ. ಅದಾದ ನಂತರ ಊರಿನ ಜನತೆಗೆ ಡಂಗುರವನನು ಸಾರಿಸುವುದರ ಮೂಲಕ ಇಂತಹ ದಿನ ಜಾತ್ರೆ ಎಂದು(ಸಾರಿಸಿ) ತಿಳಿಸುವರು. ಅದಾದ ನಂತರ ಯುಗಾದಿ ಆಗಿ ೧೫ ಅಥವಾ ೬ ದಿನಗಳ ನಂತರ ಜಾತ್ರೆಯನ್ನು ನಡೆಸುವರು. ಜಾತ್ರೆಯು ೪ ದಿನಗಳವರೆಗೆ ಒಂದೊಂದು ಕಾರ್ಯಕ್ರಮವೆಂಬಂತೆ ನಡೆಸುವರು. ಮೊದಲನೆಯ ದಿನ ಗಾಲಿ ಹಬ್ಬವನ್ನು ಆಚರಿಸುವರು. ಅಂದರೆ ತೇರುಗಳಿಗೆ ಗಾಲಿಯನ್ನು(ಸಣ್ಣ ಮತ್ತು ದೊಡ್ಡ ತೇರು) ಜೋಡಿಸುವುದು. ಆ ದಿನ ಅವುಗಳಿಗೆ ಪೂಜೆ ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವರು. ಬೆಳಿಗ್ಗೆ ೬ ಗಂಟೆಯಿಂದ, ಸಾಯಂಕಾಲದರೆಗೆ ಜರುಗುವುದು. ೨ನೇ ದಿನ ಸಣ್ಣ ತೇರನ್ನು ಎಲ್ಲ ರೀತಿಯಲ್ಲಿ ಶೃಂಗಾರಗೊಳಿಸಿ

ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸುವರು. ಆ ದಿನ ಮುತ್ತೈದೆಯರು ಕುಂಭ ಹೊರುವ ಕಾರ್ಯಕ್ರಮ ಜರುಗುತ್ತದೆ. ನಂತರ ೩ನೇ ದಿನ ದೊಡ್ಡ ತೇರನ್ನು ಎಳೆಯುವುದು ವಿಶೇಷ. ಈ ದಿನ ರಥದಲ್ಲಿ ಸಿದ್ಧರಾಮೇಶ್ವರ ಮೂರ್ತಿಯನ್ನು ಕೂಡ್ರಿಸಿ, ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುವರು. ಅದೇ ದಿನ ವೀರಭದ್ರದೇವರ ಗುಗ್ಗಳ ಕಾರ್ಯಕ್ರಮ ಎರಡೂ ಒಂದೇ ದಿನ ನಡೆಯುತ್ತದೆ. ಶುಕ್ರವಾರದಂದು ಆರತಿಯನ್ನು ತೆಗೆದುಕೊಂಡು ಊರಿನಲ್ಲಿಯ ಪ್ರಮುಖ ದೇವರುಗಳಿಗೆ ಉಡಿಯನ್ನು ತುಂಬುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವರು.

ಹೀಗೆ ೪ ದಿನಗಳ ಕಾಲ ನಡೆಯುವ ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ಜರುಗುತ್ತದೆ. ಮತ್ತು ಸುತ್ತಮುತ್ತಲಿನ ಹಳ್ಳಿಗಳಿಂದ ಸಿದ್ಧಾರಾಮೇಶ್ವರನ ಜಾತ್ರೆಗೆ ಭಕ್ತಾದಿಗಳು ತಂಡೋಪತಂಡವಾಗಿ ಆಗಮಿಸಿ, ದೇವರ ದರ್ಶನವನ್ನು ಪಡೆದುಕೊಂಡು, ಪ್ರಸಾದ ಸ್ವೀಕರಿಸಿ ಹೋಗುವರು. ಈ ರೀತಿಯಾಗಿ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ ಎಂದು ಎಸ್.ಎಸ್.ಮಠದ ಎಂಬ ಊರಿನ ಹಿರಿಯರ ಹಿರಿಯರು ತಿಳಿಯಪಡಿಸುವರು.

ಹನಮಂತ ದೇವರ ಕಾರ್ತಿಕೋತ್ಸವ ಸೊಡಂಬಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡುವ ಕಾಗಿನೆಲೆ ಪರಿಸರದಲ್ಲಿ ಕಂಡುಬರುವ ಸೊಡಂಬಿ ಎಂಬ ಗ್ರಾಮದಲ್ಲಿ ಹನಮಂತ ದೇವರ ಕಾರ್ತಿಕೋತ್ಸವ ಅತ್ಯಂತ ಸುಂದರವಾಗಿ, ವಿಜೃಂಭಣೆಯಿಂದ ಆಚರಿಸುವರು. ಪುಷ್ಯ ಮಾಸದಲ್ಲಿ ನಡೆಯುವಂತಹ ಈ ಕಾರ್ತಿಕೋತ್ಸವದ ದಿನ ದೇವಸ್ಥಾನದ ಎದುರಗಡೆ ಹಂದರವನ್ನು ಹಾಕಿ ದೇವಾಲಯವನ್ನು ಎಲ್ಲ ರೀತಿಯಿಂದಲೂ ಶೃಂಗಾರಗೊಳಿಸಿ, ಆ ದಿನ ಸಾಯಂಕಾಲ ದೇವಾಲಯ ಎದುರಗಡೆ ಊರಿನ ಜನರೆಲ್ಲರು ಒಟ್ಟುಗೂಡಿ ಸಾಲುಸಾಲಾಗಿ ಸುಮರು ೧೨ ಸಾವಿರಕ್ಕೂ ಹೆಚ್ಚು ದೀಪಗಳನ್ನು ಹಚ್ಚಿ, ದೇವಾಲಯವು ದೀಪಗಳಿಂದ ಕಂಗೊಳಿಸುವಂತೆ ಮಾಡುತ್ತಾರೆ.

ಪ್ರತಿವರ್ಷ ಶನಿವಾರದ ದಿನದಂದು ದೀಪೋತ್ಸವ ಕಾರ್ಯಕ್ರಮವನ್ನು ಕೈಗೊಂಡು ಅದೇ ದಿನ ಬಂದ ಭಕ್ತಾದಿಗಳಿಗೆಲ್ಲ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಿರುತ್ತಾರೆ. ಸುತ್ತಮುತ್ತಲಿನ ಹಳ್ಳಿಗಳಿಂದ ಹಲವಾರು ಜನ ಭಕ್ತಾದಿಗಳು ಹನುಮಂತ ದೇವರ ಕಾರ್ತಿಕೋತ್ಸವಕ್ಕೆ ಆಗಮಿಸಿ, ಹಣ್ಣು, ಕಾಯಿ, ಒಡೆಸಿ, ದೇವರಲ್ಲಿ ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಳ್ಳುವರು. ಈ ರೀತಿಯಾಗಿ ಅತ್ಯಂತ ಅದ್ದೂರಿಯಾಗಿ ವಿಜೃಂಭಣೆಯಿಂದ ಊರಿನ ಎಲ್ಲ ಜನರು ಪಟ್ಟಿಯನ್ನು ಹಾಕಿ ಕಾರ್ತಿಕೋತ್ಸವವನ್ನು ಅತ್ಯಂತ ಸಡಗರ, ಸಂಭ್ರಮದಿಂದ ಆಚರಣೆ ಮಾಡುವರು ಮತ್ತು ಅದೇ ದಿನ ಊರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಚಿಕ್ಕ ಮಕ್ಕಳಿಂದ ಹಾಡು, ಕುಣಿತ, ನಾಟಕ ಇತ್ಯಾದಿ ಕಾರ್ಯಕ್ರಮಗಳು ಸಹ ಜರುಗುತ್ತವೆ. ಒಟ್ಟನಲ್ಲಿ ಸೂಡಂಬಿಯ ಹನುಮಂತ ದೇವರ ಕಾರ್ತಿಕೋತ್ಸವ ವಿಜೃಂಭಣೆಯಿಂದ ನೆರವೇರುತ್ತದೆ ಎಂದು ಊರಿನ ಹಿರಿಯರಾದ ಮಲ್ಲಯ್ಯ, ಶಂಬಲಿಂಗಪ್ಪ ದೊಡ್ಮನಿಯವರು ತಿಳಿಸುತ್ತಾರೆ.[೩೨]

ಕಲ್ಮೇಶ್ವರ ಜಾತ್ರೆ ಮತ್ತು ಉತ್ಸವ ಮತ್ತೂರ

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೊಳಪಡುವ ಮತ್ತೂರ ಗ್ರಾಮವು ಕಾಗಿನೆಲೆ ಪರಿಸರದಲ್ಲಿ ಕಂಡುಬರುತ್ತದೆ. ಈ ಗ್ರಾಮದಲ್ಲಿ ಪ್ರತಿ ವರ್ಷವು ಕಲ್ಲೇಶ್ವರ ದೇವರ ಜಾತ್ರೆ ಮತ್ತು ಉತ್ಸವವು ನಡೆದುಕೊಂಡು ಬಂದಿದೆ. ಮೂರರಿಂದ ನಾಲ್ಕು ದಿನಗಳ ಕಾಲ ನಡೆಯುವ ಈ ಜಾತ್ರೆಯು ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ನಡೆಯುತ್ತದೆ. ಊರಿನ ಎಲ್ಲ ವರ್ಗದ ಜನರು ಒಟ್ಟುಗೂಡಿ ಜಾತ್ರೆಯ ಹಿಂದಿನ ದಿನ ಎಲ್ಲ ರೀತಿಯಿಂದಲೂ ತಯಾರಿಗೊಳಿಸಿ ದೇವಸ್ಥಾನ ಆವರಣದ ಸುತ್ತ ಮುತ್ತಲು ಹಂದರವನ್ನು ಹಾಕಿ ಜಾತ್ರೆಯನ್ನು ಯಾವುದೇ ವಿಘ್ನಗಳು ಬಾರದ ರೀತಿಯಲ್ಲಿ ನಡೆಸುವುದು. ಜಾತ್ರೆಯ ಮೊದಲನೆಯ ದಿನ ಕಂಕಣಧಾರಣ ಕಾರ್ಯಕ್ರಮವನ್ನು ನಡೆಸುವುದು, ಮರುದಿನ ಶಿಬಾರದ ಜಾತ್ರೆಯನ್ನು ನಡೆಸುವರು. ದೇವಾಲಯವನ್ನು ಶೃಂಗಾರಗೊಳಿಸಿ ಎಲ್ಲ ಪೂಜಾಕಾರ್ಯಗಳನ್ನು ಕೈಗೊಳ್ಳುವರು. ಈ ಕಾರ್ಯಕ್ರಮವನ್ನು ಭಾನುವಾರದ ದಿನದಂದು ನಡೆಸುವರು. ೩ನೇ ದಿನ ಹೂವಿನ ತೇರನ್ನು ಸೋಮವಾರದಂದು ಎಳೆಯುವರು. ನಾಲ್ಕನೆಯ ದಿನ ದೋಡ ತೇರು ಎಳೆಯುವರು. ಈ ದಿನ ದೊಡ್ಡ ತೇರಿನಲ್ಲಿ ದೇವರ ಮೂರ್ತಿಯನ್ನು ಇಟ್ಟು ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸುವರು. ಆ ಸಂದರ್ಭದಲ್ಲಿ ಸುಮಂಗಲಿಯರು ಕುಂಭಗಳನ್ನು ಹೊರುವುದು, ಆರತಿಗಳನ್ನು ಹಿಡಿದುಕೊಂಡು ಬರುವುದು ವಿಶೇಷ. ಅಷ್ಟೇ ಅಲ್ಲದೇ ಅದೇ ದಿನ ವೀರಭದ್ರದೇವರ ಗುಗ್ಗಳವು ಸಹ ನಡೆಯುತ್ತದೆ.

ದೊಡ್ಡ ತೇರು ಎಳೆಯುವ ಸಂದರ್ಭದಲ್ಲಿ ಅಗ್ನಿಕೊಂಡದಲ್ಲಿ ಬೆಂಕಿಯನ್ನು ತುಳಿಯುವ ಪದ್ಧತಿ ಕಂಡುಬಂದಿದೆ. ಅಂದರೆ ದೇವರಲ್ಲಿ ಯಾರು ಬೇಡಿಕೊಳ್ಳುತ್ತಾರೆಯೋ ಅಂತವರು ತಮ್ಮ ಇಷ್ಟಾರ್ಥಗಳು ಅಥವಾ ಬೇಡಿಕೆಗಳು ಈಡೇರಿದರೆ ಅದಕ್ಕಾಗಿ ತಮ್ಮ ಹರಕೆಯನ್ನು ತೀರಿಸಲು ಬೆಂಕಿಯಲ್ಲಿ ಹಾರುವುದು, ಬೆಂಕಿಯನ್ನು ತುಳಿಯುವ ಪದ್ಧತಿಯು ಆ ದಿನ ನಡೆಯುತ್ತದೆ.

ಹೀಗೆ ನಾಲ್ಕು ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ಸುಂದರವಾಗಿ ಕಲ್ಮೇಶ್ವರ ದೇವರ ಜಾತ್ರೆಯು ನಡೆಯುತ್ತದೆ ಎಂದು ಊರ ಹಿರಿಯರು ತಿಳಿಸುತ್ತಾರೆ.

ಬಡಮಲ್ಲಿಯ ಕರಿಬಸವೇಶ್ವರ ಕುಂಭೋತ್ಸವ

ಪ್ರಸ್ತುತ ಕಾಗಿನೆಲೆಯ ಪರಿಸರಕ್ಕೆ ಒಳಪಡದ ಬಡಮಲ್ಲಿ ಗ್ರಾಮದಲ್ಲಿ ಕರಿಬಸವೇಶ್ವರ ದೇವರ ಕುಂಭೋತ್ಸವವನ್ನು ಮಾಡುವುದು ವಿಶೇಷವಾಗಿದೆ. ಅಂದರೆ ಕೇವಲ ಒಂದು ದಿನ ನಡೆಯುವ ಉತ್ಸವವು ಅತ್ಯಂತ ಸುಂದರವಾಗಿ ನಡೆಯುತ್ತದೆ. ಶಿವರಾತ್ರಿಯಂದು ನಡೆಯುವ ಈ ಉತ್ಸವವು ಆ ದಿನ ಸಂಜೆ ಊರಲ್ಲಿ ಎಲ್ಲರೂ ದೇವಸ್ಥಾನಕ್ಕೆ ಬಂದು ರಾತ್ರಿ ಭಜನೆಯನ್ನು ಹಚ್ಚಿ, ರಾತ್ರಿಯಿಡಿ ಅಂದರೆ ಬೆಳಗಿನವರೆಗೂ ಭಜನೆ ಹಚ್ಚಿ, ಯಾರು ನಿದ್ರೆಯನ್ನು ಮಾಡದೆ ರಾತ್ರಿಯಿಡಿ ಗಂಟೆಯನ್ನು ಬಾರಿಸುವರು. ದೇವಸ್ಥಾನಕ್ಕೆ ದೀಪಗಳನ್ನು ಹಚ್ಚಿ ದೀಪೋತ್ಸವವನ್ನು

ಆಚರಿಸುವರು. ಬೆಳಿಗ್ಗೆ ಸುಮಂಗಲಿಯರು ಕುಂಭ ಹೊರುವ ಕಾರ್ಯಕ್ರಮವನ್ನು ಏರ್ಪಡಿಸಿ, ಮುತ್ತೈದೆಯರಿಂದ ಕುಂಭಗಳನ್ನು ಹೊರಿಸಿ, ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಊರಲ್ಲಿಯ ದೇವರುಗಳಿಗೆ ಪೂಜೆಯನ್ನು ಸಲ್ಲಿಸುತ್ತಾ ಕರಿಬಸವೇಶ್ವರ ದೇವಸ್ಥಾನಕ್ಕೆ ಆಗಮಿಸಿ, ಪೂಜೆಯನ್ನು ಸಲ್ಲಿಸುವುದು ವಿಶೇಷವಾಗಿದೆ.[೩೩]

ಅಡಿಟಿಪ್ಪಣಿಗಳು

೧. ಮಂಜುನಾಥ ಬೇವಿನಕಟ್ಟಿ, ೨೦೦೭, ಕನ್ನಡ ಜನಪದ ನಂಬಿಕೆಗಳು, ಪು.೧೩೨

೨. ಸಂತೋಷ ಚೊಕ್ಕಾಡಿ, ೧೯೮೮, ಕೃಷಿ ನಂಬಿಕೆಗಳು, ಪು.೩೯

೩. ರಾಜೇಂದ್ರ ಡಿ.ಆರ್., ೧೯೯೩, ಜನಪದ ಸಮನ್ವಯ, ಪು.೨೭-೩೧

೪. ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳ ಮೂಲ, ಪು.೭೧

೫. ಜವರೇಗೌಡ ದೇ., ಜಾನಪದ ಮಹಾ ಸಂಪುಟ, ಪು.೩೬೦

೬. ಭಟ್ ಎ.ಎನ್., ಭಾರತೀಯ ಹಬ್ಬಗಳ ವೈಶಿಷ್ಟ್ಯ, ಪು.೧

೭. ಹೊರೆಯಾಲ ದೊರೆಸ್ವಾಮಿ, ಕಾಗಿನೆಲೆ, ಪು.೮೧

೮. ಅದೇ, ಪು.೮೨

೯. ವೇದಾವತಿ, ಕಣಕಟ್ಟೆ ಪರಿಸರದ ಸಾಂಸ್ಕೃತಿ ಅಧ್ಯಯನ, ಪು.೧೧೨

೧೦. ಹೊರೆಯಾಲ ದೊರೆಸ್ವಾಮಿ, ಕಾಗಿನೆಲೆ, ಪು.೮೨

೧೧. ಅದೇ, ಪು.೮೩

೧೨. ಅದೇ, ಪು.೮೪

೧೩. ಅದೇ, ಪು.೮೪

೧೪. ಅದೇ, ಪು.೮೫

೧೫. ಅದೇ, ಪು.೮೬

೧೬. ಅದೇ, ಪು.೮೭

೧೭. ಅದೇ, ಪು.೮೮

೧೮. ವೇದಾವತಿ, ಪೂರ್ವೋಕ್ತ, ಪು.೧೧೨

೧೯. ಹೊರೆಯಾಲ ದೊರೆಸ್ವಾಮಿ, ಕಾಗಿನೆಲೆ, ಪು.೮೯

೨೦. ಅದೇ, ಪು.೯೦

೨೧. ವೇದಾವತಿ, ಪೂರ್ವೋಕ್ತ, ಪು.೧೧೨

೨೨. ಜವರೇಗೌಡ, ಪೂರ್ವೋಕ್ತ, ಪು.

೨೩. ಅರ್ಚಕರು, ಕನಕದಾಸ ಗದ್ದುಗೆ ಅವರ ಮಾಹಿತಿ

೨೪. ಸಂಗನ ಬಸಯ್ಯ ಎಸ್.ಕೋಡೆಕಲ್ಲಮಠ, ಕಾಗೆನೆಲೆ, ಪು.೨೮-೨೯

೨೫. ಅದೇ, ಪು.೩೮

೨೬. ಅದೇ, ಪು.೩೯

೨೭. ಅದೇ, ಪು.೪೨

೨೮. ಅದೇ, ಪು.೪೩

೨೯. ಶರಣಪ್ಪ ಕೊರಲಿರವರು ನೀಡಿದ ಮಾಹಿತಿ

೩೦. ರುದ್ರಯ್ಯ ಹಿರೇಮಠ ಅವರು ನೀಡಿದ ಮಾಹಿತಿ

೩೧. ಅರ್ಚಕರು, ಸಿದ್ಧರಾಮೇಶ್ವರ ದೇವಾಸ್ಥಾನ, ಚಿಕ್ಕಬಾಸೂರು

೩೨. ಮಲ್ಲಯ್ಯ ಶಂಭುಲಿಂಗಪ್ಪ ದೊಡ್ಡಮನಿ ಅವರ ಮಾಹಿತಿ

೩೩. ಹನುಮಂತಪ್ಪ ಅವರು ನೀಡಿದ ಮಾಹಿತಿ.

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಪ್ರಾಚೀನ ಕಾಲದಿಂದಲೂ ಭಾರತವು ಸಂಸ್ಕೃತಿ ಮತ್ತು ಐತಿಹಾಸಿಕತೆಯನ್ನು ಹೊಂದಿರುವ ಮತ್ತು ಅದಕ್ಕಾಗಿಯೇ ಹೆಸರುವಾಸಿಯಾಗಿದ್ದು ತನ್ನದೇ ಆದಂತಹ ಮಹತ್ವದ ಸ್ಥಾನವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ. ಇದರಲ್ಲಿ ಕರ್ನಾಟಕ ರಾಜ್ಯವೂ ಕೂಡ ಒಂದು. ಹೀಗೆ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯು ಒಂದು ಸನಾತನ ವೃಕ್ಷವಿದ್ದಂತೆ. ಇಲ್ಲಿ ಅನೇಕ ಅರಸಮನೆತನಗಳು ಆಡಳಿತ ನಡೆಸಿವೆ. ಅಷ್ಟೇ ಅಲ್ಲದೇ ಇಲ್ಲಿನ ಸಂಸ್ಕೃತಿ, ಆಚಾರ, ವಿಚಾರ, ಧಾರ್ಮಿಕತೆಯು ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಇಲ್ಲಿನ ದೇವಾಲಯಗಳು ಶಾಸನಗಳ ಮೂಲಕ ತಿಳಿಯಪಡಿಸುತ್ತದೆ. ಇಂತಹ ಪ್ರದೇಶದಲ್ಲಿ ಪಾರಂಪರಿಕ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಕಾಗಿನೆಲೆ ಪರಿಸರವು ಕೂಡಾ ಒಂದಾಗಿದೆ. ಇದರ ಅಧ್ಯಯನದ ವ್ಯಾಪ್ತಿಯಲ್ಲಿ ಪ್ರಾಚೀನ ದೇವಾಲಯಗಳು, ಮೂರ್ತಿಶಿಲ್ಪಗಳು, ಶಿಲಾಶಾಸನಗಳು, ವೀರಗಲ್ಲು, ಮಹಾಸತಿಕಲ್ಲು, ನಿಷೀದಿಗಲ್ಲು ಮುಂತಾದವುಗಳು ಇಂದಿಗೂ ತಮ್ಮ ಸಂಸ್ಕೃತಿಯ ಭೂತಕಾಲದ ವಿಚಾರಗಳನ್ನು ತಿಳಿಸುವ ಮೂಲಕ ಮೂಲ ಸಾಕ್ಷಿಗಳಾಗಿ ಪ್ರತಿಬಿಂಬಿಸುತ್ತದೆ.

ಪ್ರಸ್ತುತ ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಅಧ್ಯಯನ ಎಂಬ ಪ್ರಬಂಧವು ಕಾಗಿನೆಲೆ ಪರಿಸರದ ಸಂಸ್ಕೃತಿಯನ್ನು ಮತ್ತು ಅದರ ಐತಿಹಾಸಿಕತೆಯ ಪರಂಪರೆಯನ್ನು ಕುರಿತು ತಿಳಿಯಪಡಿಸುವ ಅಧ್ಯಾಯವಾಗಿದೆ. ಹೀಗಾಗಿ ಕಾಗಿನೆಲೆ ಪರಿಸರದ ಕುರಿತಂತೆ ಇದುವರೆಗೂ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕುರಿತು ಯಾವುದೇ ಅಧ್ಯಯನಗಳು ನಡೆದಿಲ್ಲವಾದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಈ ಪರಿಸರದ ಸ್ಥಳೀಯ ಚರಿತ್ರೆಯನ್ನು ವಿಶ್ಲೇಷಣಾತ್ಮಕವಾಗಿ ಹಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಹಿನ್ನೆಲೆಯಲ್ಲಿ ವ್ಯಾಪಕವಾದ ಕ್ಷೇತ್ರ ಕಾರ್ಯವನ್ನು ಕೈಗೊಂಡು ಕಾಗಿನೆಲೆ ಪರಿಸರದ ಸಂಸ್ಕೃತಿಯನ್ನು ಈ ಪ್ರಬಂಧದಲ್ಲಿ ಪ್ರತಿಬಿಂಬಿಸಲಾಗಿದೆ. ಇದನ್ನು ಅರಿಯಲು ಇಲ್ಲಿನ ದೇವಾಲಯಗಳು, ಮೂರ್ತಿ ಶಿಲ್ಪಗಳು, ಶಾಸನಗಳು ಪ್ರಮುಖ ಆಕರಗಳಾಗಿವೆ. ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸವೆಂದರೆ ಆ ಪ್ರದೇಶದ ಅಥವಾ ಸಮಾಜದ ಜನರ ಜೀವನ ವಿಧಾನ ಆಗಿದೆ, ತಮ್ಮ ಬದುಕಿನಲ್ಲಿ ಅನುಸರಿಸಿದ ಧರ್ಮ, ಕಟ್ಟಿದಕಲೆ, ಸಮಾಜದ

ವೈವಿಧ್ಯತೆ, ಮುಂತಾದವುಗಳ ವಿವರಣೆಯಾಗಿದೆ. ಒಟ್ಟಾರೆಯಾಗಿ ಈ ಪರಿಸರದ ಚರಿತ್ರೆಯನ್ನು ಸಮಗ್ರವಾಗಿ ರಚಿಸುವ ಸಲುವಾಗಿ ಸೂಕ್ಷ್ಮ ಸಂಗತಿಗಳನ್ನು ಅರಿಯುವ ಪ್ರಯತ್ನವನ್ನು ಮಾಡಲಾಗಿದೆ. ಹೀಗಾಗಿ ಕ್ಷೇತ್ರ ಕಾರ್ಯದ ಮೂಲಕ ಸಮಗ್ರ ಚಿತ್ರಣವನ್ನು ನಿರೂಪಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಉತ್ತರ ಕರ್ನಾಟಕದ ಹೆಬ್ಬಾಗಿಲು ಆಗಿರುವ ಹಾವೇರಿ ಜಿಲ್ಲೆಯು ಏಳು ತಾಲೂಕುಗಳನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನದ ಪ್ರದೇಶವಾದ ಕಾಗಿನೆಲೆಯು ಬ್ಯಾಡಗಿ ತಾಲೂಕಿನಲ್ಲಿ ಕಂಡುಬರುತ್ತದೆ. ಭೌಗೋಳಿಕವಾಗಿ ವಿಸ್ತಾರವಾದ ಪ್ರದೇಶವನ್ನು ಹೊಂದಿ, ನೈಸರ್ಗಿಕ ಸಂಪನ್ಮೂಲಗಳನ್ನು ತನ್ನ ಮಡಿಲಿನಲ್ಲಿ ಉಳಿಸಿಕೊಂಡಿದೆ. ಇವು ಈ ಪರಿಸರವನ್ನು ಅಧ್ಯಯನ ಮಾಡಲಿಕ್ಕೆ ಹಾಗೂ ಶ್ರೀಮಂತಗೊಳಿಸಲು ಪೂರಕವಾಗಿದೆ. ಕಾಗಿನೆಲೆಯು ಭೌಗೋಳಿಕವಾಗಿ ಉತ್ತಮ ವಾಯುಗುಣ ಅಷ್ಟೇ ಫಲವತ್ತಾದ ಮಣ್ಣಿನಿಂದ ಕೂಡಿದ್ದು ಕೃಷಿ ಚಟುವಟಿಕೆಗೆ ಹೆಚ್ಚು ಉತ್ತಮವಾಗಿದೆ.

ಪ್ರಸ್ತುತ ಅಧ್ಯಯನದ ಪ್ರದೇಶವು ಐತಿಹಾಸಿಕವಾಗಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಪ್ರಾಗೈತಿಹಾಸಿಕ ಕಾಲದಿಂದಲೇ ಈ ಒಂದು ಪ್ರದೇಶದಲ್ಲಿ ಮಾನವನ ಚಟುವಟಿಕೆಯ ಕುರುಹುಗಳು ಇದ್ದ ಬಗ್ಗೆ ನಮಗೆ ಅಲ್ಲಲ್ಲಿ ಉಲ್ಲೇಖಗಳು ದೊರಕುತ್ತವೆ. ಕಾಗಿನೆಲೆ ಪರಿಸರದ ಕುಮ್ಮೂರಿನಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಉಪಕರಣಗಳು ದೊರೆತಿವೆ. ಅಲ್ಲದೆ ಕೆರೂಡಿ ಮತ್ತು ತಡಸಗಳಲ್ಲಿಯೂ ಸಹ ಬೃಹತ್ ಶಿಲಾ ಸಂಸ್ಕೃತಿಯ ಗೋರಿನೆಲೆಯು ಮತ್ತು ಉಪಕರಣಗಳನ್ನು ಬೆಳಕಿಗೆ ತಂದಿದ್ದಾರೆ. ಇತ್ತೀಚಿಗೆ ನಾನು ಕ್ಷೇತ್ರ ಕಾರ್ಯ ಕೈಗೊಂಡಂತಹ ಸಂದರ್ಭದಲ್ಲಿ ಅತ್ತಿಕಟ್ಟಿಯ ರಾಮಲಿಂಗೇಶ್ವರ ದೇವಾಲಯದ ಎದುರುಗಡೆ ಕೆಲವೊಂದು ಶಿಲಾಯುಗಕ್ಕೆ ಸಂಬಂಧಪಟ್ಟಂತೆ ಆಯುಧೋಪಕರಣಗಳು ಕಂಡುಬಂದಿವೆ. ಅವುಗಳನ್ನು ಪ್ರತಿಬಿಂಬಿಸಬೇಕಾಗಿದೆ. ಈ ರೀತಿಯಾಗಿ ಕಾಗಿನೆಲೆ ಪರಿಸರದ ಸಂಸ್ಕೃತಿಯನ್ನು ಈ ಮೇಲಿನ ಎಲ್ಲಾ ಅಂಶಗಳಿಂದ ತಿಳಿಯಬಹುದಾಗಿದೆ.

ಈ ಪ್ರದೇಶದ ರಾಜಕೀಯ ಇತಿಹಾಸವು ಶಾತವಾಹನರ ಅರಸರ ಕಾಲದಿಂದ ಆರಂಭವಾಗುತ್ತದೆ. ಆದರೆ ಈ ವಂಶದ ರಾಜರ ಆಳ್ವಿಕೆಯ ಬಗ್ಗೆ ಕಾಗಿನೆಲೆ ಪರಿಸರದಲ್ಲಿ ಆಳ್ವಿಕೆ ನಡೆಸಿದ್ದಾರೆ ಎಂಬುದಕ್ಕೆ ಯಾವುದೇ ಮಾಹಿತಿ, ಆಧಾರಗಳಿಲ್ಲದಿದ್ದರೂ ಸಹ ಸುತ್ತಮುತ್ತಲಿನ ಕೆಲವೊಂದು ಪರಿಸರದಲ್ಲಿ ಇವರ ಆಡಳಿತ ನಡೆಸಿದ್ದಾರೆ ಎಂಬುದಕ್ಕೆ ಮಾಹಿತಿ ತಿಳಿದು ಬರುತ್ತದೆ. ಬನವಾಸಿಯ ಕದಂಬರು, ಹಾನಲ್ ಕದಂಬರು ಬಂಕಾಪುರದ ಕದಂಬರು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ.

ಬಾದಾಮಿ ಚಾಲುಕ್ಯರ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಪರಿಸರಲದಲ್ಲಿ ಯವುದೇ ಒಂದು ಲಿಖಿತ ಆಧಾರ ಅಥವಾ ಮಾಹಿತಿ ಲಭ್ಯವಾಗಿಲ್ಲ. ಅವರ ನಂತರ ಬರುವ ರಾಷ್ಟ್ರಕೂಟರು ಈ ಪ್ರದೇಶದಲ್ಲಿ ತಮ್ಮದೇ ಆದಂತಹ ಪ್ರಭಾವವನ್ನು ಬೀರಿದ್ದಾರೆ. ರಾಷ್ಟ್ರಕೂಟರ ಅರಸರಾದ

ಅಮೋಘವರ್ಷ, ಮುಮ್ಮಡಿ ಕೃಷ್ಣ, ಅಕಾಲವರ್ಷ ಇವರ ಶಾಸನಗಳು ಈ ಪರಿಸರದಲ್ಲಿ ಕಂಡುಬಂದಿರುವುದರಿಂದ ಇವರು ಆಳ್ವಿಕೆಯನ್ನು ಕೈಗೊಂಡಿರುವುದು ಕಂಡುಬರುತ್ತದೆ. ಪಲಸಿಗೆ ೧೨೦೦೦ ದ ಆಡಳಿತ ವಿಭಾಗವು ಇವರಿಗೆ ಸಂಬಂಧಸಿದ್ದಾಗಿದೆ. ಇವರ ನಂತರ ಬರುವ ಕಲ್ಯಾಣ ಚಾಲುಕ್ಯರು ಆಳ್ವಿಕೆ ಕೈಗೊಂಡರು. ಇವರ ಆಳ್ವಿಕೆಯ ಪ್ರಮುಖ ಅರಸರು ಇಮ್ಮಡಿ ತೈಲಪ ವಿಕ್ರಮಾದಿತ್ಯ. ಪ್ರಸಿದ್ಧ ಅರಸರ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶವು ಅನೇಕ ದೇವಾಲಯಗಳಲ್ಲಿನ ಶಾಸನಗಳು, ಶಿಲ್ಪಗಳು, ಇವರ ಕಾಲದಲ್ಲಿ ನಿರ್ಮಾಣವಾದವು. ಕಲಚೂರಿಗಳ ಕಾಲದಲ್ಲಿ ಈ ಪ್ರದೇಶವು ಹೆಚ್ಚು ಸಮೃದ್ಧಿಯನ್ನು ಹೊಂದಿದ್ದರ ಬಗ್ಗೆ ಮಾಹಿತಿ ದೊರೆಯುತ್ತದೆ. ಕಲ್ಯಾಣಿ ಚಾಲುಕ್ಯರ ನಂತರ ದೇವಗಿರಿಯ ಯಾದವರು (ಸೇವಣರು) ಪ್ರಾಬಲ್ಯಕ್ಕೆ ಬಂದರು. ಇವರು ಆಳ್ವಿಕೆ ಕೈಗೊಂಡಿರುವುದಕ್ಕೆ ಪ್ರಸ್ತುತ ಪರಿಸರದಲ್ಲಿ ಕಾಗಿನೆಲೆ ಬಡಮಲ್ಲಿ, ಮಲ್ಲೂರು ಇಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯಪಡುತ್ತದೆ. ನಂತರ ಹೊಯ್ಸಳರ ಆಳ್ವಿಕೆಯು ಈ ಪ್ರದೇಶದಲ್ಲಿ ಕೈಗೊಂಡಿರುವುದಕ್ಕೆ ಪ್ರಸ್ತುತ ಅಧ್ಯಯನದ ಪರಿಸರದಲ್ಲಿ ಯಾವುದೇ ಶಾಸನಗಳು ದೊರೆತಿಲ್ಲ. ನಂತರ ಅಸ್ತಿತ್ವಕ್ಕೆ ಬಂದಂಥ ಮನೆತನ ವಿಜಯನಗರ. ಈ ಮನೆತನದ ಅರಸರು ಈ ಪರಿಸರದಲ್ಲಿ ಆಳ್ವಿಕೆ ನಡೆಸಿದ್ದಾರೆ ಎಂಬುದಕ್ಕೆ ಇಲ್ಲಿ ದೊರೆತಿರುವ ಕೆಲವೊಂದು ಶಾಸನಗಳಿದ ತಿಳಿದುಬರುತ್ತದೆ.

ಇಲ್ಲಿನ ಪ್ರತಿಯೊಂದು ಗ್ರಾಮದ ಸ್ಥಳನಾಮ ಮತ್ತು ಸ್ಥಳ ಪುರಾಣಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿವೆ. ಗ್ರಾಮಗಳು ಪ್ರಾಚೀನ ಕಾಲದಲ್ಲಿ ಯಾವ ಹೆಸರುಗಳನ್ನು ಪಡೆದವು ಏಕೆ ಪಡೆದವು ಇಂದಿನ ಹೆಸರೇನು ಹೀಗೆ ಮುಂತಾದ ವಿಷಯಗಳನ್ನು ಚರ್ಚಿಸಿದ್ದು ಸ್ಥಳಪುರಾಣ ಹಿಂದೆ ನಡದ ಘಟನೆಗಳು, ದೇವರ ಅವತಾರ ಕಥೆಗಳು, ಕುರಿತು ಚರ್ಚಿಸಲಾಗಿದೆ ಇವೆಲ್ಲವೂ ಇತಿಹಾಸವನ್ನು ರಚಿಸುವಲ್ಲಿ ಸಹಾಯಕಾರಿಯಾಗಿವೆ. ಉತ್ತಮ ಕಲೆ ಮತ್ತು ವಾಸ್ತುಶಿಲ್ಪವನ್ನು ಹೊಂದಿರುವ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳು ಇಲ್ಲಿವೆ. ಕರ್ನಾಟಕದ ವಾಸ್ತುಶಿಲ್ಪದ ಎಲ್ಲ ವೈಶಿಷ್ಟ್ಯಗಳನ್ನು ಈ ಪ್ರದೇಶವು ಮೈಗೂಡಿಸಿಕೊಂಡಿದೆ. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಪ್ರಸಿದ್ಧಿಗೊಂಡ ಈ ಪ್ರದೇಶವು ಅಸಂಖ್ಯ ದೇವಾಲಯ ಶಿಲ್ಪಗಳನ್ನು ಹೊಂದಿರುವ ಕಲಾ ಕೇಂದ್ರವಾಗಿದೆ. ಈ ಅಂಶವನ್ನು ಪರೀಕ್ಷಿಸಿದಾಗ ಹೆಚ್ಚು ದೇವಾಲಯಗಳನ್ನು ಕಲ್ಯಾಣ ಚಾಲುಕ್ಯರ ಕಾಲದಲ್ಲಿಯೇ ನಿರ್ಮಾಣವಾದಂತವುಗಳಾಗಿವೆ. ಇವೆಲ್ಲವುಗಳು ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಕಾಗಿನೆಲೆ ಪರಿಸರದಲ್ಲಿ ಕಂಡುಬರುತ್ತವೆ. ಇಲ್ಲಿನ ದೇವಾಲಯಗಳು ಏಕಕೂಟ ದ್ವಿಕೂಟ, ಮತ್ತು ತ್ರಿಕೂಟ ದೇವಾಲಯಗಳು ಕಂಡುಬಂದಿದ್ದು ಈ ಪರಿಸರದಲ್ಲಿ ಏಕಕೂಟ ದೇವಾಲಯಗಳೆ ಅತಿ ಹೆಚ್ಚು ಕಂಡುಬರುತ್ತವೆ. ಕಾಗಿನೆಲೆಯ ಕಾಳಹಸ್ತೇಶ್ವರ ದೇವಾಲಯ, ವೀರಭದ್ರ ದೇವಾಲಯ, ಶ್ರೀ ಲಕ್ಷ್ಮೀನರಸಿಂಹಾಧಿಕೇಶವ ದೇವಾಲಯ, ಬಡಮಲ್ಲಿಯ ರಾಮಲಿಂಗೇಶ್ವರ ದೇವಾಲಯ, ಕೆರೂಡಿಯ ಕಲ್ಮೇಶ್ವರ ದೇವಾಲಯ, ತಡಸದ ಕಲ್ಲಪ್ಪನ ದೇವಾಲಯ, ಘಾಳಪುಜಿಯ ರಾಮಲಿಂಗೇಶ್ವರ ದೇವಾಲಯ ಇನ್ನು ಮುಂತಾದ ಏಕಕೂಟ ದೇವಾಲಯಗಳನ್ನು ಕಾಣಬಹುದು. ದ್ವಿಕೂಟ

ದೇವಾಲಯವೆಂದರೆ, ಹಿರೇಹಳ್ಳಿಯ ರಾಮಲಿಂಗ ದೇವಾಲಯ, ತ್ರಿಕೂಟ ದೇವಾಲಯವೆಂದರೆ ಮತ್ತೂರಿನ ಕಲ್ಮೇಶ್ವರ ದೇವಾಲಯವಾಗಿದೆ. ಹೀಗೆ ಇನ್ನು ಅನೇಕ ದೇವಾಲಯಗಳು ಸಂಪೂರ್ಣವಾಗಿ ಬಿದ್ದು ಹೋಗಿರುವದನ್ನು ಕಾಣಬಹುದು. ಇನ್ನು ಕೆಲವು ದೇವಾಲಯಗಳು ಬೀಳುವ ಹಂತವನ್ನು ತಲುಪಿದ್ದು ಇನ್ನು ಕೆಲವು ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡಿದ್ದಾರೆ. ಒಟ್ಟಿನಲ್ಲಿ ಪ್ರಾಚೀನ ದೇವಾಲಯಗಳನ್ನು ಪ್ರಾಚ್ಯವಸ್ತು ಸಂರಕ್ಷಣಾಲಯದವರು ಮತ್ತು ಈ ಪ್ರದೇಶದ ಜನರು ಕ್ಷೇತ್ರದ ಶಾಸಕರ ಸಮ್ಮುಖದಲ್ಲಿ ಇವುಗಳ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡುವುದು ಅತಿ ಅವಶ್ಯಕವಾಗಿದೆ. ಈ ಪ್ರದೇಶದಲ್ಲಿ ದೊರೆಯುವ ಶಿಲ್ಪಗಳು ತಮ್ಮದೇ ಆದಂತಹ ವೈಶಿಷ್ಟ್ಯತೆಯಿಂದ ಕೂಡಿದೆ. ಮೂರ್ತಿ ಶಿಲ್ಪವು ಧಾರ್ಮಿಕ ಮತ್ತು ಲೌಕಿಕ ಸ್ಮಾರಕ ಶಿಲ್ಪಗಳನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ಅನೇಕ ಧರ್ಮಗಳು ಬೆಳೆದು ಬಂದಿದ್ದರಿಂದ ಆಯಾ ಧರ್ಮಕ್ಕೆ ಸಂಬಂಧಪಟ್ಟ ದೇವಾಲಯ ಮತ್ತು ಮೂರ್ತಿ ಶಿಲ್ಪಗಳ ನಿರ್ಮಾಣವಾಗಿರುವುದನ್ನು ಗಮನಿಸಬಹುದಾಗಿದೆ.

ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ನಂಬಿಕೆ ಮತ್ತು ಆಚರಣೆಯು ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದ ಒಂದು ಆಚಾರಯುಕ್ತವಾದ ಸಂಪ್ರದಾಯವಾಗಿದೆ. ಈ ಒಂದು ಆಚರಣೆ ಗ್ರಾಮೀಣ ಭಾಗದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಗ್ರಾಮೀಣ ಜನರು ತಮ್ಮ ಸುಖ–ಸಂತೋಷಕ್ಕೋಸ್ಕರ ಹಲವಾರು ಆಚರಣೆಗಳನ್ನು ಆಚರಿಸುತ್ತಾರೆ. ದೇವರಿಗೆ ಹರಕೆ ಮಾಡಿಕೊಳ್ಳುವುದರಿಂದ ರೋಗ ರುಜಿನಗಳನ್ನು ದೇವರು ವಾಸಿಮಾಡುತ್ತಾನೆ ಎನ್ನುವ ಬಲವಾದ ನಂಬಿಕೆ ಇಟ್ಟುಕೊಳ್ಳುತ್ತಾರೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಹಲವಾರು ಫಲಕಗಳು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದವು. ಮೂಲ ಆಕರಗಳಾದ ಶಾಸನಗಳು, ಅವಶೇಷಗಳನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಲಾಯಿತು. ಪ್ರಾಗೈತಿಹಾಸಿಕ ಕಾಲದ ಪ್ರಾಚೀನ ನೆಲೆ, ದೇವಾಲಯ ಮತ್ತು ಮೂರ್ತಿಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವುಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಲಾಗಿದೆ. ಹಿಂದೆ ನಡೆದ ಅಧ್ಯಯನಗಳು ಹೆಚ್ಚಿನ ಸಮಗ್ರತೆಯನ್ನು ಪಡೆದಿರುವುದು ಕಡಿಮೆ ಎಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಇಂತಹ ಕೊರತೆಯನ್ನು ಸಾಧ್ಯವಾದಮಟ್ಟಿಗೆ ನೀಗಿಸಿಕೊಳ್ಳುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ. ಒಟ್ಟಾರೆ ಈ ಅಧ್ಯಯನವು ಕಾಗಿನೆಲೆ ಪರಿಸರದ ಸಾಂಸ್ಕೃತಿಕ ಚರಿತ್ರೆಯ ವೈವಿಧ್ಯಮಯ ಸ್ಥೂಲ ವಿಷಯವನ್ನು ಒಂದೆಡೆ ತಿಳಿಯಪಡಿಸಲು ತುಂಬ ಸಹಾಯಕವಾಗಿದೆ.

ಅನುಬಂಧಗಳು

ಗ್ರಂಥಋಣ

* ಅರ್ಪಣಾ ಕೂ.ಸ., ೧೯೯೯: **ದೇವಾಲಯ ವಾಸ್ತುಶಿಲ್ಪ ಪರಿಚಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಕಲಬುರ್ಗಿ ಎಂ.ಎಂ., ೧೯೭೫: **ಧಾರವಾಡ ಜಿಲ್ಲೆಯ ಶಾಸನ ಸೂಚಿ**, ಧಾರವಾಡ ಪ್ರಕಾಶನ, ಧಾರವಾಡ.
* **ಕನ್ನಡ ನಿಘಂಟು**(ಸಂ) ಪರಿಷ್ಕೃತ, ೨೦೦೧: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಕುಲಕರ್ಣಿ ಡಿ.ಜಿ., ೨೦೦೭-೨೦೦೮: **ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.
* ಗೋಪಾಲ ಬಾ.ರಾ., ೧೯೭೧: **ಬಾದಾಮಿ ಚಾಲುಕ್ಯರು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ಗೋಪಾಲ ಬಿ.ಆರ್., ೧೯೬೬: **ಕರ್ನಾಟಕ ಇನ್‌ಸ್ಕ್ರಿಪನ್ಸ್ ವ್ಯಾಲೂಮ್**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ಗೋಪಾಲ ಬಿ.ಆರ್., ೧೯೮೧: **ದಿ ಚಾಲುಕ್ಯ ಆಫ್ ಕಲ್ಯಾಣ ಆ್ಯಂಡ್ ಕಲಚೂರಿಗಳು**, ಧಾರವಾಡ.
* ಗೋಪಿನಾಥ ಟಿ.ಎ., ೧೯೮೫: **ಎಲಿಮಿಂಟ್ಸ್ ಆಫ್ ಹಿಂದೂ ಐಕನಾಗ್ರಾಫಿ**, ನ್ಯೂಡೆಲ್ಲಿ.
* ಜ್ಞಾನಾನಂದ ಜೆ., ೨೦೦೬: **ಕಶ್ಯಪ ಶಿಲ್ಪಶಾಸ್ತ್ರ(ಉತ್ತರಾರ್ಧ)**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.
* ಚನ್ನಕ್ಕ ಪಾವಟೆ, ೧೯೯೯: **ರಾಷ್ಟ್ರಕೂಟ ಸಾಮಂತ ಚಲ್ಲಕೇತನರು**, ಜ್ಞಾನಗಂಗಾ ಪ್ರಕಾಶನ, ಧಾರವಾಡ.
* ಚನ್ನಕ ಎಲಿಗಾರ, ೧೯೯೦: ಬಂಕಾಪುರ ಶೋಧ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

* ಚನ್ನಕ್ಕ ಪಾವಟೆ, ೧೯೯೮: **ಹಾನಗಲ್ ಕದಂಬರು,** ಜ್ಞಾನಗಂಗಾ ಪ್ರಕಾಶನ, ಧಾರವಾಡ.
* ಚಿದಾನಂದಮೂರ್ತಿ ಎಂ., ೧೯೬೬: **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* ಚಿದಾನಂದಮೂರ್ತಿ ಎಂ., ೧೯೭೫: **ವೀರಗಲ್ಲುಗಳು–ಮಾಸ್ತಿಕಲ್ಲುಗಳು,** ಬೆಂಗಳೂರು,
* ಜವರೇಗೌಡ ದೇ., ೨೦೦೧: **ಜಾನಪದ ಅಧ್ಯಯನ,** ಚೇತನ ಬುಕ್‌ಹೌಸ್, ಮೈಸೂರು.
* ತಿಪ್ಪೇರುದ್ರಸ್ವಾಮಿ ಎಚ್., ೨೦೧೦: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಕರ್ನಾಟಕ ಸರ್ಕಾರ, ಬೆಂಗಳೂರು.
* ದೇಸಾಯಿ ಪಿ.ಪಿ., ೧೯೩೭: **ಕರ್ನಾಟಕ ಇತಿಹಾಸ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ದೇಸಾಯಿ ಪಾಂಡುರಂಗರಾಯ, ೧೯೮೯: **ಕರ್ನಾಟಕದ ಕಲಚೂರಿಗಳು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ನರಸಿಂಹಮೂರ್ತಿ ಎ.ವಿ., ೧೯೮೪: **ಚಾಲುಕ್ಯ ವಾಸ್ತುಶಿಲ್ಪ ಪರಿಚಯ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
* ನಾಗರಾಜ ಡಿ.ಎಂ., ೨೦೧೨: **ಕಲ್ಯಾಣ ಚಾಲುಕ್ಯರ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಮೈಸೂರು.
* ನಾಯಕ ಹಾ.ಮಾ., ೨೦೦೫: **ಕನ್ನಡ ವಿಷಯ ವಿಶ್ವಕೋಶ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* ನಾಗಯ್ಯ ಜೆ.ಎಂ., ೧೯೯೫, **ಕಲಕೇರಿ,** ಬಸವೇಶ್ವರ ಜೀರ್ಣೋದ್ಧಾರ ಟ್ರಸ್ಟ್, ಕಲಿಕೇರಿ.
* ಬಸವರಾಜ ಕೆ.ಆರ್., ೧೯೬೬: **ಆಡ್ಮಿನಿಸ್ಟ್ರೇಟಿವ್ ಸಿಸ್ಟಮ್ ಅಂಡರ್ ದಿ ಚಾಲುಕ್ಯ ಅಫ್ ಕಲ್ಯಾಣ.**
* ಭಟ್ ವಿ.ಎನ್., ೨೦೦೭: **ಭಾರತೀಯ ಹಬ್ಬಗಳ ವೈಶಿಷ್ಟ್ಯ,** ವಿಶ್ವನಾಥ ಪ್ರಕಾಶನ, ಶಿವಮೊಗ್ಗ.
* ಭಟ್‌ಸೂರಿ ಕೆ.ಜಿ., ೨೦೦೯: **ಕರ್ನಾಟಕ ಶಾಸನ ಸಂಶೋಧನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಭೋಜರಾಜ ಪಾಟೀಲ, ೧೯೯೫: **ನಾಗರಖಂಡ–೭೦: ಒಂದು ಅಧ್ಯಯನ,** ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ.

* ಮಂಜುನಾಥ ಬೇವಿನಕಟ್ಟಿ, ೨೦೦೭: **ಭಾರತೀಯ ಹಬ್ಬಗಳ ವೈಶಿಷ್ಟ್ಯ**, ವಿಶ್ವನಾಥ ಪ್ರಕಾಶನ, ಶಿವಮೊಗ್ಗ.
* ಮಹದೇವ ಸಿ., ರಮೇಶನಾಯಕ, ವಾಸುದೇವನ್ ಸಿ.ಎಸ್., ೧೯೯೯: **ಕರ್ನಾಟಕ ದೇವಾಲಯಗಳ ಕೋಶ, ಹಾವೇರಿ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಮಹಾದೇವ ಸಿ., ೨೦೦೧: **ಕರ್ನಾಟಕ ಪುರಾತತ್ವ ಶೋಧ**, ಲಕ್ಷ್ಮೀ ಪ್ರಕಾಶನ, ಶ್ರೀರಂಗಪಟ್ಟಣ.
* ರಮೇಶ ಕೆ.ವಿ., ೧೯೮೪: **ಇಂಡಿಯನ್ ಎಪಿಗ್ರಫಿ**, ವ್ಯಾಲ್ಯೂಂ I, ಡೆಲ್ಲಿ.
* ರಾಮಚಂದ್ರರಾವ್ ಎಸ್.ಕೆ., ೧೯೭೫, **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ**, ಬೆಂಗಳೂರು.
* ಶಿವತಾರಕ ಕೆ.ಬಿ., ೧೯೯೧: **ಕರ್ನಾಟಕ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ಸೊಟ್ಟಮ್ಮನವರ ವಿ.ಜಿ., ೧೯೯೮: **ರಾಣಿಬೆನ್ನೂರು ಪ್ರದೇಶದ ದೇವಾಲಯಗಳು: ಒಂದು ಅಧ್ಯಯನ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ಸಂಗಪ್ಪಯ್ಯ ಎಸ್.ಕೊಡೇಕಲ್ಲಮಠ, ೨೦೧೧: **ಕಾಗಿನೆಲೆ ಸಂಗಮೇಶ್ವರ ದೇವರ ಕಿರುಪರಿಚಯ**, ಆರೋಡ್ ಪ್ರಕಾಶನ, ಕೊಡೇಕಲ್ಲು.
* ಸೂರ್ಯನಾಥ ಯು.ಕಾಮತ್, ೧೯೮೬: **ಧಾರವಾಡ ಜಿಲ್ಲಾ ಗ್ಯಾಸೆಟಿಯರ್**, ಕರ್ನಾಟಕ ಸರ್ಕಾರ, ಬೆಂಗಳೂರು.
* ಹೊರೆಯಾಲ ದೊರೆಸ್ವಾಮಿ, ೧೯೯೩: **ಹಳ್ಳಿ ಅಧ್ಯಯನ ಕಾಗಿನೆಲೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
* ಹಿರೇಮಠ ಬಿ.ಆರ್., ೧೯೭೬: ವೀರಗಲ್ಲುಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ., ೧೯೭೪: ಕನ್ನಡ ಶಾಸನ ಸಂಪದ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅಪ್ರಕಟಿತ ಪ್ರಬಂಧಗಳು

* ಕಾಂತರಾಜ್ ಎಚ್., **ಐಮಂಗಲ ಹೋಬಳಿ ಸಾಂಸ್ಕೃತಿಕ ಅಧ್ಯಯನ**, ಅಪ್ರಕಟಿತ ಎಂ.ಫಿಲ್.ನಿಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ವೇದಾವತಿ ಎಂ., **ಕನಕಟ್ಟೆ ಹೋಬಳಿ ಪರಿಸರದ ಸಾಂಸ್ಕೃತಿಕ ಅಧ್ಯಯನ**, ಅಪ್ರಕಟಿತ ಎಂ.ಫಿಲ್.ನಿಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

* ಯಲ್ಲಣ್ಣ ಕೆ. **ಹಾವೇರಿ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

* ರಮೇಶನಾಯಕ, **ಹಾವೇರಿ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ,** ಅಪ್ರಕಟಿತ ಎಂ.ಫಿಲ್.ನಿಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.


ಶಾಸನ ಸಂಪುಟಗಳು

1. Epigrahia Indica
2. Epigraphia Carnatica
3. Indian Antiquary
4. Karnataka Inscriptions
5. South Indian Inscriptions, Vol.IX, XI, XV, XVIII, XX

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ಊರು	ವಯಸ್ಸು	ವೃತ್ತಿ
೧	ಭರಮಪ್ಪ ಕಂಬಳಿ	ಕಾಸಂಬಿ	೭೫	ವ್ಯವಸಾಯ
೨	ಹನುಮಂತಪ್ಪ ಬನ್ನಿಹಟ್ಟಿ	ಹಳೇ ಕುಮ್ಮೂರು	೩೦	ಉದ್ಯೋಗಿ
೩	ಶೇಖರಯ್ಯ ಹೊಳಯ್ಯಮಠದ	ಚಿಕ್ಕಬಾಸೂರು	೭೭	ಅರ್ಚಕರು
೪	ಈಶ್ವರಪ್ಪ ಸಾಗರ	ಹಿರೇ ಅಣಜಿ	೫೫	ವ್ಯಾಪರಸ್ತರು
೫	ಮಲ್ಲಿಕಾರ್ಜುನ ದೊಡ್ಡಮನಿ	ಸೊಡಂಬಿ	೪೫	ವ್ಯಾಪರಸ್ತರು
೬	ಎಂ.ಜಿ.ವರದ	ಚಿಕ್ಕಣಜಿ	೫೫	ಕಿರಣಿ ಅಂಗಡಿ
೭	ಜಗದೇಶ ಕುರ್ಲಿ	ಮತ್ತೂರು	೩೫	ವ್ಯವಸಾಯ
೮	ಭರಮಗೌಡ ಎಸ್. ಎಂ.	ಫಳಪೂಜೆ	೭೦	ಗ್ರಾಮ ಸದಸ್ಯ
೯	ರುದ್ರಯ್ಯನವರು ಹಿರೇಮಠ	ಕಳಗೊಂಡ	೮೫	ಅರ್ಚಕರು
೧೦	ಆನಂದಪ್ಪ ಮಲ್ಲಾಡದ	ಕೆರವಡಿ	೫೮	ವ್ಯವಸಾಯ
೧೧	ಶಿವಲಿಂಗಯ್ಯ ಹೊಂಡದಮಠ	ಕಾಗಿನೆಲೆ	೪೫	ಅರ್ಚಕರು
೧೨	ಮಲ್ಲಪ್ಪ ಮಳತಳ್ಳಿ	ಬಡಮಲ್ಲಿ	೭೧	ವ್ಯವಸಾಯ
೧೩	ಜನಾರ್ದನ	ಕಾಗಿನೆಲೆ	೫೦	ಗ್ರಂಥಪಾಲಕರು
೧೪	ಶರಣಪ್ಪ ಕೊರಲಿ	ಕಾಗಿನೆಲೆಮಠ	೨೮	ಮರಿಸ್ವಾಮಿಗಳು

ಹೀರೆಹಳ್ಳಿಯ ರಾಮಲಿಂಗೇಶ್ವರ ದೇವಾಲಯ




೧ ಗರ್ಭ ಗುಡಿ

೨ ಅಂತರಾಳ

೩ ನವರಂಗ

ಕಾಗಿನೆಲೆಯ ಲಕ್ಷ್ಮೀ ನರಸಿಂಹಾಧಿಕೇಶವ ದೇವಾಲಯ



೧ ಗರ್ಭ ಗುಡಿ

೨ ಅಂತರಾಳ


೩ ನವರಂಗ

೪ ಮುಖಮಂಟಪ

ಕರ್ನಾಟಕ ನಕ್ಷೆ


ಮಹಾರಾಷ್ಟ್ರ
ಆಂಧ್ರಪ್ರದೇಶ
ಬೀದರ್
ಗುಲಬರ್ಗಾ
ಬಿಜಾಪುರ
ಯಾದಗಿರಿ
ಬಾಗಲಕೋಟೆ
ರಾಯಚೂರು
ಬೆಳಗಾವಿ
ಕೊಪ್ಪಳ
ಧಾರವಾಡ
ಗದಗ
ಬಳ್ಳಾರಿ
ಉತ್ತರ ಕನ್ನಡ
ಹಾವೇರಿ
ದಾವಣಗೆರೆ
ಚಿತ್ರದುರ್ಗ
ಶಿವಮೊಗ್ಗ
ಉಡುಪಿ
ಚಿಕ್ಕಮಗಳೂರು
ತುಮಕೂರು
ಚಿಕ್ಕಬಳ್ಳಾಪುರ
ಬೆಂಗಳೂರು
ಕೋಲಾರ
ದಕ್ಷಿಣ ಕನ್ನಡ
ಹಾಸನ
ಮಂಡ್ಯ
ರಾಮನಗರ
ಕೊಡಗು
ಮೈಸೂರು
ಚಾಮರಾಜನಗರ
ಅರಬ್ಬೀ ಸಮುದ್ರ
ತ ಮಿ ಳು ನಾ ಡು
ಉ
ಪ
ಪೂ
ದ

ಹಾವೇರಿ ಜಿಲ್ಲೆಯ ನಕ್ಷೆ


ಧಾರವಾಡ ಜಿಲ್ಲೆ
ಶಿಗ್ಗಾಂವಿ
ಸವಣೂರು
ಗದಗ ಜಿಲ್ಲೆ
ಉತ್ತರ ಕನ್ನಡ ಜಿಲ್ಲೆ
ಹಾನಗಲ್ಲ
ಹಾವೇರಿ
ಬಳ್ಳಾರಿ ಜಿಲ್ಲೆ
ಬ್ಯಾಡಗಿ
ರಾಣೆಬೆನ್ನೂರು
ಹಿರೇಕೆರೂರು
ಶಿವಮೊಗ್ಗ ಜಿಲ್ಲೆ
ದಾವಣಗೆರೆ ಜಿಲ್ಲೆ

ಬ್ಯಾಡಗಿ ತಾಲೂಕಿನ ನಕ್ಷೆ



ಸ್ಥಳಗಳು

೧. ಬ್ಯಾಡಗಿ
೨. ಮೋಟೇಬೆನ್ನೂರು
೩. ಕೆಂಗೊಂಡ
೪. ಕದರಮಂಡಲಗಿ
೫. ಕೆಡೇನೂರು
೬. ಮತ್ತೂರು
೭. ಕುಮ್ಮೂರು
೮. ಕಾಗಿನೆಲೆ
೯. ಮಲ್ಲೂರು
೧೦. ಹಿರೇಹಳ್ಳಿ
೧೧. ಹಿರೇಅಣಜಿ
೧೨. ಚಿಕ್ಕಬಾಸೂರು
೧೩. ಸೂಡಂಬಿ
೧೪. ಬಡಮಲ್ಲಿ
೧೫. ಘಾಳಪೂಜೆ
೧೬. ಮಾಸಣಗಿ
೧೭. ಅಂಗರಗಟ್ಟಿ

ಕಾಗಿನೆಲೆ. ನಕ್ಷೆ



ಛಾಯಾಚಿತ್ರಗಳು



ವೀರಭದ್ರಗುಡಿ, ಕಾಗಿನೆಲೆ



ಸಂಗಮೇಶ್ವರ ದೇವಾಲಯ, ಕಾಗಿನೆಲೆ



ದೀಪಸ್ಥಂಭ ವೀರಭದ್ರಗುಡಿ, ಕಾಗಿನೆಲೆ



ಸಂಗಮೇಶ್ವರ ಗದ್ದುಗೆ, ಕಾಗಿನೆಲೆ



ಕಾರ್ತೀಕೆಯ ಶಿಲ್ಪ ಕಾಗಿನೆಲೆ



ವೀರಭದ್ರನ ಮೂರ್ತಿ, ಕಾಗಿನೆಲೆ



ಲಕ್ಷ್ಮೀನರಸಿಂಹ ಆದಿಕೇಶವ, ಕಾಗಿನೆಲೆ



ವೀರಭದ್ರಗುಡಿಯ ಶಾಸನ, ಕಾಗಿನೆಲೆ



ಕಲ್ಮೇಶ್ವರ ದೇವಾಲಯ, ಕಾಗಿನೆಲೆ



ಕನಕದಾಸರ ಮೂರ್ತಿ, ಕಾಗಿನೆಲೆ


ಕಾಳಹಸ್ತೇಶ್ವರ ಮತ್ತು ವೀರಭದ್ರಗುಡಿ, ಕಾಗಿನೆಲೆ


ಲಕ್ಷ್ಮೀನರಸಿಂಹಮೂರ್ತಿ, ಕಾಗಿನೆಲೆ


ಕಲ್ಮೇಶ್ವರ ದೇವಾಲಯ, ಹಿರೇಅಣಜಿ



ಬಸವಣ್ಣ ದೇವಾಲಯ, ಕಾಸಂಬಿ



ರಾಮಲಿಂಗೇಶ್ವರ ದೇವಾಲಯ, ಹಳೇಕುಮೂರು



ನಿಷಿಧಿಗಲ್ಲು, ಹಿರೇಅಣಜಿ




ಈಶ್ವರ ದೇವಾಲಯ, ಹಿರೇಅಣಜಿ



ರಾಮಲಿಂಗೇಶ್ವರ ದೇವಾಲಯ, ಬಡಮಲ್ಲಿ



ಕಲ್ಲಪ್ಪನ ದೇವಸ್ಥಾನ, ತಡಸ




ಮಾರುತಿ ದೇವರು, ಸೂಡಂಬಿ



ರಾಮಲಿಂಗೇಶ್ವರ ದೇವಾಲಯ,
ಘಾಳಿಪೂಜೆ



ತಡಸದ ಕೋಟೆ, ತಡಸ



ಕಲ್ಮೇಶ್ವರ ದೇವಾಲಯದಲ್ಲಿರುವ ವೀರಗಲ್ಲುಗಳು, ಮತ್ತೂರು



ಮತ್ತೂರು ದೊಇಡ್ಡಕೆರೆ, ಮತ್ತೂರು



ಮಹಾಸತಿಗಲ್ಲುಗಳು, ಮತ್ತೂರು



ರಾಮಲಿಂಗದೇವಾಲಯ, ಹಿರೇಹಳ್ಳಿ



ಮರಿಮೂಕಪ್ಪಸ್ವಾಮಿಗಳು, ಗುಡ್ಡದಮಲ್ಲಪುರ



ಹಿರಿಯ ಮೂಕಪ್ಪಸ್ವಾಮಿಗಳು, ಗುಡ್ಡದಮಲ್ಲಪುರ



ಬಸವೇಶ್ವರ ದೇವಸ್ಥಾನ, ಕಳಗೊಂಡ



ಗವಿಸಿದ್ದೇಶ್ವರ ದೇವಾಲಯ, ಚಿಕ್ಕಬಾಸೂರು



ಕಲ್ಲೇಶ್ವರ ದೇವಾಲಯ, ಕೆರವಡಿ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ